ಸಂಪುಟ: 05 ಸಂಚಿಕೆ: 67 ಪುಟಗಳು: 08 ಬುಧವಾರ 21 ಮೇ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

**ಮುಂಜಾನೆ ಮಾತು**
ಶಿಕ್ಷಣದ ಉದ್ದೇಶವು ವ್ಯಕ್ತಿಯ ಪರಿಪೂರ್ಣತೆಯಾಗಿದೆ ಹೊರತು ಜೀವನಕ್ಕಾಗಿ ಉದ್ಯೋಗವನ್ನು ಪಡೆಯುವುದಲ್ಲ.

# ಉದಯ ವಾಹಿನಿ
UV ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಮಹಾಮಳೆಗೆ ಬೆಂಗಳೂರಿಗರು ಹೈರಾಣು, ರಸ್ತೆ, ಮನೆಯಲ್ಲೂ ನೀರು

• ಉದಯವಾಹಿನಿ, ಬೆಂಗಳೂರು

ಚರಂಡಿಯಲ್ಲಿ ಹರಿಯಬೇಕಿದ್ದ ಮಳೆ ನೀರೆಲ್ಲಾ ಮನೆ ತುಂಬಿದೆ. ಮನೆಯೊಳಗಿದ್ದ ಸೋಫಾ, ಫ್ರಿಡ್ಜ್, ಬಟ್ಟೆ ಬರೆ, ಅಡುಗೆ ಸಾಮಗ್ರಿಗಳೆಲ್ಲಾ ಕೆಸರುಮಯವಾಗಿದೆ. ರಾತ್ರಿ ನಿದ್ದೆ ಇಲ್ಲದೆ ಭಯದಿಂದ ಬದುಕು ಸಾಗಿಸಿದ್ದಾರೆ. ಹೇಳೋರಿಲ್ಲ, ಕೇಳೋರಿಲ್ಲ. ಹೌದು, ಇದು ಬೆಂಗಳೂರಿನ ಹಲವು ಕಡೆಗಳಲ್ಲಿ ಕಂಡು ಬಂದ ದೃಶ್ಯ. ಕಳೆದ ಮೂರು ದಿನಗಳಿಂದ ಬೆಂಗಳೂರಿನಲ್ಲಿ ಧಾರಾಕಾರ ಮಳೆಯಾಗಿದೆ. ಮಳೆಯ ಅಬ್ಬರಕ್ಕೆ ಹಲವು ತಗ್ಗು ಪ್ರದೇಶಗಳಲ್ಲಿ ನೀರು ನುಗ್ಗಿದೆ. ರಾಜಕಾಲುವೆಗಳಲ್ಲಿ ನೀರು ಹರಿಯದೆ ರಸ್ತೆಗೆ ನುಗ್ಗಿತ್ತಿದೆ. ಇದರಿಂದ ವಾಹನ ಸವಾರರು ಪರದಾಡುತ್ತಿದ್ದಾರೆ. ಜಯನಗರ ವಿಧಾನಸಭಾ ಕ್ಷೇತ್ರದ ಗುರಪಾನಪಾಳ್ಯ ಹಾಗೂ ಬಿಲ್ಮಿಲ್ಲಾ ನಗರದಲ್ಲಿ ಮಳೆಯಿಂದಾಗಿ ಸಾಕಷ್ಟು ಸಮಸ್ಯೆಗಳು ಸೃಷ್ಟಿಯಾಗಿವೆ. ನಿನ್ನೆ ರಾತ್ರಿ ಜೋರಾಗಿ ಮಳೆ ಬಂದಿದ್ದರಿಂದ ರಸ್ತೆಗಳಲ್ಲಿ ನೀರು ಧಾರಾಕಾರವಾಗಿ ಹರಿದಿದೆ. ಚರಂಡಿಯಲ್ಲಿ ನೀರು ಹರಿಯಲು ಸಮರ್ಪಕವಾದ ವ್ಯವಸ್ಥೆ ಮಾಡದೇ ಇದ್ದ ಹಿನ್ನೆಲೆಯಲ್ಲಿ ಈ ಸಮಸ್ಯೆ ಆಗಿದೆ. ಬೆಂಗಳೂರು ಮಹಾ ಮಳೆಗೆ ಒಂದೇ ಅಪಾರ್ಟ್ಮೆಂಟ್ ನಲ್ಲಿ ಇಬ್ಬರು ಬಲಿಯಾಗಿದ್ದಾರೆ. ಈ ಪೈಕಿ ಓರ್ವ ನೇಪಾಳ ಮೂಲದ 10 ವರ್ಷದ ಬಾಲಕ ದಿನೇಶ್. ಮೃತ ಬಾಲಕನ ಸಂಬಂಧಿ ದೇವಕುಮಾರ್ ಮಾತನಾಡಿ ''ಕಟ್ಟಡದ ಪಾರ್ಕಿಂಗ್ ನಲ್ಲಿ ನೀರು ತುಂಬಿತ್ತು. ಅದನ್ನು ಸರಿಪಡಿಸಲು ಕಟ್ಟಡ ಮಾಲೀಕರು ಬಂದಿದ್ದರು. ಈ ವೇಳೆ ತಮ್ಮ ಕುಟುಂಬದ ಬಾಲಕ ದಿನೇಶ್‌ನನ್ನು ಅವರು ಕರೆದಿದ್ದಾರೆ. ಆ ವೇಳೆ ವಿದ್ಯುತ್ ತಗುಲಿ ಇಬ್ಬರೂ ಮೃತಪಟ್ಟಿದ್ದಾರೆ'' ಎಂದು ವಿವರಿಸಿದರು. ಒಟ್ಟಿನಲ್ಲಿ ಬೆಂಗಳೂರು ಮಳೆ ಸಾಕಷ್ಟು ಸಮಸ್ಯೆಗಳಿಗೆ ಕಾರಣವಾಗಿದೆ. ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿಕೆ ಶಿವಕುಮಾರ್ ವಾರ್ ರೂಂಗೆ ತೆರಳಿ ವಸ್ತುಸ್ಥಿತಿ ಪರಿಶೀಲನೆ ನಡೆಸಿದ್ದರು.

ಆದರೆ ಇಂದು ಇಬ್ಬರೂ ವಿಜಯ ನಗರದ ಜಿಲ್ಲೆಯಲ್ಲಿ ಸಾಧನಾ ಸಮಾವೇಶದಲ್ಲಿ ಬ್ಯುಸಿಯಾಗಿದ್ದಾರೆ. ಬುಧವಾರ ನಗರದಲ್ಲಿ ಸಿಟಿ ರೌಂಡ್ಸ್ ಹೋಗುವ ಮೂಲಕ ಸಮಸ್ಯೆ ಪರಿಶೀಲನೆ ನಡೆಸಲಿದ್ದಾರೆ ಎಂದು ತಿಳಿದುಬಂದಿದೆ.

## ಸರ್ಕಾರಿ ಆಸ್ಪತ್ರೆಗಳಲ್ಲಿ ಜನ ಔಷಧಿ ಕೇಂದ್ರ ಕ್ಲೋಸ್!

• ಉದಯವಾಹಿನಿ, ಬೆಂಗಳೂರು

ದೇಶದ ಜನಸಾಮಾನ್ಯರಿಗೆ ಅಗತ್ಯ ಔಷಧಿಗಳನ್ನು ಶೇಕಡಾ 50ರಿಂದ 80ರಷ್ಟು ರಿಯಾಯತಿ ದರದಲ್ಲಿ ಒದಗಿಸುವ ಕೇಂದ್ರದ ಯೋಜನೆಯೇ ಪ್ರಧಾನಮಂತ್ರಿ ಭಾರತೀಯ ಜನ ಔಷಧಿ ಯೋಜನೆ. ಆದರೆ ಈ ಯೋಜನೆಯಡಿ ನಿರ್ಮಿಸಲಾದ ಜನ ಔಷಧಿ ಕೇಂದ್ರಗಳಿಗೆ ಇದೀಗ ರಾಜ್ಯ ಸರ್ಕಾರ ಕತ್ತರಿ ಹಾಕಿದೆ. ರಾಜ್ಯದ ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿರುವ ಜನೌಷಧಿ ಕೇಂದ್ರಗಳನ್ನು ಬಂದ್ ಮಾಡುವಂತೆ ರಾಜ್ಯ ಸರ್ಕಾರ ಆದೇಶ ಹೊರಡಿಸಿತ್ತು. ರೋಗಿಗಳು ಯಾವುದೇ ಔಷಧವನ್ನು ಆಸ್ಪತ್ರೆಯ ಹೊರಗೆ ಖರೀದಿಸದಂತೆ ನೋಡಿಕೊಳ್ಳುವುದು ಸರ್ಕಾರದ ಆದ್ಯತೆಯಾಗಿದೆ. ಆದ್ದರಿಂದ ಸರ್ಕಾರಿ ಆಸ್ಪತ್ರೆಗಳಲ್ಲಿ ಜನೌಷಧ ಕೇಂದ್ರಗಳನ್ನು ಸ್ಥಗಿತಗೊಳಿಸಲು ನಿರ್ಧರಿಸಲಾಗಿದೆ ಅಂತ ರಾಜ್ಯ ಆರೋಗ್ಯ ಇಲಾಖೆ ತಿಳಿಸಿತ್ತು. ರಾಜ್ಯ ಸರ್ಕಾರದ ನಿರ್ಧಾರಕ್ಕೆ ಬಿಜೆಪಿ ನಾಯಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಕುರಿತಂತೆ ಟ್ವೀಟ್ ಮಾಡಿರುವ ಸಂಸದ ತೇಜಸ್ವಿ ಸೂರ್ಯ, ಈ ನಿರ್ಧಾರ ಹಿಂಪಡೆಯುವಂತೆ ಆಗ್ರಹಿಸಿದ್ದಾರೆ. ರಾಜ್ಯದ ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿರುವ ಪ್ರಧಾನಮಂತ್ರಿ ಭಾರತೀಯ ಜನ ಔಷಧಿ ಕೇಂದ್ರಗಳನ್ನು ಕೂಡಲೇ ಸ್ಥಗಿತಗೊಳಿಸಲು ರಾಜ್ಯ ಸರ್ಕಾರ ಆದೇಶಿಸಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ ಶ್ರೀಪತಿ ಅವರು ಆದೇಶ ಹೊರಡಿಸಿದ್ದಾರೆ.

## ಬೆಂಗಳೂರು ಕಳಪೆ ರಸ್ತೆಯಿಂದಾದ ಸಮಸ್ಯೆಗೆ ರೂ. 50 ಲಕ್ಷದ ಮೊಕದ್ದಮೆ!

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನ ರಿಚ್‌ಮಂಡ್ ಟೌನ್‌ನ ನಿವಾಸಿಯಾದ 43 ವರ್ಷದ ಡಾ. ಕಿರಣ್ ಜೀವನ್, ರಸ್ತೆಗಳ ಕಳಪೆ ಸ್ಥಿತಿಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಿರುದ್ಧ ಕಾನೂನು ನೋಟಿಸ್ ಜಾರಿ ಮಾಡಿದ್ದಾರೆ.



ಬೆಂಗಳೂರಿನ ರಿಚ್‌ಮಂಡ್ ಟೌನ್‌ನ ನಿವಾಸಿಯಾದ 43 ವರ್ಷದ ಡಾ. ಕಿರಣ್ ಜೀವನ್, ರಸ್ತೆಗಳ ಕಳಪೆ ಸ್ಥಿತಿಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಿರುದ್ಧ ಕಾನೂನು ನೋಟಿಸ್ ಜಾರಿ ಮಾಡಿದ್ದಾರೆ. ರಸ್ತೆಗಳ ದುರ್ಬಲ ಸ್ಥಿತಿಯಿಂದ ತಮಗೆ ತೀವ್ರವಾದ ದೈಹಿಕ ನೋವು ಮತ್ತು ಮಾನಸಿಕ ಒತ್ತಡ ಉಂಟಾಗಿದೆ ಎಂದು ಡಾಕ್ಟರ್ ಆರೋಪಿಸಿದ್ದಾರೆ. ಅಷ್ಟೇ ಅಲ್ಲದೇ ಅವರು ತಮ್ಮ ವೈದ್ಯಕೀಯ ವೆಚ್ಚಗಳಿಗಾಗಿ 50 ಲಕ್ಷ ರೂಪಾಯಿ ಪರಿಹಾರ ಮತ್ತು ಕಾನೂನು ವೆಚ್ಚಗಳಿಗಾಗಿ 10,000 ರೂಪಾಯಿಗಳನ್ನು ನೀಡಬೇಕೆಂದು ಮನವಿ ಮಾಡಿದ್ದಾರೆ. ಡಾ. ಕಿರಣ್ ಜೀವನ್, ಪತ್ರಿಕೆಗಳಿಗೆ ನೀಡಿದ ಹೇಳಿಕೆಯಲ್ಲಿ, ಈ ಕಾನೂನು ಕ್ರಮವು ಕೇವಲ ನನ್ನ ವೈಯಕ್ತಿಕ ದೂರಲ್ಲ, ಬದಲಿಗೆ ರಸ್ತೆಗಳಿಂದಾಗಿ ಕುತ್ತಿಗೆ ಮತ್ತು ಬೆನ್ನು ನೋವಿನಿಂದ ಸದ್ದಿಲ್ಲದೆ ಬಳಲುತ್ತಿರುವ ಅನೇಕರಿಗೆ ಬೆಂಬಲವಾಗಿದೆ. ಇದು ತುರ್ತು ಗಮನ ಸೆಳೆಯಬೇಕಾದ ಸಾಮೂಹಿಕ ಸಮಸ್ಯೆಯಾಗಿದೆ, ಎಂದು ಹೇಳಿದ್ದಾರೆ.

# ಸಂಕಲ್ಪ ಸಮಾವೇಶದ ಠೇಂಕಾರ 6ನೇ ಗ್ಯಾರಂಟಿಗೂ ಶ್ರೀಕಾರ





ಮಾಜಿ ಪ್ರಧಾನಿ ಇಂದಿರಾಗಾಂಧಿ ಪ್ರತಿಮೆ ಲೋಕಾರ್ಪಣೆ

ಬಿಜೆಪಿ ಇದುವರೆಗೂ ಸ್ವಂತ ಶಕ್ತಿಯಿಂದ ಅಧಿಕಾರಕ್ಕೆ ಬರಲೇ ಇಲ್ಲ. ಆಪರೇಷನ್ ಕಮಲ ಮಾಡಿ ಅಧಿಕಾರಕ್ಕೆ ಬಂದದ್ದು ಬಿಟ್ಟರೆ ರಾಜ್ಯದಲ್ಲಿ ಬಿಜೆಪಿ ಇವತ್ತಿನವರೆಗೂ ಜನರಿಂದ ಆಯ್ಕೆಯೇ ಆಗಿಲ್ಲ ಎಂದರು. ಹಿಂದಿನ ಬಿಜೆಪಿ ಸರ್ಕಾರದ ಮೇಲೆ 40% ಕಮಿಷನ್ ಆರೋಪ ಇತ್ತು. ನಾವು ಇದರ ವಿರುದ್ಧ ಹೋರಾಟ ಮಾಡಿದೆವು, ಅಧಿಕಾರಕ್ಕೆ ಬಂದ ಬಳಿಕ ತನಿಖೆಗೆ ನಾಗಮೋಹನ್ ದಾಸ್ ಸಮಿತಿ ರಚಿಸಿದೆವು. ಸಮಿತಿ ಕೊಟ್ಟಿರುವ ವರದಿಯಲ್ಲಿ ಕಮಿಷನ್ ವ್ಯವಹಾರ ಸಾಬೀತಾಗಿದೆ ಎಂದರು. 1.22 ಕೋಟಿ ಕುಟುಂಬಗಳ ಯಜಮಾನಿಯರಿಗೆ ಗೃಹಲಕ್ಷ್ಮಿ ಯೋಜನೆಯಡಿ 2000 ರೂಪಾಯಿ ಕೊಡುತ್ತಿದ್ದೇವೆ. ಎಂದರು.

**ಬಿಜೆಪಿ ಸ್ವಂತ ಶಕ್ತಿಯಿಂದ ಅಧಿಕಾರಕ್ಕೆ ಬಂದೇ ಇಲ್ಲ**

**ನುಡಿದಂತೆ ನಡೆದಿದ್ದೇವೆ**

ನಾವು ಕೊಟ್ಟ ಭರವಸೆಗಳಲ್ಲಿ 142 ಭರವಸೆಗಳನ್ನು ಎರಡು ವರ್ಷದಲ್ಲಿ ಪೂರೈಸಿದ್ದೇವೆ, ಉಳಿದವುಗಳನ್ನು ಮುಂದಿನ ಮೂರು ವರ್ಷದಲ್ಲಿ ಈಡೇರಿಸುತ್ತೇವೆ ಎಂದು ಸಿ.ಎಂ ಭರವಸೆ ನೀಡಿದ್ದಾರೆ.

**ಕಾಂಗ್ರೆಸ್ ಅಧಿಕಾರದಲ್ಲಿರುವವರೆಗೂ ಗ್ಯಾರಂಟಿ ನಿಲ್ಲುವುದಿಲ್ಲ...**

• ಉದಯವಾಹಿನಿ, ವಿಜಯನಗರ

ನಮಗೆ ಅಧಿಕಾರ ನೀಡಿ ರಾಜ್ಯದ ಸೇವೆ ಮಾಡಲು ಆಶೀರ್ವಾದ ಮಾಡಿದ ಜನರ ಋಣ ತೀರಿಸಲು ನಮ್ಮ ಸರ್ಕಾರ ಆರನೆಯದಾಗಿ ಭೂ ಗ್ಯಾರಂಟಿ ಯೋಜನೆ ನೀಡುತ್ತಿದೆ. ಎಐಸಿಸಿ ಅಧ್ಯಕ್ಷರ ನಿರ್ದೇಶನದಂತೆ ಕಾಂಗ್ರೆಸ್ ಅಧಿಕಾರದಲ್ಲಿರುವವರೆಗೂ ಗ್ಯಾರಂಟಿ ಯೋಜನೆಗಳು ನಿಲ್ಲಿಸುವುದಿಲ್ಲ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು.

ರಾಜ್ಯ ಸರ್ಕಾರಕ್ಕೆ ಎರಡು ವರ್ಷ ತುಂಬಿರುವ ಹಿನ್ನೆಲೆಯಲ್ಲಿ ವಿಜಯನಗರ ಜಿಲ್ಲೆ ಹೊಸಪೇಟೆಯಲ್ಲಿ ನಡೆದ ಪ್ರಗತಿಯತ್ತ ಕರ್ನಾಟಕ ಸಮರ್ಪಣೆಯ ಸಂಕಲ್ಪ ಸಮಾವೇಶದಲ್ಲಿ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಮಾತನಾಡಿದರು. ನಾವಿಂದು ಎರಡು ವರ್ಷಗಳ ಸಂಭ್ರಮಾಚರಣೆ ಮಾಡಲು ಇಲ್ಲಿಗೆ ಬಂದಿಲ್ಲ. ಕರ್ನಾಟಕ ರಾಜ್ಯದ ಜನರ ಋಣ ತೀರಿಸಲು ಸಮರ್ಪಣೆಯ ಸಂಕಲ್ಪ ಕಾರ್ಯಕ್ರಮ ಮಾಡುತ್ತಿದ್ದೇವೆ. ಮಲ್ಲಿಕಾರ್ಜುನ ಖರ್ಗೆ ಅವರ ಅಧ್ಯಕ್ಷತೆಯಲ್ಲಿ ರಾಹುಲ್ ಗಾಂಧಿ ಅವರ ನಾಯಕತ್ವದಲ್ಲಿ 136 ಕ್ಷೇತ್ರಗಳಲ್ಲಿ ಶಾಸಕರನ್ನು ಆಯ್ಕೆ ಮಾಡಿ ನಮಗೆ ಆಶೀರ್ವಾದ ಮಾಡಿದಿರಿ. ನಿಮ್ಮ ಋಣ ತೀರಿಸಲು ಕೊಟ್ಟ ಮಾತಿನಂತೆ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡಿ, ಆರನೇ ಗ್ಯಾರಂಟಿಯಾಗಿ ಭೂ ಗ್ಯಾರಂಟಿ ಯೋಜನೆ ನೀಡುವ ಮೂಲಕ ನಮ್ಮ ಸರ್ಕಾರ ಇತಿಹಾಸ ಬರೆಯುತ್ತಿದೆ ಎಂದು ತಿಳಿಸಿದರು.

**ಆಸ್ತಿ ಡಿಜಿಟಲೀಕರಣ:** ಗ್ರಾಮೀಣ ಪ್ರದೇಶದ ಬಡ ಜನರು, ಕಳೆದ ಐವತ್ತು ವರ್ಷಗಳಿಂದ ಪಟ್ಟಾ ಖಾತೆ ಇಲ್ಲದವರಿಗೆ ಇಂದು ಈ ಯೋಜನೆ ಮೂಲಕ ದಾಖಲಾತಿ ನೀಡುತ್ತಿದ್ದೇವೆ. ಇಂತಹ ಐತಿಹಾಸಿಕ ಯೋಜನೆ ನೀಡಿರುವ ಕಂದಾಯ ಸಚಿವರಾದ ಕೃಷ್ಣ ಬೈರೇಗೌಡ ಹಾಗೂ ಅವರ ಅಧಿಕಾರಿಗಳ ಕಾರ್ಯಕ್ಕೆ ಅಭಿನಂದನೆ ಸಲ್ಲಿಸುತ್ತೇನೆ. ನಗರ ಪ್ರದೇಶಗಳಲ್ಲಿ ನಾನು, ಬೈರತಿ ಸುರೇಶ್, ರಹೀಂ ಖಾನ್ ಅವರು ಸೇರಿ ಎಲ್ಲಾ ಆಸ್ತಿಗಳನ್ನು ಡಿಜಿಟಲೀಕರಣಗೊಳಿಸಿ ಖಾತೆಗಳನ್ನು ಸರಿಪಡಿಸಿ ಜನರಿಗೆ ನೀಡುವ ಏಳನೇ ಗ್ಯಾರಂಟಿಯನ್ನು ಘೋಷಣೆ ಮಾಡುತ್ತಿದ್ದೇವೆ. ಕಾಂಗ್ರೆಸ್ ಶಕ್ತಿ, ದೇಶದ ಶಕ್ತಿ, ಕಾಂಗ್ರೆಸ್ ಇತಿಹಾಸ ದೇಶದ ಇತಿಹಾಸ. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಎಲ್ಲಾ ವರ್ಗದವರು ಅಧಿಕಾರಕ್ಕೆ ಬಂದಂತೆ ಎಂದು ಹೇಳಿದರು.

**ಭ್ರಷ್ಟಾಚಾರಕ್ಕೆ ಬೇಡಿ:** ನಮ್ಮ ಸರ್ಕಾರದ ಎರಡು ವರ್ಷಗಳ ಅವಧಿಯಲ್ಲಿ ಭ್ರಷ್ಟಾಚಾರಕ್ಕೆ ಬೇಡಿ ಹಾಕಿದೆ. ಇಂದಿರಾ ಗಾಂಧಿ ಅವರು ಈ ಜಿಲ್ಲೆಯಲ್ಲಿ ವಿಜಯನಗರ ಸ್ಟೀಲ್ ಆರಂಭಿಸಿದರು. ಸೋನಿಯಾ ಗಾಂಧಿ ಅವರು ಇಲ್ಲಿ ಬಂದು ವಿದ್ಯುತ್ ಶಕ್ತಿಯ ಆರ್ ಟಿಪಿಎಸ್ ಆರಂಭಿಸಿದರು. ರಾಹುಲ್ ಗಾಂಧಿ ಅವರು ನಮ್ಮ ರಾಜ್ಯದಲ್ಲಿ ಭಾರತ ಜೋಡೋ ಯಾತ್ರೆ ಮಾಡಿದ ಬಹುತೇಕ ಎಲ್ಲಾ ಕಡೆಗಳಲ್ಲಿ ಕಾಂಗ್ರೆಸ್ ಪಕ್ಷ ಗೆದ್ದಿಗೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ 6 ಸಂಸದರನ್ನು ಆಯ್ಕೆ ಮಾಡಿದ್ದೀರಿ. ನಮ್ಮ ಸರ್ಕಾರ ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗೆ ವರ್ಷಕ್ಕೆ 5 ಸಾವಿರ ಕೋಟಿ ನೀಡುತ್ತಿದ್ದೇವೆ ಎಂದರು. ವಿರೋಧ ಪಕ್ಷಗಳು ನಮ್ಮ ವಿರುದ್ಧ ಟೀಕೆಗಳನ್ನು ಮಾಡುತ್ತಿವೆ. ಟೀಕೆಗಳು ಸಾಯುತ್ತವೆ, ಕೆಲಸಗಳು ಉಳಿಯುತ್ತವೆ. ಅದಕ್ಕೆ ನಮ್ಮ ಯೋಜನೆಗಳೇ ಸಾಕ್ಷಿ. ರೈತರ ಬವಣೆ ನೀಗಿಸಲು ರಾಜ್ಯದ ಕೆರೆಗಳನ್ನು ತುಂಬಿಸಲು ಕಾರ್ಯಕ್ರಮ ರೂಪಿಸಲಾಗಿದೆ. ನವಲಿ ಅಣೆಕಟ್ಟು ಯೋಜನೆ ಮಾಡಲು ಚರ್ಚೆ ಮಾಡುತ್ತಿರುವ ಹೊತ್ತಿನಲ್ಲಿಯೇ. ನಮ್ಮ ಪಾಲಿನ 24 ಟಿಎಂಸಿ ನೀರನ್ನು ಏತ ನೀರಾವರಿ ಮೂಲಕ ಕೆರೆಗಳಿಗೆ ತುಂಬಿಸುವ ಕಾರ್ಯಕ್ರಮ ರೂಪಿಸಲಾಗಿದೆ. ಈ ವಿಚಾರವಾಗಿ ಆಂಧ್ರ ಪ್ರದೇಶ ರಾಜ್ಯದ ಜತೆ ಚರ್ಚೆ ಮಾಡಬೇಕಿದೆ. ಈ ಯೋಜನೆ ಮೂಲಕ ನಿಮ್ಮ ರಕ್ಷಣೆ ಮಾಡಲು ನಾವು ಬದ್ಧ ಎಂದು ಭರವಸೆ ನೀಡಿದರು.

## ಭೂ ಗ್ಯಾರಂಟಿ ಯೋಜನೆ ನೀಡುವ ಮೂಲಕ ಸರ್ಕಾರ ಇತಿಹಾಸ

ಚುನಾವಣೆ ವೇಳೆ ನಾವು ಕೊಟ್ಟಿದ್ದ ಭರವಸೆಗಳಲ್ಲಿ ಐದು ಗ್ಯಾರಂಟಿಗಳ ಜೊತೆಗೆ 142 ಭರವಸೆಗಳನ್ನು ಎರಡು ವರ್ಷಗಳಲ್ಲಿ ಪೂರೈಸಿದ್ದೇವೆ. ಮುಂದಿನ ಮೂರು ವರ್ಷಗಳಲ್ಲಿ ಉಳಿದ ಭರವಸೆ ಈಡೇರಿಸುತ್ತೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭರವಸೆ ನೀಡಿದರು. ಇನ್ನು ಎರಡು ವರ್ಷ ಪೂರೈಸಿದ ಸಂದರ್ಭಕ್ಕೆ ಕಂದಾಯ ಇಲಾಖೆ ಆಯೋಜಿಸಿದ್ದ ಸಮರ್ಪಣೆ ಸಂಕಲ್ಪ ಸಮಾವೇಶದಲ್ಲಿ 1,11,111 ಮಂದಿಗೆ ಹಕ್ಕುಪತ್ರ ವಿತರಣೆ ಮಾಡಿ, ಉಕ್ಕಿನ ಮಹಿಳೆ ಇಂದಿರಾಗಾಂಧಿಯವರ ಪ್ರತಿಮೆಯನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದರು. ಮೊದಲ ಬಾರಿ ಮುಖ್ಯಮಂತ್ರಿಯಾಗಿ ನಾವು ನೀಡಿದ್ದ 165 ಭರವಸೆಗಳಲ್ಲಿ 158 ಭರವಸೆಗಳನ್ನು ಈಡೇರಿಸಿದ್ದಲ್ಲದೆ, ಪ್ರಣಾಳಿಕೆಯಲ್ಲಿ ಘೋಷಿಸದ ಹೊಸದಾದ 30 ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೊಳಿಸಿದ್ದೇವೆ ಎಂದ ಸಿ.ಎಂ ಸಿದ್ದರಾಮಯ್ಯ ಅವರು ಬಿಜೆಪಿ ಏಕೆ ತಾನು ಕೊಟ್ಟಿದ್ದ ಭರವಸೆಗಳನ್ನು ಈಡೇರಿಸದೆ, ಜನರ ಎದುರು ಸುಳ್ಳು ಹೇಳಿಕೊಂಡು ತಿರುಗುತ್ತಿದೆ ಎಂದು ಕಿಡಿಕಾರಿದರು.

**1,11,111 ಕುಟುಂಬಗಳಿಗೆ ಹಕ್ಕುಪತ್ರ**

**142 ಭರವಸೆಗಳನ್ನು ಪೂರೈಸಿದ್ದೇವೆ**

### ಮಲ್ಲಿಕಾರ್ಜುನ ಖರ್ಗೆ ಆಕ್ರೋಶ

ಒಳಮೀಸಲಾತಿ ಕೊಡಲು ಸರ್ಕಾರ ಎಸ್‌ಸಿ ಸಮೀಕ್ಷೆ ನಡೆಸುತ್ತಿದೆ. ಒಳಮೀಸಲಾತಿಗೆ ನಾನೆಂದೂ ವಿರೋಧ ಮಾಡಿಲ್ಲ. ಆದರೆ ಲಿಂಗಾಯತ ಸಮುದಾಯದಲ್ಲಿರುವ ಬೇಡ ಜಂಗಮರನ್ನು ನೀವು ಎಸ್‌ಸಿ ಪಟ್ಟಿಗೆ ಸೇರಿಸುತ್ತಿದ್ದೀರಿ. ನಾಲ್ಕು ಲಕ್ಷ ಜನ ಎಸ್‌ಸಿ ಪಟ್ಟಿಗೆ ಹೇಗೆ ಬಂದರು' ಎಂದು ಸರ್ಕಾರವನ್ನು ಪ್ರಶ್ನಿಸಿದರು. 'ಲಿಂಗಾಯತರಲ್ಲಿನ ಬಡ ವರ್ಗದವರಿಗೆ ನಾವು ಅಗತ್ಯ ಬಿದ್ದರೆ ಪ್ರೋತ್ಸಾಹ ನೀಡೋಣ. ಆದರೆ ಬೇಡ ಜಂಗಮರು ತಾವು ಎಸ್ಸಿ ಎಂದು ತೋರಿಸುವುದು ತಪ್ಪು. ಸುಳ್ಳು ಜಾತಿ ಪತ್ರ ನೀಡುವವರನ್ನು ಒಳ ಹಾಕಬೇಕು. ಸರ್ಕಾರ ಇದರ ಬಗ್ಗೆ ಗಮನಹರಿಸಬೇಕು'. 'ಬೇಡ ಜಂಗಮರು ತಾವು ಎಸ್‌ಸಿ ಎಂದು ತೋರಿಸಿಕೊಳ್ಳುವುದು ಅಸ್ಪೃಶ್ಯ ಸಮುದಾಯಗಳ ವಿರೋಧಿ, ದಲಿತ ವಿರೋಧಿ ನಡೆ' ಎಂದರು.

ಕರ್ನಾಟಕ ಸರಕಾರ ಯಶಸ್ವಿಯಾಗಿ ಎರಡು ವರ್ಷವನ್ನು ಪೂರೈಸಿದ್ದು, ನಮ್ಮ ಕಾಂಗ್ರೆಸ್ ಸರಕಾರ ನಿಮ್ಮ ಹಣವನ್ನು ಮರಳಿ ನಿಮಗೆ ನೀಡುತ್ತಿದೆ. ನೀವು ಕಟ್ಟುವ ತೆರಿಗೆಯ ಹಣ ಮರಳಿ ನಿಮಗೆ ಸೇರಬೇಕು ಎಂಬುದು ನಮ್ಮ ಉದ್ದೇಶವಾಗಿತ್ತು. ಅದು ಯಶಸ್ವಿಯಾಗಿ ಈಡೇರಿದೆ ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ

**ಇನ್ನೂ 50,000 ಕುಟುಂಬಗಳಿಗೆ ಹಕ್ಕುಪತ್ರ ರಾಹುಲ್ ಗಾಂಧಿ ಘೋಷಣೆ**

ಹೇಳಿದ್ದಾರೆ. ರಾಜ್ಯದಲ್ಲಿ ಹಕ್ಕುಪತ್ರವಿಲ್ಲದಿರುವ ಲಕ್ಷಾಂತರ ಜನರಿದ್ದು, ಬುಡಕಟ್ಟು, ಪರಿಶಿಷ್ಟ ಕುಟುಂಬವಿರುವ ಗ್ರಾಮಗಳು ಕಂದಾಯ ಗ್ರಾಮಗಳಾಗಿರಲಿಲ್ಲ. ಹತ್ತಾರು ವರ್ಷಗಳಿಂದ ವಾಸಮಾಡುತ್ತಿದ್ದರೂ ಭೂಮಿ ಮಾಲಿಕತ್ವ ಇಲ್ಲದಿರುವುದು ಕಂಡು ಸಿಎಂ, ಡಿಸಿಎಂ ಅವರ ಗಮನಕ್ಕೆ ತರಲಾಗಿತ್ತು. ಹೀಗಾಗಿ ಕಂದಾಯ ಗ್ರಾಮವನ್ನಾಗಿಸಿ, ಹಕ್ಕು ಪತ್ರ ನೀಡುವ ಬಗ್ಗೆ ಚರ್ಚಿಸಿ ಸಂಕಲ್ಪ ಮಾಡಲಾಗಿತ್ತು. ಈಗ ಆರನೇ ಗ್ಯಾರಂಟಿಯಾಗಿ ಹಕ್ಕುಪತ್ರ ವಿತರಣೆಗೆ ಚಾಲನೆ ನೀಡಿದ್ದು ತಂದಿರುವುದು ಸಂತಸ ತಂದಿದೆ, ಎಂದರು.

ಕೇಂದ್ರ ಸರ್ಕಾರದಿಂದ ಪ್ರತೀ ವರ್ಷ ನಮಗೆ ನಷ್ಟ ಆಗುತ್ತಿದೆ. ನಾವು ಪ್ರತೀ ವರ್ಷ 4.5 ಲಕ್ಷ ಕೋಟಿ ತೆರಿಗೆ ರೂಪದಲ್ಲಿ ಕೊಟ್ಟರೆ ನಮಗೆ ವಾಪಾಸ್ ಬರುವುದು ಒಂದು ರೂಪಾಯಿಗೆ 14 ಪೈಸೆ ಮಾತ್ರ. ಇದರಿಂದ ಒಕ್ಕೂಟ ವ್ಯವಸ್ಥೆಯ ಘನತೆ ಹಾಳು ಮಾಡುತ್ತಿದ್ದಾರೆ ಎಂದರು. ಕೇಂದ್ರ ಪ್ರಾಯೋಜಿತ ಯೋಜನೆಗಳಿಗೂ ಕೇಂದ್ರದಿಂದ ಪೂರ್ತಿ ಅನುದಾನ ಬಂದೇ ಇಲ್ಲ. ಕೇಂದ್ರದ ಯೋಜನೆಗಳಿಗೆ ರಾಜ್ಯ ಸರ್ಕಾರ ರಾಜ್ಯದ ಪಾಲನ್ನು ಪೂರ್ತಿ ಕೊಟ್ಟಿದೆ. ಆದರೆ ಕೇಂದ್ರ ಸರ್ಕಾರ ತಮ್ಮ ಪಾಲನ್ನು ಕೊಡದೆ ಉಳಿಸಿಕೊಂಡು ಅನ್ಯಾಯ ಮಾಡುತ್ತಿದೆ. 15 ನೇ ಹಣಕಾಸು ಯೋಜನೆಯಲ್ಲಿ ರಾಜ್ಯಕ್ಕೆ ಕೇಂದ್ರ ಮಾಡಿರುವ ಅನ್ಯಾಯ ನಿಮಗೆಲ್ಲಾ ಗೊತ್ತೇ ಇದೆ. ಭದ್ರಾ ಮೇಲ್ದಂಡೆ ಯೋಜನೆಗೆ ಘೋಷಿಸಿದ್ದ 5300 ಕೋಟಿ ಹಣದಲ್ಲಿ ಬಿಡಿಗಾಸನ್ನೂ ಬಿಡುಗಡೆ ಮಾಡಲಿಲ್ಲ. ಭದ್ರಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆ ಎಂದು ಘೋಷಿಸುವುದಾಗಿ ಭರವಸೆ ನೀಡಿದರು. ಇದನ್ನೂ ಈಡೇರಿಸಲಿಲ್ಲ ಎಂದು ಟೀಕಿಸಿದರು.

**ಕೇಂದ್ರದಿಂದ ಪೂರ್ತಿ ಅನುದಾನ ಬಂದೇ ಇಲ್ಲ**

## ಕರ್ನಾಟಕದ 5 ಅಮೃತ್ ಭಾರತ್ ರೈಲು ನಿಲ್ದಾಣಗಳು ರೆಡಿ

• ಉದಯವಾಹಿನಿ, ಬೆಂಗಳೂರು

ಕರ್ನಾಟಕದಲ್ಲಿ 5 ರೈಲು ನಿಲ್ದಾಣಗಳನ್ನು ಅಮೃತ್ ಭಾರತ್ ಯೋಜನೆಯಡಿ ಅಭಿವೃದ್ಧಿಪಡಿಸಲಾಗಿದೆ. ಈ ನಿಲ್ದಾಣಗಳನ್ನು ಪ್ರಧಾನಿ ನರೇಂದ್ರ ಮೋದಿ ಅವರು ಮೇ 22 ಕ್ಕೆ ಉದ್ಘಾಟಿಸಲಿದ್ದಾರೆ.

ಆ ದಿನ ಪ್ರಧಾನಿ ಮೋದಿಯವರು ರಾಜಸ್ಥಾನದ ಬಿಕನೇರ್ ನಲ್ಲಿ ನಡೆಯುವ ಕಾರ್ಯಕ್ರಮದಲ್ಲಿ 103 ಅಮೃತ ನಿಲ್ದಾಣಗಳನ್ನು (ವಿಡಿಯೋ ಕಾನ್ಫರೆನ್ಸ್ ಮೂಲಕ) ಉದ್ಘಾಟಿಸಲಿದ್ದಾರೆ. ಆ ಪೈಕಿ ಕರ್ನಾಟಕದ 5 ರೈಲು ನಿಲ್ದಾಣಗಳು ಇವೆ ಎಂದು ನೈರುತ್ಯ ರೈಲ್ವೆ ಮಾಹಿತಿ ನೀಡಿದೆ.

**ಮೇ 22 ಪ್ರಧಾನಿ ಉದ್ಘಾಟನೆ**



**ಏನಿದು ಅಮೃತ್ ಭಾರತ್ ಯೋಜನೆ**

ದೇಶದ 18 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ 86 ಜಿಲ್ಲೆಗಳಲ್ಲಿರುವ ಈ 103 ಅಮೃತ ನಿಲ್ದಾಣಗಳನ್ನು ರೂ.1,100 ಕೋಟಿಗಳಿಗೂ ಹೆಚ್ಚು ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗಿದೆ. ಅಮೃತ ಭಾರತ ನಿಲ್ದಾಣ ಯೋಜನೆ (ಎ ಬಿ ಎಸ್ ಎಸ್) ಅಡಿಯಲ್ಲಿ ಪ್ರಾದೇಶಿಕ ವಾಸ್ತುಶಿಲ್ಪವನ್ನು ಪ್ರತಿಬಿಂಬಿಸಲು ಮತ್ತು ಪ್ರಯಾಣಿಕರ ಸೌಲಭ್ಯಗಳನ್ನು ಹೆಚ್ಚಿಸಲು 1,300ಕ್ಕೂ ಹೆಚ್ಚು ನಿಲ್ದಾಣಗಳನ್ನು ಆಧುನಿಕ ಸೌಲಭ್ಯಗಳೊಂದಿಗೆ ಪುನರಾಭಿವೃದ್ಧಿ ಮಾಡಲಾಗುತ್ತಿದೆ. ಭಾರತದಾದ್ಯಂತ ಪುನರಾಭಿವೃದ್ಧಿ ಮಾಡಲಾದ ಅಮೃತ ನಿಲ್ದಾಣಗಳು ಆಧುನಿಕ ಮೂಲಸೌಕರ್ಯವನ್ನು ಸಾಂಸ್ಕೃತಿಕ ಪರಂಪರೆಯೊಂದಿಗೆ ಸಂಯೋಜಿಸುತ್ತವೆ, ದಿವ್ಯಾಂಗ ಸ್ನೇಹಿ ಸೌಲಭ್ಯಗಳು ಸೇರಿದಂತೆ ಪ್ರಯಾಣಿಕ ಕೇಂದ್ರಿತ ಸೌಲಭ್ಯಗಳು ಮತ್ತು ಪ್ರಯಾಣದ ಅನುಭವವನ್ನು ಹೆಚ್ಚಿಸಲು ಸುಸ್ಥಿರ ಅಭ್ಯಾಸಗಳನ್ನು ಒಳಗೊಂಡಿವೆ.

ಕರ್ನಾಟಕದ 5 ಅಮೃತ್ ಭಾರತ್ ರೈಲು ನಿಲ್ದಾಣಗಳು: • ಮುನಿರಾಬಾದ್ ರೈಲು ನಿಲ್ದಾಣ • ಗೋಕಾಕ್ ರಸ್ತೆ ರೈಲು ನಿಲ್ದಾಣ (ಬೆಳಗಾವಿ) ರೈಲು ನಿಲ್ದಾಣ ಬಾಗಲಕೋಟೆ ರೈಲು ನಿಲ್ದಾಣ • ಗದಗ ಜಂಕ್ಷನ್ • ಧಾರವಾಡ ರೈಲು ನಿಲ್ದಾಣ

# ಹಫೀಜ್ ಸಯೀದ್ ಸೇರಿ ಉಗ್ರರನ್ನು ಭಾರತಕ್ಕೆ ಕೊಡಿ

**• ಮೋಸ್ಟ್ ವಾಂಟೆಡ್ ಉಗ್ರರನ್ನೆಲ್ಲಾ ಹಸ್ತಾಂತರಿಸಿ! • ಪಾಕಿಸ್ತಾನವನ್ನು ಹೊಡೆದು ಹಾಕುವ ತಾಕತ್ತು ಇಂಡಿಯಾಗೆ ಇದೆ**

• ಉದಯವಾಹಿನಿ, ಹೊಸದಿಲ್ಲಿ

ಪಹಲ್ಗಾಮ್ ದಾಳಿಯ ನಂತರ ಭಾರತ ಹಾಗೂ ಪಾಕಿಸ್ತಾನದ ನಡುವೆ ಉಂಟಾಗಿದ್ದ ಉದ್ವಿಗ್ನತೆ ಈಗ ಸ್ವಲ್ಪ ತಣ್ಣಗಾಗಿದೆ. ಉಭಯ ದೇಶಗಳು ಕದನ ವಿರಾಮ ಮಾಡಿಕೊಂಡು, 100 ಗಂಟೆಗಳ ಸಂಘರ್ಷಕ್ಕೆ ಬ್ರೇಕ್ ನೀಡಿವೆ. ಇದರ ನಡುವೆಯೇ ಪಾಕಿಸ್ತಾನಕ್ಕೆ ಮತ್ತೊಂದು ಬಿಗ್ ಕಂಡಿಷನ್ ಅನ್ನು ಹಾಕಿದೆ. ಅಮೆರಿಕಕ್ಕೆ ಸಾಧ್ಯವಾಗುತ್ತೆ ಅಂದ್ರೇ ನಿಮಗೇಕೆ ಸಾಧ್ಯವಾಗಲ್ಲ ಎಂದು ಪಾಕ್ ಅನ್ನು ತರಾಟೆಗೆ ತೆಗೆದುಕೊಂಡಿದೆ. ಹಫೀಜ್ ಸಯೀದ್ ಸೇರಿ ಭಾರತಕ್ಕೆ ಬೇಕಾದ ಮೋಸ್ಟ್ ವಾಂಟೆಡ್ ಉಗ್ರರನ್ನು ನಮಗೆ ಹಸ್ತಾಂತರ ಮಾಡಿ, ನಾವು ಸುಮ್ಮನಾಗ್ತೀವಿ ಇಲ್ಲದಿದ್ದರೆ ನಿಮಗೆ ಬಿಟ್ಟಿದ್ದು ಎಂಬ ಎಚ್ಚರಿಕೆಯನ್ನು ಭಾರತದ ರಾಯಭಾರಿ ಪಾಕಿಸ್ತಾನಕ್ಕೆ ನೀಡಿದ್ದಾರೆ. ಇದೇ ವೇಳೆ ಸಂಪೂರ್ಣ ಪಾಕಿಸ್ತಾನವನ್ನು ಹೊಡೆದು ಹಾಕುವ ತಾಕತ್ತು ಇಂಡಿಯಾಗೆ ಇದೆ, ಬದುಕುಳಿಯಲು ಬಿಲಗಳನ್ನು ಹುಡುಕಬೇಕಾಗುತ್ತದೆ ಎಂದು ಭಾರತದ ಏರ್ ಡಿಫೆನ್ಸ್ ಸಿಸ್ಟಮ್ ಡೈರೆಕ್ಟರ್ ಜನರಲ್ ಹೇಳಿರುವುದು ಕೂಡ ಪಾಕಿಸ್ತಾನವನ್ನು ನಡುಗುವಂತೆ ಮಾಡಿದೆ.

ಹೌದು, ಪಹಲ್ಗಾಮ್, ಪುಲ್ವಾಮಾ, ಮುಂಬೈ ದಾಳಿ ಸೇರಿ ಭಾರತದಲ್ಲಿ ರಕ್ತದೋಕುಳಿಯನ್ನು ನಡೆಸಿರುವ ಉಗ್ರರ ವಿರುದ್ಧ ಭಾರತ ಈ ಬಾರಿ ಅಗ್ರೆಸ್ಸಿವ್ ಆಗಿ ಕಾರ್ಯಾಚರಣೆಗೆ ಇಳಿದಿದೆ. ಆಪರೇಷನ್ ಸಿಂಧೂರದ ಮೂಲಕ ಪಾಕಿಸ್ತಾನ ಹಾಗೂ ಪಿಒಕೆ ಒಳಗಡೆ ನುಗ್ಗಿ ಉಗ್ರರನ್ನು ಹೊಡೆದುರುಳಿಸಿದೆ. ಪಾಕಿಸ್ತಾನ ಸೇನೆ ಮಧ್ಯ ಬಂದಿದ್ದಕ್ಕೆ ಸದ್ಯಕ್ಕೆ ಉಗ್ರರ ವಿರುದ್ಧದ ಆಪರೇಷನ್‌ಗೆ ಭಾರತ ಬ್ರೇಕ್ ಹಾಕಿದೆ. ಇದರ ನಡುವೆ ಇಸ್ರೇಲ್‌ನಲ್ಲಿರುವ ಭಾರತದ ರಾಯಭಾರಿ ಜೆಪಿ ಸಿಂಗ್ ಪಾಕಿಸ್ತಾನಕ್ಕೆ ಎಚ್ಚರಿಕೆ ನೀಡಿದ್ದು, ಕಾರ್ಯಾಚರಣೆಗೆ ಬ್ರೇಕ್ ನೀಡಿದ್ದೇವೆಯೇ ಹೊರತು, ಪೂರ್ತಿ ನಿಲ್ಲಿಸಿಲ್ಲ ಎಂದಿದ್ದಾರೆ. ಅಮೆರಿಕದ ರೀತಿ ಪಾಕಿಸ್ತಾನವೂ ನಡೆದುಕೊಳ್ಳಲಿ, ಹಫೀಜ್ ಸಹೀದ್‌ನನ್ನು ಭಾರತಕ್ಕೆ ಹಸ್ತಾಂತರಿಸಲಿ. ಅಮೆರಿಕವೇ ಉಗ್ರರನ್ನು ಭಾರತಕ್ಕೆ ಹಸ್ತಾಂತರ ಮಾಡುತ್ತೆ ಎಂದರೆ, ಪಾಕಿಸ್ತಾನಕ್ಕೆ ಅದು ಯಾಕಾಗಲ್ಲ ಎಂದು ಪ್ರಶ್ನಿಸಿದ್ದಾರೆ. ಲಷ್ಕರೆ ತೊಯ್ಬಾದ ಮುಖ್ಯಸ್ಥ ಹಫೀಜ್ ಸಹೀದ್, ಸಾಜೀದ್ ಮೀರ್, ಜಾಕಿಹುರ್ ರೆಹಮಾನ್ ಲಖ್ವಿ ಸೇರಿ ಭಾರತಕ್ಕೆ ಬೇಕಿರುವ ಪ್ರಮುಖ ಉಗ್ರರನ್ನು ಭಾರತಕ್ಕೆ ಹಸ್ತಾಂತರಿಸಿ



ಎಂದಿದ್ದಾರೆ. ಈ ವೇಳೆ ಮುಂಬೈ ದಾಳಿಯ ಮಾಸ್ಟರ್ ಮೈಂಡ್ ತಹಾವುರ್ ರಾಣಾನನ್ನು ಅಮೆರಿಕ ಭಾರತಕ್ಕೆ ಹಸ್ತಾಂತರಿಸಿರುವುದನ್ನು ಪ್ರಸ್ತಾಪಿಸಿರುವ ಜೆಪಿ ಸಿಂಗ್ ಅಮೆರಿಕಕ್ಕೆ ಇದು ಸಾಧ್ಯವಾಗುತ್ತೆ ಎಂದರೆ ಪಾಕಿಸ್ತಾನಕ್ಕೆ ಇದು ಯಾಕೆ ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ನೀವು ಉಗ್ರರನ್ನು ನಮಗೆ ಕೊಟ್ಟಿಲ್ಲ ಅಂದ್ರೇ, ಉಗ್ರರು ಎಲ್ಲೇ ಇರಲಿ, ನಾವು ಹೋಗಿ ಅವರನ್ನು ಹೊಡೆದುರುಳಿಸುತ್ತೇವೆ. ಅವರ ಸೌಕರ್ಯಗಳನ್ನು ನಾಶ ಮಾಡಿಯೇ ಮಾಡುತ್ತೇವೆ. ಕಾರ್ಯಾಚರಣೆಗೆ ವಿರಾಮ ನೀಡಿದ್ದೇವೆಯೇ ಹೊರತು ಪೂರ್ತಿಯಾಗಿ ನಿಲ್ಲಿಸಿಲ್ಲ ಎಂದಿದ್ದಾರೆ.

ಸಾರ್ವಜನಿಕವಾಗಿ ಇಂತಹದ್ದೊಂದು ಬೇಡಿಕೆಯನ್ನು ಭಾರತದ ರಾಯಭಾರಿ ಇಟ್ಟಿರುವುದು ಭಯೋತ್ಪಾದಕರ ವಿರುದ್ಧ ಕ್ರಮ ಕೈಗೊಳ್ಳಲು ಪಾಕಿಸ್ತಾನದ ಮೇಲೆ ಅಂತರಾಷ್ಟ್ರೀಯ ಒತ್ತಡವನ್ನು ಹೆಚ್ಚಿಸುವ ಭಾರತದ ನಿರಂತರ ಪ್ರಯತ್ನಗಳ ಭಾಗವಾಗಿದೆ. ಮುಂಬೈ ದಾಳಿ ಸೇರಿ ಹಲವು ಪ್ರಕರಣಗಳಲ್ಲಿ ಭಾರತಕ್ಕೆ ಬೇಕಾಗಿರುವ ಹಫೀಜ್ ಸಹೀದ್‌ನನ್ನು ಹಸ್ತಾಂತರಿಸುವಂತೆ ಪಾಕಿಸ್ತಾನದ ಮೇಲೆ ನಿರಂತರವಾಗಿ ಭಾರತ ಒತ್ತಡ ಹಾಕುತ್ತಿದೆ. ಆದರೆ, ಪಾಕಿಸ್ತಾನ ಮಾತ್ರ ಕುಂಟು ನೆಪ ಹೇಳುತ್ತಾ ಹಫೀಜ್ ಸಹೀದ್‌ಗೆ ರಕ್ಷಣೆ ಕೊಡುತ್ತಿದೆ. ಹಫೀಜ್ ಸಯೀದ್‌ನನ್ನು ಅಂತರಾಷ್ಟ್ರೀಯ ಭಯೋತ್ಪಾದಕ ಎಂದು ಈಗಾಗಲೇ ಘೋಷಿಸಲಾಗಿದೆ.

### ಪಾಕ್‌ನವ್ರು ಬದುಕುಳಿಯಲು ಬಿಲ ಹುಡುಕಬೇಕಷ್ಟೇ!

ಭಾರತದ ವಾಯು ರಕ್ಷಣಾ ವ್ಯವಸ್ಥೆ ವಿಭಾಗದ ಮಹಾ ನಿರ್ದೇಶಕ ಲೆಫ್ಟಿನೆಂಟ್ ಜನರಲ್ ಸುಮರ್ ಇವಾನ್ ಡಿ ಕುನ್ಹಾ ಪಾಕಿಸ್ತಾನಕ್ಕೆ ದೊಡ್ಡ ಎಚ್ಚರಿಕೆಯನ್ನು ನೀಡಿದ್ದಾರೆ. ಭಾರತವು ಪಾಕಿಸ್ತಾನದ ವಿರುದ್ಧ ಎಲ್ಲಾ ರೀತಿಯಿಂದ ಸಮರ್ಥವಾಗಿದೆ. ಪಾಕಿಸ್ತಾನದ ಜನರಲ್ ಹೆಡ್ ಕ್ವಾರ್ಟರ್ ಅನ್ನು ಸ್ಥಳಾಂತರಿಸಿದರೂ, ಭಾರತವು ಅದರ ಮೇಲೆ ದಾಳಿ ಮಾಡುವ ಸಾಮರ್ಥ್ಯವನ್ನು ಹೊಂದಿದೆ. ಇಡೀ ಪಾಕಿಸ್ತಾನವೇ ನಮ್ಮ ರೇಂಜ್‌ನಲ್ಲಿದೆ. ಭಾರತದ ಬಳಿ ಪಾಕಿಸ್ತಾನವನ್ನು ಎದುರಿಸಲು ಸಾಕಷ್ಟು ಶಸ್ತ್ರಾಸ್ತ್ರಗಳಿವೆ. ಭಾರತವು ಪಾಕಿಸ್ತಾನದ ಯಾವುದೇ ಭಾಗಕ್ಕೆ ಗುರಿಯಿಡಲು ಸಮರ್ಥವಾಗಿದೆ. ಇಡೀ ಪಾಕಿಸ್ತಾನ ನಮ್ಮ ವ್ಯಾಪ್ತಿಯಲ್ಲಿದ್ದು, ಅವರು ಬದುಕಿ ಉಳಿಯಬೇಕೆಂದರೆ ಬಿಲ ಸೇರಬೇಕಷ್ಟೇ ಎಂದಿದ್ದಾರೆ. ಇದು ಪಾಕಿಸ್ತಾನದ ನಿದ್ದೆಗೆಡಿಸಿದೆ.

**ಈ ದಿನದ ದರ** ಪೆಟ್ರೋಲ್: 103.50 ₹/L ಡೀಸೆಲ್ : 90.03 ₹/L ಬಂಗಾರ: ₹9,502/Gram24ct ₹8,710/Gram22ct ಬೆಳ್ಳಿ: ₹97.00/Gram

## ಸಚಿವಾಲಯಕ್ಕೆ ಸಿಬ್ಬಂದಿ ನೇಮಕಾತಿಯಾಗಿ 3 ವರ್ಷಗಳ ನಂತರ ಹಗರಣದ ಆರೋಪ!

• ಉದಯವಾಹಿನಿ, ಬೆಂಗಳೂರು

ರಾಜ್ಯ ವಿಧಾನಸಭೆ ಸಚಿವಾಲಯದಲ್ಲಿ ಗ್ರೂಪ್ ಸಿ ಮತ್ತು ಡಿ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯ ಸುತ್ತಲೂ ಭ್ರಷ್ಟಾಚಾರದ ಆರೋಪಗಳು ಕೇಳಿಬಂದಿವೆ. ಖಾಲಿ ಹುದ್ದೆಗಳ ಬಗ್ಗೆ ಜಾಹೀರಾತು ಪ್ರಕಟಿಸಿ ಆಯ್ಕೆ ಪ್ರಕ್ರಿಯೆಯು ಬಹುತೇಕ ಮುಕ್ತಾಯಗೊಂಡ ಸುಮಾರು ಮೂರು ವರ್ಷಗಳ ನಂತರ ಈ ಆರೋಪಗಳು ಕೇಳಿ ಬಂದಿರುವುದು ಸಂಚಲನ ಮೂಡಿಸಿದೆ. ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಯಿಂದ ಬಂದ ಪ್ರಕರಣವನ್ನು ಉಲ್ಲೇಖಿಸಿ ಕೆಲವು ವ್ಯಕ್ತಿಗಳು ನೇಮಕಾತಿ ಪ್ರಕ್ರಿಯೆಯಲ್ಲಿನ ಅಕ್ರಮಗಳ ಬಗ್ಗೆ ಗಂಭೀರ ಕಳವಳ ವ್ಯಕ್ತಪಡಿಸಿದ್ದಾರೆ. ಏಜೆಂಟ್‌ಗಳು ಭರವಸೆ ನೀಡಿದ ಕೆಲಸಕ್ಕಾಗಿ ಹಣವನ್ನು ಪಾವತಿಸಲಾಗಿದೆ ಎಂದು ಆಕಾಂಕ್ಷಿಯೊಬ್ಬರು ಆರೋಪಿಸಿದರು. ಆಪಾದಿತ ವಹಿವಾಟಿಗೆ ಸಂಬಂಧಿಸಿದ ಇಬ್ಬರು ಅಧಿಕಾರಿಗಳು ಒಬ್ಬ ಪುರುಷ ಮತ್ತು ಮಹಿಳೆಯ ಬಗ್ಗೆ ಮಾಹಿತಿ ನೀಡಿದ್ದಾರೆ. ಈ ಸಂಬಂಧ ವಿಧಾನಸಭಾ ಸ್ಪೀಕರ್ ಯು.ಟಿ. ಖಾದರ್ ಅವರನ್ನು ಸಂಪರ್ಕಿಸಿದಾಗ, ಇದು ಗಂಭೀರ ಪ್ರಕರಣವಾಗಿದ್ದು, ತನಿಖೆ ಮಾಡದೆ ಇರಲು ಸಾಧ್ಯವಿಲ್ಲ. ದೂರುದಾರರು ನೇರವಾಗಿ ನನ್ನನ್ನು ಸಂಪರ್ಕಿಸಲಿ. ಭಾಗಿಯಾಗಿರುವ ಯಾವುದೇ ಅಧಿಕಾರಿಯನ್ನು ಸಂಪೂರ್ಣವಾಗಿ ತನಿಖೆ ಮಾಡಲಾಗುತ್ತದೆ ಎಂದು ಭರವಸೆ ನೀಡಿದ್ದಾರೆ.

## ಕನ್ನಡ ಬರಲ್ಲ, ಮಾತಾಡಲ್ಲ; ನಾನು ಮಾತಾಡೋದೇ ಹಿಂದಿ

• ಉದಯವಾಹಿನಿ, ಬೆಂಗಳೂರು

ರಾಜ್ಯ ರಾಜಧಾನಿ ಬೆಂಗಳೂರಿನಲ್ಲಿ ಮತ್ತೆ ಕನ್ನಡಿಗರಿಗೆ ಅವಮಾನವಾಗಿದ್ದು, ಬ್ಯಾಂಕ್ ಉದ್ಯೋಗಿಯೊಬ್ಬರು ಕನ್ನಡದಲ್ಲಿ ಮಾತನಾಡಲು ನಿರಾಕರಿಸಿದ್ದಾರೆ. ಬೆಂಗಳೂರಿನ ಸರ್ಜಾಪುರದ ಬಳಿಯ ಎಸ್ ಬಿಐ ಬ್ಯಾಂಕ್ಸ್ ಶಾಖೆಯಲ್ಲಿ ಈ ಘಟನೆ ನಡೆದಿದ್ದು, ಬ್ಯಾಂಕ್ ಸಿಬ್ಬಂದಿ ಮೊಂಡುತನದ ವರ್ತನೆಗೆ ಸಾಮಾಜಿಕ ಜಾಲತಾಣದಲ್ಲಿ ತೀವ್ರ ಆಕ್ಷೇಪ, ಆಕ್ರೋಶ ವ್ಯಕ್ತವಾಗತೊಡಗಿದೆ. ದಾಖಲಾಗಿರುವ ವಿಡಿಯೋ ಪ್ರಕಾರ ಇಲ್ಲಿನ ಮಹಿಳಾ ಸಿಬ್ಬಂದಿಯೊಬ್ಬರು ಹಲವು ವರ್ಷಗಳಿಂದ ಬೆಂಗಳೂರಿನಲ್ಲೇ ಇದ್ದರೂ ಗ್ರಾಹಕರೊಟ್ಟಿಗೆ ಕನ್ನಡದಲ್ಲಿ ಮಾತನಾಡಲು ನಿರಾಕರಿಸಿದ್ದಾರೆ. ಇದನ್ನು ಗ್ರಾಹಕರು ಪ್ರಶ್ನಿಸಿದ್ದಾರೆ. ಗ್ರಾಹಕರಿಗೂ ಮೊಂಡುತನದ ಉತ್ತರ ನೀಡಿರುವ ಸಿಬ್ಬಂದಿ, ನನಗೆ ಕನ್ನಡ ಬರುವುದಿಲ್ಲ, ನಾನು ಹಿಂದಿಯಲ್ಲೇ ಮಾತನಾಡುತ್ತೇನೆ ಎಂದು ಹೇಳಿದ್ದಾರೆ. ಕನ್ನಡಪರ ಹೋರಾಟಗಾರರು ಈ ವಿಡಿಯೋವನ್ನು ಹಂಚಿಕೊಂಡಿದ್ದು, ಬ್ಯಾಂಕ್‌ನ್ನು ಟ್ಯಾಗ್ ಮಾಡಿ ಉದ್ಧಟತನ ತೋರಿರುವ ಸಿಬ್ಬಂದಿ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದ್ದಾರೆ.

## ಬಸ್ ಚಕ್ರಕ್ಕೆ ಸಿಲುಕಿ ಮಹಿಳೆ ಸಾವು

• ಉದಯವಾಹಿನಿ, ಬೆಂಗಳೂರು

ಬಸ್‌ನಿಂದ ಇಳಿಯುವ ವೇಳೆ ಕೆಳಗೆ ಬಿದ್ದ ಮಹಿಳೆ ಚಕ್ರಕ್ಕೆ ಸಿಲುಕಿ ಮೃತಪಟ್ಟಿರುವ ಘಟನೆ ಬ್ಯಾಟರಾಯನಪುರ ಸಂಚಾರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ಪೀಣ್ಯ ಎರಡನೇ ಹಂತದ ಹೆಗ್ಗನಹಳ್ಳಿಯ 12ನೇ ಕ್ರಾಸ್ ನಿವಾಸಿ ಕೃಷ್ಣವೇಣಿ (58) ಮೃತ ಮಹಿಳೆ. ಎರಡು ತಿಂಗಳಿನಿಂದ ಕೃಷ್ಣವೇಣಿ ಅವರು ಕುಟುಂಬದವರ ಜತೆ ನಗರದಲ್ಲಿ ವಾಸ ಮಾಡುತ್ತಿದ್ದರು. ಸಂಬಂಧಿಕರೊಬ್ಬರ ಅಂತ್ಯಕ್ರಿಯೆಗಾಗಿ ತಮಿಳುನಾಡಿಗೆ ಹೋಗಿ ಕಾರ್ಯ ಮುಗಿಸಿಕೊಂಡು ರಾತ್ರಿ ಬಸ್ ಹತ್ತಿದ್ದಾರೆ. ಬಸ್ ಬೆಳಗಿನ ಜಾವ 4.30ರ ಸುಮಾರಿಗೆ ಮೈಸೂರು ರಸ್ತೆಯ ಸ್ಯಾಟಲೈಟ್ ಬಸ್ ನಿಲ್ದಾಣದ ತಮಿಳುನಾಡು ಪ್ಲಾಟ್‌ಫಾರ್ಮ್‌ಗೆ ಬಂದು ನಿಂತಿದೆ. ಆಗ ಮಳೆ ಬರುತ್ತಿತ್ತು. ಕೃಷ್ಣವೇಣಿ ಅವರು ಬಸ್ ಇಳಿದು ಯಾವ ಕಡೆ ಹೋಗಬೇಕು ಎಂದು ಯೋಚಿಸುತ್ತಿರುವಾಗ ಏಕಾಏಕಿ ಬಸ್ ಚಲಿಸಿದ್ದರಿಂದ ಹಿಂಬದಿ ಚಕ್ರಕ್ಕೆ ಸಿಲುಕಿ ಮೃತಪಟ್ಟಿದ್ದಾರೆ. ಕೃಷ್ಣವೇಣಿ ಮನೆಗೆ ಬಾರದಿದ್ದಾಗ ಕುಟುಂಬದವರು ಮೊಬೈಲ್‌ಗೆ ಕರೆ ಮಾಡಿದ್ದಾರೆ. ಅಪಘಾತದ ಸ್ಥಳದಲ್ಲಿ ಬಿದ್ದಿದ್ದ ಮೊಬೈಲ್ ಕರೆ ಸ್ವೀಕರಿಸಿದ ಸಾರ್ವಜನಿಕರೊಬ್ಬರು ಸಾವಿನ ವಿಷಯ ತಿಳಿಸಿದ್ದಾರೆ. ಬ್ಯಾಟರಾಯನಪುರ ಸಂಚಾರಿ ಠಾಣೆ ಪೊಲಿಸರು ಸ್ಥಳಕ್ಕೆ ಭೇಟಿ ನೀಡಿ, ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

## ಹೊಸೂರು ರಸ್ತೆಯಲ್ಲಿ ಸ್ವಿಮ್ಮಿಂಗ್ ಪೂಲ್ ವಾಹನ ಸಂಚಾರ ಬಂದ್



ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನಲ್ಲಿ ಭಾರೀ ಮಳೆಯಾಗುತ್ತಿದ್ದು, ಅಪಾರ ಪ್ರಮಾಣದ ಮಳೆ ನೀರು ರಸ್ತೆಗೆ ಹರಿದು ಬರುತ್ತಿರುವ ಹಿನ್ನೆಲೆ ಹೊಸೂರು ರಸ್ತೆಯಲ್ಲಿ ವಾಹನ ಸಂಚಾರ ಸ್ಥಗಿತಗೊಳಿಸಲಾಗಿದೆ. ಸಿಲ್ಕ್ ಬೋರ್ಡ್ ಜಂಕ್ಷನ್‌ನಿದ ರೂಪೇನ ಅಗ್ರಹಾರವರೆಗೆ ಸಂಚಾರ ಸ್ಥಗಿತಗೊಳಿಸಲಾಗಿದೆ. ಅಲ್ಲದೇ ಸಂಚಾರ ಪೊಲೀಸರು ಎಲಿವೇಟೆಡ್ ಫ್ಲೈಓವರ್ ಕೂಡ ಬಂದ್ ಮಾಡಿದ್ದಾರೆ. ಪರ್ಯಾಯ ಮಾರ್ಗ ಬಳಸುವಂತೆ ನಗರ ಸಂಚಾರ ಪೊಲೀಸರು ವಾಹನ ಸವಾರರಿಗೆ ಸೂಚನೆ ನೀಡಿದ್ದಾರೆ.

**ಪ್ರಾಣಿಗಳ ರೋದನೆ:** ಸಾಯಿ ಲೇಔಟ್ ಜಲಾವೃತ ಪ್ರದೇಶದಿಂದ ಆಚೆ ಬರಲಾಗದೇ ಶ್ವಾನಗಳ ಪರದಾಡುತ್ತಿವೆ. ನೀರಿನಿಂದ ಆಚೆ ಬರಲಾಗದೇ, ಅತ್ತ ಊಟವೂ ಸಿಗದೇ ಮೂಕ ಪ್ರಾಣಿಗಳು ರೋದಿಸುತ್ತಿವೆ. ಜಲಾವೃತ ಪ್ರದೇಶದಲ್ಲಿ ಐದಾರು ನಾಯಿಗಳು ಸಿಲುಕಿಕೊಂಡು ಒದ್ದಾಡುತ್ತಿವೆ. ಇನ್ನು ಕೆಆರ್ ಮಾರುಕಟ್ಟೆ ಪಾರ್ಕಿಂಗ್ ಲಾಟ್‌ಗೂ ನೀರು ನುಗ್ಗಿದ್ದು, 50ಕ್ಕೂ ಹೆಚ್ಚು ವಾಹನಗಳು ಪಾರ್ಕಿಂಗ್ ಲಾಟ್‌ನಲ್ಲೇ ಲಾಕ್ ಆಗಿವೆ. ನೀರಲ್ಲಿ ಬೈಕ್‌ಗಳು ಕೆಟ್ಟು ನಿಂತಿದ್ದು, ಬೈಕ್‌ಗಳನ್ನು ಹೊರ ತೆಗೆಯಲಾಗದ ಸ್ಥಿತಿ ಎದುರಾಗಿದೆ.

# ಬೆಂಗಳೂರಿನ ಟ್ರಾಫಿಕ್, ಗುಂಡಿ, ರಸ್ತೆ ಸಮಸ್ಯೆಗೆ ಹದಗೆಟ್ಟ ಆರೋಗ್ಯ

### 43 ವರ್ಷದ ದಿವ್ಯಾ ಕಿರಣ್ ಎಂಬುವವರು 50 ಲಕ್ಷ ರೂಪಾಯಿ ಪರಿಹಾರ ಕೇಳಿ ಲೀಗಲ್ ನೋಟಿಸ್

• ಉದಯವಾಹಿನಿ, ಬೆಂಗಳೂರು

ಐಟಿ ಹಬ್, ಸಿಲಿಕಾನ್ ಸಿಟಿಯಲ್ಲಿ ಗುಂಡಿಗಳ ಸಮಸ್ಯೆ ತಪ್ಪಿದ್ದಲ್ಲ ಸದ್ಯ ಭಾರಿ ಮಳೆಯಿಂದ ರಸ್ತೆಗಳು ಜಲಾವೃತಗೊಂಡು ಸಂಕಷ್ಟಕೊಳಗಾಗಿದ್ದಾರೆ. ಗ್ರೇಟರ್ ಬೆಂಗಳೂರಿನಲ್ಲಿ ರಸ್ತೆ ಗುಂಡಿಗಳದ್ದೇ ದರ್ಬಾರ್ ಆಗಿದ್ದು, ಕಿತ್ತುಹೋಗಿರುವ ರಸ್ತೆಗಳನ್ನು ಸರಿಪಡಿಸಲು ಸರ್ಕಾರ ಮೀನಾಮೇಷ ಎಣಿಸುತ್ತಿರುವುದು ವಾಹನ ಸವಾರರಿಗೆ ಸಂಕಷ್ಟ ತಂದೊಡ್ಡಿದೆ. ಇದರಿಂದ ಬೇಸತ್ತ ಬೃಹತ್ ಬೆಂಗಳೂರು ಪಾಲಿಕೆ ಬಿಬಿಎಂಪಿ ವಿರುದ್ಧ ಬೇಸತ್ತ ವ್ಯಕ್ತಿಯೊಬ್ಬರು 50 ಲಕ್ಷ ರೂಪಾಯಿ ಪರಿಹಾರ ಲೀಗಲ್ ನೋಟಿಸ್ ನೀಡಿದ ಅಚ್ಚರಿ ಘಟನೆ ನಡೆದಿದೆ.

**ರಸ್ತೆಗಳಿಂದ ನನ್ನ ಆರೋಗ್ಯ ಹದಗೆಟ್ಟಿದೆ ಪರಿಹಾರ ಕೊಡಿ:** ಸಿಲಿಕಾನ್ ಸಿಟಿಯಲ್ಲಿ ರಸ್ತೆ ಗುಂಡಿಗಳ ಸಮಸ್ಯೆ ಒಂದೆಡೆಯಾದರೆ, ವೈಟ್ ಟ್ಯಾಪಿಂಗ್, ಭೂಮಿಯಡಿ ಕೇಬಲ್ ಅಳವಡಿಕೆ ಸೇರಿದಂತೆ ಇತರ ಕಾರ್ಯಗಳಿಗಾಗಿ ರಸ್ತೆ ಅಗೆಯುತ್ತಿರುವುದು ಜನಸಾಮಾನ್ಯರಿಗೆ ತೀವ್ರ ಸಮಸ್ಯೆ ಉಂಟುಮಾಡುತ್ತಿದೆ. ಕೆಲಸದೊತ್ತಡ ಒಂದೆಡೆಯಾದರೆ ಕೆಲಸಕ್ಕೆ ತೆರಳೋ ಮಧ್ಯೆ ಕಾಡುವ ಟ್ರಾಫಿಕ್ ಸಮಸ್ಯೆ ಜನರನ್ನು ಮಾನಸಿಕವಾಗಿ ಖಿನ್ನತೆಗೆ ಒಳಗಾಗುವಂತೆ ಮಾಡಿದೆ. ಇದನ್ನೇ ಆರೋಪಿಸಿ, 43 ವರ್ಷದ ದಿವ್ಯಾ ಕಿರಣ್ ಎಂಬುವವರು 50 ಲಕ್ಷ ರೂಪಾಯಿ ಪರಿಹಾರ ಕೇಳಿ ಲೀಗಲ್ ನೋಟಿಸ್ ನೀಡಿದ್ದಾರೆ.



ಉದಯವಾಹಿನಿ ಚಿತ್ರ

**ಸಿಟಿಯಲ್ಲಿ ರಸ್ತೆ ಗುಂಡಿಗಳ ಸಮಸ್ಯೆ**

**ಮಾನಸಿಕವಾಗಿ, ದೈಹಿಕವಾಗಿ ಸಮಸ್ಯೆ ಉಂಟಾಗಿದೆ:** ರಸ್ತೆ ಸರಿ ಇಲ್ಲದ ಕಾರಣ ಮಾನಸಿಕವಾಗಿ ತೊಂದರೆಯಾಗಿದೆ. ದೈಹಿಕವಾಗಿ ಆರೋಗ್ಯ ಹಾಳಾಗಿದೆ ಎಂದು ಅವರು ದೂರಿದ್ದಾರೆ. ಬೆಂಗಳೂರಿನಿಂದ ಹೆಚ್ಚೆಚ್ಚು ತೆರಿಗೆ ನೀಡಲಾಗುತ್ತದೆ. ಹೆಚ್ಚು ಬಜೆಟ್ ರಸ್ತೆ ನಿರ್ವಹಣೆಗೆ ಹೂಡಿಕೆ ಮಾಡಲಾಗುತ್ತದೆ ಹಾಗಿದ್ದಾಗ್ಯೂ ಮೂಲಭೂತ ಸೌಕರ್ಯಗಳನ್ನು ನಿರ್ವಹಿಸುವಲ್ಲಿ ಬಿಬಿಎಂಪಿ ವಿಫಲವಾಗಿದೆ. ದಿನನಿತ್ಯ ಹದಗೆಟ್ಟ ರಸ್ತೆಗಳಲ್ಲಿ ಸಂಚರಿಸಿ ನನ್ನ ಆರೋಗ್ಯದಲ್ಲಿ ಸಮಸ್ಯೆ ಉಂಟಾಗಿದೆ. ಇದರಿಂದ ವೈದ್ಯಕೀಯ ವೆಚ್ಚ, ನೋವು ಅನುಭವಿಸಿದ್ದಕ್ಕೆ ಪರಿಹಾರ ನೀಡುವಂತೆ ಕೋರಿದ್ದಾರೆ. ರಿಚ್ಮಂಡ್ ಟೌನ್ ನಿವಾಸಿಯಾಗಿರುವ ದಿವ್ಯಾ ಕಿರಣ್, ರಸ್ತೆಗಳ ಸಮಸ್ಯೆಯಿಂದಾಗಿ ಪದೇ ಪದೇ ಆಸ್ಪತ್ರೆಗೆ ಹೋಗುವಂತಾಗಿದೆ. ಕುತ್ತಿಗೆ, ಬೆನ್ನು ನೋವಿನಿಂದಾಗಿ ಐದು ಬಾರಿ ಮೂಳೆ ತಜ್ಞರನ್ನು ಭೇಟಿ ಮಾಡಿದ್ದಾರೆ. ನಾಲ್ಕು ಬಾರಿ ತುರ್ತು ಚಿಕಿತ್ಸೆಗಾಗಿ ಆಸ್ಪತ್ರೆಗೆ ಹೋಗಿದ್ದಾರೆ ಎಂದು ಹೇಳಲಾಗಿದೆ. ರಸ್ತೆಯಲ್ಲಿನ ಗುಂಡಿಗಳಿಂದ ಉಂಟಾದ ಆಘಾತದಿಂದ ಈ ಸಮಸ್ಯೆಗಳು ಉಂಟಾಗಿವೆ. ಈ ಬಗ್ಗೆ ಬಿಬಿಎಂಪಿಯಿಂದ ತಕ್ಷಣಕ್ಕೆ ಯಾವುದೇ ಪ್ರತಿಕ್ರಿಯೆ ಬಂದಿಲ್ಲ.

**ಮಳೆಗೆ ಬೆಂಗಳೂರಿನ ರಸ್ತೆಗಳು ಜಲಾವೃತ:** ಮಳೆಗಾಲದಲ್ಲಿ ಬೆಂಗಳೂರಿನ ರಸ್ತೆಗಳು ಕೆಸರುಮಯವಾಗಿರುತ್ತವೆ. ಇದರಿಂದ ವಾಹನ ಸವಾರರು ಪರದಾಡುವಂತಾಗುತ್ತದೆ. ಭಾನುವಾರ ರಾತ್ರಿ ಸುರಿದ ಭಾರಿ ಮಳೆಯಿಂದ ಸೋಮವಾರ ನಗರದ ಜನಜೀವನ ಅಸ್ತವ್ಯಸ್ತವಾಗಿತ್ತು. ಜನರು ಮನೆಗಳಿಂದ ಹೊರಬರಲು ಸಾಧ್ಯವಾಗದೆ, ದೋಣಿಗಳ ಸಹಾಯದಿಂದ ತೆರಳುವಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು.

**ದಿವ್ಯಾ ಕಿರಣ್ ಪರ ವಕೀಲರಿಂದ ನೋಟಿಸ್:** ದಿವ್ಯಾ ಕಿರಣ್ ಪರವಾಗಿ ವಕೀಲ ಕೆ.ವಿ.ಲವೀನ್ ಮೇ 14 ರಂದು ಬಿಬಿಎಂಪಿಗೆ ನೋಟಿಸ್ ನೀಡಿದ್ದಾರೆ.

ನನ್ನ ಕಕ್ಷಿದಾರರಿಗೆ ತೀವ್ರವಾದ ನೋವು ಕಾಣಿಸಿಕೊಂಡಿದೆ. ಹೀಗಾಗಿ ಅವರು 5 ಮೂಳೆ ತಜ್ಞರನ್ನು ಭೇಟಿ ಮಾಡಲು ಒತ್ತಾಯಿಸಲಾಯಿತು. ಅವರು ಸೇಂಟ್ ಫಿಲೋಮಿನಾ ಆಸ್ಪತ್ರೆಗೆ 4 ಬಾರಿ ತುರ್ತು ಭೇಟಿ ನೀಡಿದ್ದಾರೆ. ನೋವು ಕಡಿಮೆ ಮಾಡಲು ಚುಚ್ಚುಮದ್ದು ಮತ್ತು ಇತರ ವಿಧಾನಗಳನ್ನು ಅನುಸರಿಸಿದ್ದಾರೆ. ಇದರ ಜೊತೆಗೆ, ನೋವು ನಿಯಂತ್ರಿಸಲು ಅನೇಕ ಔಷಧಿಗಳನ್ನು ಮತ್ತು ನೋವು ನಿವಾರಕಗಳನ್ನು ತೆಗೆದುಕೊಳ್ಳುತ್ತಿದ್ದಾರೆ ಎಂದು ವಕೀಲರು ಹೇಳಿದ್ದಾರೆ.

**ನಿದ್ರೆ ಬಾರದೆ ನೋವಿಗೆ ರಾತ್ರಿಯೆಲ್ಲ ಕಿರುಚಾಟ**

**ರಸ್ತೆ, ಟ್ರಾಫಿಕ್ ಸಮಸ್ಯೆಯಿಂದಾಗಿ ಆರೋಗ್ಯದಲ್ಲಿ ಏರುಪೇರಾಗಿದ್ದು, ದಿನ ಉಂಟಾಗುವ ದೇಹದ ನೋವಿನಿಂದ ಕಿರುಚುವುದು, ನಿದ್ರೆ ಬಾರದೆ ಇರುವುದು, ಆತಂಕ ಮತ್ತು ಮಾನಸಿಕ ತೊಂದರೆ ಅನುಭವಿಸುತ್ತಿದ್ದಾರೆ. ಇದು ಅವರ ಯೋಗಕ್ಷೇಮ, ದೈನಂದಿನ ಚಟುವಟಿಕೆಗಳ ಮೇಲೆ ಪರಿಣಾಮ ಬೀರಿದೆ ಎಂದು ಅವರು ತಿಳಿಸಿದ್ದಾರೆ. ರಸ್ತೆಗಳು ಸರಿಯಿಲ್ಲದ ಕಾರಣ ದಿವ್ಯಾ ಕಿರಣ್ ಅವರಿಗೆ ಆಟೋ ಅಥವಾ ದ್ವಿಚಕ್ರ ವಾಹನಗಳಲ್ಲಿ ಪ್ರಯಾಣಿಸಲು ಸಾಧ್ಯವಾಗುತ್ತಿಲ್ಲ. ಇದರಿಂದ ಅವರ ಬೆನ್ನು ಮತ್ತು ಕುತ್ತಿಗೆ ನೋವು ಹೆಚ್ಚಾಗಿದೆ. ಕ್ಯಾಬ್ನಲ್ಲಿ ಪ್ರಯಾಣಿಸುವುದು ಸ್ವಲ್ಪ ಮಟ್ಟಿಗೆ ಉತ್ತಮವಾಗಿದೆ. ಆದರೆ, ಇದು ಅವರ ಓಡಾಟವನ್ನು ಮತ್ತು ಸ್ವಾತಂತ್ರ್ಯವನ್ನು ಕಡಿಮೆ ಮಾಡಿದೆ. ಇದರಿಂದ ವೈಯಕ್ತಿಕ ಮತ್ತು ವೃತ್ತಿಪರ ಕೆಲಸಗಳಿಗೆ ತೊಂದರೆಯಾಗಿದೆ ಎಂದು ಅವರ ವಕೀಲರು ಹೇಳಿದ್ದಾರೆ.**

## ಎನ್.ಎ.ಹ್ಯಾರಿಸ್ ಮತ್ತವರ ಬೆಂಬಲಿಗರು ಹಲ್ಲೆ ನಡೆಸಿದ ಆರೋಪ

• ಉದಯವಾಹಿನಿ, ಬೆಂಗಳೂರು

ಸ್ಥಳೀಯ ಸಮಸ್ಯೆಗಳ ಬಗ್ಗೆ ಧ್ವನಿ ಎತ್ತಿದ ಆಮ್ ಆದ್ಮಿ ಪಕ್ಷದ ಮುಖಂಡರೊಬ್ಬರ ಮೇಲೆ ಕಾಂಗ್ರೆಸ್ ಶಾಸಕ ಹಾಗೂ ಬಿಡಿಎ ಅಧ್ಯಕ್ಷ ಎನ್.ಎ.ಹ್ಯಾರಿಸ್ ಮತ್ತವರ ಬೆಂಬಲಿಗರು ಹಲ್ಲೆ ನಡೆಸಿದ ಆರೋಪವೊಂದು ಕೇಳಿ ಬಂದಿದೆ. ಈ ಸಂಬಂಧ ಎಎಪಿ ವಕ್ತಾರ ಅಶೋಕ್ ಮೃತ್ಯುಂಜಯ ಅವರು ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಪೋಸ್ಟ್ ಮಾಡಿದ್ದು, ಹ್ಯಾರಿಸ್ ಗೂಂಡಾಗಿರಿ ನಡೆಸಿದ್ದಾರೆಂದು ಆರೋಪಿಸಿದ್ದಾರೆ.

ಶಾಸಕ ಹ್ಯಾರಿಸ್ ದೊಮ್ಮಲೂರಿಗೆ ಭೇಟಿ ನೀಡಿದ್ದ ಸಂದರ್ಭ ದಲ್ಲಿ ಸಾರ್ವಜನಿಕ ಸಮಸ್ಯೆಗಳ ಬಗ್ಗೆ ಎಎಪಿ ಮುಖಂಡ ಶಿವಕುಮಾರ್ ನಾಯ್ಡು ಅವರು ಧ್ವನಿ ಎತ್ತಿದ್ದರು. ಈ ವೇಳೆ ಹ್ಯಾರಿಸ್ ಹಾಗೂ ಅವರ ಬೆಂಬಲಿಗರು ಹಲ್ಲೆ ನಡೆಸಿದ್ದಾರೆಂದು ಆರೋಪಿಸಿದ್ದಾರೆ. ಅಲ್ಲದೆ, ಹಲ್ಲೆ ನಡೆಸಿದ ಹ್ಯಾರಿಸ್ ಹಾಗೂ ಅವರ ಬೆಂಬಲಿಗರ ವಿರುದ್ಧ ಪ್ರಕರಣ ದಾಖಲಿಸುವಂತೆ ಪೊಲೀಸರಿಗೆ ಒತ್ತಾಯಿಸಿದ್ದಾರೆ. ಈ ನಡುವೆ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಎಎಪಿ ಕಾರ್ಯಾಧ್ಯಕ್ಷ ಸೀತಾರಾಮ್ ಗುಂಡಪ್ಪ ಅವರು, ಶಾಂತಿನಗರ



ಉದಯವಾಹಿನಿ ಚಿತ್ರ

ವಿಧಾನಸಭಾ ಕ್ಷೇತ್ರದ ದೊಮ್ಮಲೂರಿನಲ್ಲಿ ಆಮ್ ಆದ್ಮಿ ಪಕ್ಷದ ಮುಖಂಡ ಶಿವಕುಮಾರ್ ನಾಯ್ಡು ಅವರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿರುವ ಕಾಂಗ್ರೆಸ್ ಶಾಸಕ ಹಾಗೂ ಬಿಡಿಎ ಅಧ್ಯಕ್ಷ ಎನ್.ಎ.ಹ್ಯಾರಿಸ್ ಮತ್ತವರ ಬೆಂಬಲಿಗರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಬೇಕು ಎಂದು ಆಗ್ರಹಿಸಿದ್ದಾರೆ. ಈ ನಡುವೆ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಎಎಪಿ ಕಾರ್ಯಾಧ್ಯಕ್ಷ ಸೀತಾರಾಮ್ ಗುಂಡಪ್ಪ ಅವರು, ಶಾಂತಿನಗರ ವಿಧಾನಸಭಾ ಕ್ಷೇತ್ರದ ದೊಮ್ಮಲೂರಿನಲ್ಲಿ ಆಮ್ ಆದ್ಮಿ ಪಕ್ಷದ ಮುಖಂಡ ಶಿವಕುಮಾರ್ ನಾಯ್ಡು ಅವರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿರುವ ಕಾಂಗ್ರೆಸ್ ಶಾಸಕ, ಬಿಡಿಎ ಅಧ್ಯಕ್ಷ ಎನ್.ಎ.ಹ್ಯಾರಿಸ್ ಮತ್ತವರ ಬೆಂಬಲಿಗರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಬೇಕು ಎಂದು ಆಗ್ರಹಿಸಿದ್ದಾರೆ.

**ದೊಮ್ಮಲೂರಿನಲ್ಲಿ ಶಾಸಕರ ವಾರ್ಡ್ ಭೇಟಿ ಇತ್ತು. ಈ ವೇಳೆ ಸ್ಥಳೀಯ ಸಮಸ್ಯೆಗಳ ಮಾತನಾಡಿದ್ದಕ್ಕೆ ಶಿವಕುಮಾರ್ ನಾಯ್ಡು ಅವರ ಮೇಲೆ ಹ್ಯಾರಿಸ್, ಸ್ಥಳೀಯ ಮಾಜಿ ಕಾರ್ಪೊರೇಟರ್ ಶ್ರೀನಿವಾಸ್ ರೆಡ್ಡಿ ಮತ್ತಿತರ ಗೂಂಡಾಗಳು ಮಾರಣಾಂತಿಕ ಹಲ್ಲೆ ನಡೆಸಿದ್ದಾರೆ. ಹಲ್ಲೆ ನಡೆಸಿದವರನ್ನು ತಕ್ಷಣ ಬಂಧಿಸಿ ವಿಚಾರಣೆಗೆ ಒಳಪಡಿಸಬೇಕು ಎಂದು ಒತ್ತಾಯಿಸಿದ್ದಾರೆ.**

ಏಕಾಏಕಿ ಶಾಸಕರೇ ಈ ರೀತಿ ಹಲ್ಲೆ ನಡೆಸಿದ್ದು ನಾಗರಿಕ ಸಮಾಜ ತಲೆತಗ್ಗಿಸುವಂತಾಗಿದೆ. ಶಾಸಕರು, ಅವರ ಪುತ್ರನ ಗೂಂಡಾ ವರ್ತನೆಗಳ ಮೂಲಕ ಶಾಂತಿನಗರ ರಿಪಬ್ಲಿಕ್ ಮಾಡಲು ಎಎಪಿ ಎಂದಿಗೂ ಬಿಡುವುದಿಲ್ಲ. ಈಗಾಗಲೇ ಈ ಗೂಂಡಾ ಶಾಸಕರ ವಿರುದ್ಧ ನಾವು ಸಾಕಷ್ಟು ಹೋರಾಟ ಮಾಡಿದ್ದು ಇದು ನಿರಂತರವಾಗಿ ಮುಂದುವರಿಯುತ್ತದೆ ಎಂದು ಸ್ಪಷ್ಟಪಡಿಸಿದರು.

## ಶಾಸಕರ ಅಮಾನತು ಪ್ರಶ್ನಿಸಿ ನ್ಯಾಯಾಲಯದ ಮೊರೆ ಹೋಗಲು ಬಿಜೆಪಿ ನಿರ್ಧಾರ

• ಉದಯವಾಹಿನಿ, ಬೆಂಗಳೂರು

ವಿಧಾನಸಭೆಯಿಂದ 18 ಪಕ್ಷದ ಶಾಸಕರನ್ನು ಸ್ಪೀಕರ್ ಯು.ಟಿ. ಖಾದರ್ ಅಮಾನತುಗೊಳಿಸಿರುವುದನ್ನು ಪ್ರಶ್ನಿಸಿ ನ್ಯಾಯಾಲಯದ ಮೊರೆ ಹೋಗಲು ರಾಜ್ಯ ಬಿಜೆಪಿ ನಿರ್ಧರಿಸಿದೆ. ಹನಿ-ಟ್ರ್ಯಾಪಿಂಗ್ ಹಗರಣ ಮತ್ತು ಸರ್ಕಾರಿ ಗುತ್ತಿಗೆಗಳಲ್ಲಿ ಮುಸ್ಲಿಮರಿಗೆ ಶೇಕಡಾ 4 ರಷ್ಟು ಮೀಸಲಾತಿ ಕುರಿತು ಬಿಸಿಯಾದ ವಾದ ಮತ್ತು ಚರ್ಚೆ ನಡೆಯುತ್ತಿರುವಾಗಲೇ, ಮಾರ್ಚ್‌ನಲ್ಲಿ ಸ್ಪೀಕರ್ ಶಾಸಕರನ್ನು ಆರು ತಿಂಗಳ ಅವಧಿಗೆ ಅಮಾನತುಗೊಳಿಸಲಾಗಿತ್ತು.

ಶಾಸಕರು ಮತ್ತು ಬಿಜೆಪಿ ಪಕ್ಷದ ನಾಯಕರು ಅಮಾನತುಗೊಂಡಾಗಿನಿಂದ ಸ್ಪೀಕರ್ ಅವರನ್ನು ಸಂಪರ್ಕಿಸುತ್ತಿದ್ದರು ಯಾವುದೇ ಪ್ರಯೋಜನವಾಗಲಿಲ್ಲ. ಕಳೆದ ತಿಂಗಳು ರಾಜ್ಯಪಾಲರನ್ನು ಸಂಪರ್ಕಿಸಿ ತಮ್ಮ ಅಮಾನತು ರದ್ದುಗೊಳಿಸುವಂತೆ ಕೋರಿದರು.

ಅಮಾನತುಗೊಂಡ ಶಾಸಕರು ವಿಧಾನಸಭೆಯ ಕಲಾಪಗಳಿಗೆ ಹಾಜರಾಗುವುದನ್ನು ನಿಷೇಧಿಸಲಾಗಿದೆ ಮಾತ್ರವಲ್ಲದೆ ಸಮಿತಿಯ ಯಾವುದೇ ಸಭೆಗಳಲ್ಲಿ ಭಾಗವಹಿಸುವುದನ್ನು ನಿರ್ಬಂಧಿಸಲಾಗಿದೆ. ವಿಧಾನಸಭೆಯ ವಿರೋಧ ಪಕ್ಷದ ಉಪ ನಾಯಕ ಮತ್ತು ಬಿಜೆಪಿ ಶಾಸಕ ಅರವಿಂದ್ ಬೆಲ್ಲದ್ ಮಾತನಾಡಿ ಸ್ಪೀಕರ್‌ಗೆ ಒಂದಕ್ಕಿಂತ ಹೆಚ್ಚು ಅಧಿವೇಶನಗಳಿಗೆ ಶಾಸಕರನ್ನು ಅಮಾನತುಗೊಳಿಸುವ ಅಧಿಕಾರವಿಲ್ಲ ಎಂದು ಹೇಳಿದರು.

## ಪ್ರಶ್ನಿಸಿದ್ದಕ್ಕೆ ವ್ಯಕ್ತಿಯ ಮೇಲೆ ಮಾರಣಾಂತಿಕ ಹಲ್ಲೆ

• ಉದಯವಾಹಿನಿ, ಬೆಂಗಳೂರು

ಕಟ್ಟಡ ನಿರ್ಮಾಣ ಕಾರ್ಯಕ್ಕಾಗಿ ಅನಧಿಕೃತವಾಗಿ ರಸ್ತೆ ತಡೆ ನಡೆಸಿದ್ದನ್ನು ಪ್ರಶ್ನಿಸಿದ ವ್ಯಕ್ತಿಯೊಬ್ಬರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆಯೊಂದಿ ವಿಲ್ಸನ್ ಗಾರ್ಡನ್‌ನಲ್ಲಿ ಭಾನುವಾರ ನಡೆದಿದೆ.

ವಕೀಲ, ಕಬ್ಬನ್ ಪಾರ್ಕ್ ವಾಕರ್ಸ್ ಅಸೋಸಿಯೇಷನ್‌ನ ಅಧ್ಯಕ್ಷರೂ ಎಸ್. ಉಮೇಶ್ ಕುಮಾರ್ (61) ಹಲ್ಲೆಗೊಳಗಾಗಿರುವ ವ್ಯಕ್ತಿಯಾಗಿದ್ದಾರೆ. ಇದೀಗ ಬೌರಿಂಗ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆಂದು ತಿಳಿದುಬಂದಿದೆ. ಕುಮಾರ್ ಅವರು ಡೈರಿ ಸರ್ಕಲ್ ಬಳಿಯ ಎಸ್.ಆರ್ ನಗರದಲ್ಲಿ ಮದುವೆ ಸಮಾರಂಭಕ್ಕೆ ತೆರಳಿ, ಮನೆಗೆ ಮರಳುತ್ತಿದ್ದರು. ವಿಲ್ಸನ್ ಗಾರ್ಡನ್‌ನ 20ನೇ ಕ್ರಾಸ್‌ನಲ್ಲಿ ವಾಹನ ಚಾಲನೆ ಮಾಡುವಾಗ, ರಸ್ತೆ ತಡೆ ಉಂಟಾಗಿರುವುದನ್ನು ಗಮನಿಸಿದ್ದಾರೆ. ಈ ವೇಳೆ ವಾಹನದಿಂದ ಇಳಿದು ವಿಚಾರಿಸಿದಾಗ ಕಟ್ಟಡ ನಿರ್ಮಾಣ ಕಾರ್ಯದ ಕಾರಣ ರಸ್ತೆ ತಡೆ ಉಂಟಾಗಿದೆ ಎಂಬುದು ಅರಿವಿಗೆ ಬಂದಿದೆ. ಬಳಿಕ ಕಟ್ಟಡದ ಬಳಿ ನಿಂತಿದ್ದ ಜನರೊಂದಿಗೆ ಮಾತನಾಡಿ, ದಾರಿ ತೆರವುಗೊಳಿಸುವಂತೆ ಹೇಳಿದ್ದಾರೆ,

ಈ ವೇಳೆ ರಾತ್ರಿ 10 ಗಂಟೆಯವರೆಗೆ ಕಾಯುವಂತೆ ಹೇಳಿದ್ದಾರೆ. ಈ ವೇಳೆ ಯಾವುದೇ ಖಾಸಗಿ ನಿರ್ಮಾಣ ಕಾರ್ಯಕ್ಕಾಗಿ ರಸ್ತೆ ತಡೆ ನಡೆಸಬಾರದು ಎಂದು ಕುಮಾರ್ ಹೇಳಿದ್ದು, ಒಂದು ಗುಂಪು ಅವರ ಮೇಲೆ ಹಲ್ಲೆ ನಡೆಸಿತು ಎಂದು ಕುಮಾರ್ ಅವರು ಹೇಳಿದ್ದಾರೆ. ಪ್ರಕರಣ ತನಿಖೆಯಲ್ಲಿದೆ. ಕುಮಾರ್ ಇಬ್ಬರು ಆರೋಪಿಗಳ ಫೋಟೋ ಹಂಚಿಕೊಂಡಿದ್ದಾರೆ.

ಘಟನೆಯ ಸಮಯದಲ್ಲಿ ಅವರು ಒಬ್ಬಂಟಿಯಾಗಿದ್ದರು. ಯಾವುದೇ ಪ್ರಚೋದನೆಯಿಲ್ಲದೆ ದಾಳಿ ಮಾಡಿದ್ದಾರೆ. ಎಲ್ಲಾ ಆರೋಪಿಗಳು 30 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿದ್ದಾರೆಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.



**ಕಟ್ಟಡ ನಿರ್ಮಾಣ ಕಾರ್ಯ**

**ಗುಂಪಿನಲ್ಲಿದ್ದ ಒಬ್ಬ ಆರೋಪಿ ಕಬ್ಬಿಣದ ರಾಡ್‌ನಿಂದ ಹಲ್ಲೆ ನಡೆಸಿದ, 6 ಮಂದಿ ಆರೋಪಿಗಳ ಪೈಕಿ ಓರ್ವ ವ್ಯಕ್ತಿಯ ಪರಿಚಯ ನನಗಿದೆ. ಏಕೆಂದರೆ ಆತ ಅದೇ ಪ್ರದೇಶದ ನಿವಾಸಿಯಾಗಿದ್ದಾನೆ. ಕಟ್ಟಡ ನಿರ್ಮಾಣದ ಗುತ್ತಿಗೆಯನ್ನು ಆತ ಪಡೆದುಕೊಂಡಿದ್ದಾನೆ. ಘಟನೆ ವೇಳೆ ಸ್ಥಳದಲ್ಲಿ ಸಾಕಷ್ಟು ಜನರಿದ್ದರೂ ಮೂಕ ಪ್ರೇಕ್ಷಕರಂತೆ ಇದ್ದರು. ಯಾರೊಬ್ಬರೂ ನೆರವಿಗೆ ಬರಲಿಲ್ಲ, ಬಳಿಕ ನಾನೇ ಪೊಲೀಸ್ ನಿಯಂತ್ರಣ ಕೊಠಡಿಗೆ ಕರೆ ಮಾಡಿದೆ. ಗಸ್ತು ವಾಹನ ಸ್ಥಳಕ್ಕೆ ಬಂದಿತು. ಆಡುಗೋಡಿ ಪೊಲೀಸ್ ಠಾಣೆಗೆ ದೂರು ನೀಡುವಂತೆ ತಿಳಿಸಿದರು. ಬಳಿಕ ನನಗೆ ತಲೆ ಸುತ್ತಲು ಆರಂಭವಾಯಿತು. ಕೂಡಲೇ ಬೌರಿಂಗ್ ಆಸ್ಪತ್ರೆಗೆ ತೆರಳಿದ್ದೆ ಎಂದು ತಿಳಿಸಿದ್ದಾರೆ.**

## ಮೆಟ್ರೋ ರೈಲು ಸಂಪರ್ಕ ಅಗತ್ಯ

• ಉದಯವಾಹಿನಿ, ಬೆಂಗಳೂರು

ತುಮಕೂರು-ಬೆಂಗಳೂರು ಮೆಟ್ರೋ ರೈಲು ಸಂಪರ್ಕ ರಾಜ್ಯ ರಾಜಧಾನಿ ಬೆಂಗಳೂರು ಮೇಲಿನ ಒತ್ತಡವನ್ನು ಕಡಿಮೆ ಮಾಡುತ್ತದೆ ಎಂದು ತುಮಕೂರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಜಿ. ಪರಮೇಶ್ವರ್ ಅವರು ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ರಾಜಧಾನಿಯ ಮೇಲೆ ಹೆಚ್ಚುತ್ತಿರುವ ಒತ್ತಡವನ್ನು ಕಡಿಮೆ ಮಾಡಲು ಮತ್ತು ತುಮಕೂರಿನಲ್ಲಿ ಅಭಿವೃದ್ಧಿ ಚಟುವಟಿಕೆಗಳನ್ನು ಉತ್ತೇಜಿಸಲು ಬೆಂಗಳೂರು ಮತ್ತು ತುಮಕೂರಿನ ನಡುವೆ ಮೆಟ್ರೋ ರೈಲು ಸಂಪರ್ಕದ ಅಗತ್ಯವಿದೆ ಎಂದು ಹೇಳಿದರು.

ಮುಖ್ಯಮಂತ್ರಿಯವರ ಮನವೊಲಿಸಿ, ಕಳೆದ ಬಜೆಟ್‌ನಲ್ಲಿ ಕಾರ್ಯಸಾಧ್ಯತಾ ವರದಿ ಸಿದ್ಧಪಡಿಸಲು ಅವಕಾಶ ಕಲ್ಪಿಸಲಾಗಿತ್ತು. ಹೈದರಾಬಾದ್ ಕಂಪನಿ ಕಾರ್ಯಸಾಧ್ಯತಾ ವರದಿಯನ್ನು ಸಿದ್ಧಪಡಿಸಿ, ಸರ್ಕಾರಕ್ಕೆ ಸಲ್ಲಿಸಿದೆ. ಸಾಧಕ-ಬಾಧಕಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ತಿಳಿಸಿದರು. ತುಮಕೂರು ಮೆಟ್ರೊ ಯೋಜನೆ ಕುರಿತು ಬೆಂಗಳೂರಿನ ಇಬ್ಬರು ಸಂಸದರು ಅರ್ಥವಿಲ್ಲದ ಹೇಳಿಕೆ ನೀಡಿದ್ದಾರೆ. ತುಮಕೂರಿನಲ್ಲಿ 20 ಸಾವಿರ ಎಕರೆಯಲ್ಲಿ ಕೈಗಾರಿಕಾ ಪ್ರದೇಶವಿದೆ. ರಸ್ತೆ ಮೂಲಕ ತುಮಕೂರಿಗೆ ಹೋಗಲು ಎರಡು ಗಂಟೆ ಆಗುತ್ತಿದೆ. ಎರಡು ನಗರಗಳ ನಡುವಿನ ಮೆಟ್ರೋ ರೈಲುಗಳು ದೈನಂದಿನ ಪ್ರಯಾಣಿಕರಿಗೆ ಸಹಾಯ ಮಾಡುತ್ತವೆ. ಇದು ಬೆಂಗಳೂರಿನ ಮೇಲಿನ ಹೆಚ್ಚುತ್ತಿರುವ ಒತ್ತಡವನ್ನು ಸಹ ಕಡಿಮೆ ಮಾಡುತ್ತದೆ. ಸಂಸದರು ಅಂತಾರಾಷ್ಟ್ರೀಯ ವಿಚಾರ ತಿಳಿದಿದ್ದಾರೆ.

ಟರ್ಕಿ, ಟೋಕಿಯೋದಲ್ಲಿ ಮೆಟ್ರೋ ಸಂಪರ್ಕವಿದೆ. ಒಂದು ಸಿಟಿಯಿಂದ ಮತ್ತೊಂದು ಸಿಟಿಗೆ ಸಂಪರ್ಕ ಕಲ್ಪಿಸಲು ಮೆಟ್ರೋ ಇದೆ. ಹೀಗಾಗಿ ನಾವು ಮೆಟ್ರೋನ ತಮಾಷೆಗೆ ಮಾಡಿದ್ದಲ್ಲ. ಅರ್ಥ ಮಾಡಿಕೊಂಡು ಹೇಳಿಕೆ ಕೊಡಬೇಕು ಎಂದರು.



**ವಿ.ಸೋಮಣ್ಣ ಬೆಂಗಳೂರಿನಲ್ಲಿದ್ದವರೆ, ಅವರಿಗೆ ಚೆನ್ನಾಗಿ ಅರ್ಥ ಆಗಿದೆ. ನಾವು ತುಮಕೂರಿನವರಾಗಿ ನಮಗೆ ಮೆಟ್ರೋ ಬೇಕೇಬೇಕು. ಅಭಿವೃದ್ಧಿ ದೃಷ್ಟಿಯಿಂದ ಮೆಟ್ರೋ ಬೇಕು. ದುರುದ್ದೇಶದಿಂದ ನಮಗೆ ಅಲ್ಲ. ಒಂದು ವೇಳೆ ನೆಲಮಂಗಲದಲ್ಲಿ ಏರ್‌ಪೋರ್ಟ್ ಆದರೆ. ಹೆಚ್ಚು ಅನುಕೂಲ ಆಗುತ್ತದೆ. ಪಿಪಿಪಿ ಮಾಡೆಲ್‌ನಲ್ಲಿ ಅಂತ ಹೇಳಿದ್ದೇವೆ. 35 ವರ್ಷ ಲೀಸ್ ಕೊಡುತ್ತೇವೆ. ನಾವೇನು ಸರ್ಕಾರದಿಂದ ಹಣ ಕೊಡುತ್ತಿಲ್ಲ. ಅವರು ಹೂಡಿಕೆ ಮಾಡುತ್ತಾರೆ ಎಂದು ತಿಳಿಸಿದರು. ಏತನ್ಮಧ್ಯೆ, ಸರ್ಕಾರದ ಪ್ರಸ್ತಾವನೆಯನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಟೀಕಿಸಿದ್ದು, ಸರ್ಕಾರ ಮೊದಲು ಬೆಂಗಳೂರಿನಲ್ಲಿ ವಿಳಂಬವಾಗಿರುವ ಮೆಟ್ರೋ ಯೋಜನೆಯ ಕೆಲಸವನ್ನು ಪೂರ್ಣಗೊಳಿಸಲಿ ಎಂದು ಹೇಳಿದರು.**

# 2 ಸಾವಿರ ಕೋಟಿ ರೂ ವೆಚ್ಚದಲ್ಲಿ ಚರಂಡಿ ಕಾಮಗಾರಿ

### ಅಧಿಕಾರಿಗಳಿಗೆ ಸೂಚನೆಗಳನ್ನು ನೀಡಲಾಗಿದೆ ಎಲ್ಲರೂ ಸ್ಥಳಕ್ಕೆ ಧಾವಿಸಿದ್ದಾರೆ ಯಾರೂ ಚಿಂತಿಸುವ ಅಗತ್ಯ

• ಉದಯವಾಹಿನಿ, ಬೆಂಗಳೂರು

ರಾಜಧಾನಿ ಬೆಂಗಳೂರಿನಲ್ಲಿ ಮಳೆ ಮುಂದುವರಿದಿದ್ದು ಸಾಮಾನ್ಯ ಜನಜೀವನ ಅಸ್ತವ್ಯಸ್ತಗೊಂಡಿದೆ. ನಗರದ ಹಲವಾರು ಭಾಗಗಳು ಜಲಾವೃತಗೊಂಡಿದ್ದು, ಅಧಿಕಾರಿಗಳು ಮಳೆಯಿಂದ ಉಂಟಾದ ಸಮಸ್ಯೆಗಳನ್ನು ಪರಿಹರಿಸಲು ಗಮನ ಹರಿಸುತ್ತಿದ್ದಾರೆ, ಯಾರೂ ಚಿಂತಿಸುವ ಅಗತ್ಯವಿಲ್ಲ ಎಂದು ಉಪಮುಖ್ಯಮಂತ್ರಿ ಹಾಗೂ ಬೆಂಗಳೂರು ನಗರಾಭಿವೃದ್ಧಿ ಸಚಿವ ಡಿ ಕೆ ಶಿವಕುಮಾರ್ ಹೇಳಿದ್ದಾರೆ.

ಪರಿಸ್ಥಿತಿಯನ್ನು ನಿರ್ವಹಿಸುವಲ್ಲಿ ಆಡಳಿತದ ವೈಫಲ್ಯದ ಬಗ್ಗೆ ಪ್ರತಿಪಕ್ಷಗಳ ಟೀಕೆಗೆ ಪ್ರತ್ಯುತ್ತರ ನೀಡಿದ ಡಿ ಕೆ ಶಿವಕುಮಾರ್, ಪ್ರಕೃತಿಯನ್ನು ತಡೆಯಲು ಸಾಧ್ಯವೇ, ಇದು ನೈಸರ್ಗಿಕ ಚಟುವಟಿಕೆ ಎಂದರು.

ಬೆಂಗಳೂರಿನಲ್ಲಿ ಕಳೆದ 36 ಗಂಟೆಗಳ ಕಾಲ ಸುರಿಯುತ್ತಿರುವ ಭಾರೀ ಮಳೆಯಿಂದಾಗಿ ಕೂಡ ಜನಜೀವನ ಅಸ್ತವ್ಯಸ್ತವಾಯಿತು. ಜನರು ಮೊಣಕಾಲು ಆಳದ ನೀರಿನ ಮೂಲಕ ನಡೆದುಕೊಂಡು ಹೋಗುತ್ತಿರುವುದು ಕಂಡುಬಂದಿದ್ದು, ಹಲವಾರು ಸ್ಥಳಗಳಲ್ಲಿ ಟ್ರಾಫಿಕ್ ಜಾಮ್ ಉಂಟಾಗಿದೆ ಎಂದು ವರದಿಯಾಗಿದೆ. ನಿನ್ನೆ ಸಂಜೆ ಇಬ್ಬರು



ಉದಯವಾಹಿನಿ ಚಿತ್ರ

**ಜನರ ಜೀವ-ಆಸ್ತಿ ಉಳಿಸುವುದು ನಮ್ಮ ಆದ್ಯತೆ**

ಮೃತಪಟ್ಟ ಮಾಹಿತಿ ಸಿಕ್ಕಿದ್ದು ನಾವು ಅಧಿಕಾರಿಗಳನ್ನು ಕಳುಹಿಸಿದ್ದೇವೆ.

ನಾನು ಕೂಡ ಹೋಗುತ್ತೇನೆ. ಅಧಿಕಾರಿಗಳಿಗೆ ಸೂಚನೆಗಳನ್ನು ನೀಡಲಾಗಿದೆ.

ಎಲ್ಲರೂ ಸ್ಥಳಕ್ಕೆ ಧಾವಿಸಿದ್ದಾರೆ. ಯಾರೂ ಚಿಂತಿಸುವ ಅಗತ್ಯವಿಲ್ಲ. ಜನರ ಜೀವ ಮತ್ತು ಆಸ್ತಿಗಳನ್ನು ಉಳಿಸುವುದು ನಮ್ಮ ಆದ್ಯತೆಯಾಗಿದೆ. ನಾವು ಅದಕ್ಕೆ ಬದ್ಧರಾಗಿದ್ದೇವೆ ಎಂದು ಶಿವಕುಮಾರ್ ಹೇಳಿದರು.ಕಾಂಗ್ರೆಸ್ ಸರ್ಕಾರ ಮತ್ತು ಅದರ ಬ್ರಾಂಡ್ ಬೆಂಗಳೂರುನ್ನು ಟೀಕಿಸುತ್ತಿರುವ ವಿರೋಧ ಪಕ್ಷದ ಬಗ್ಗೆ ಮಾತನಾಡಿದ ಉಪಮುಖ್ಯಮಂತ್ರಿ, ಪ್ರಾಕೃತಿಕ ವಿಕೋಪ ನಿಲ್ಲಿಸಬಹುದೇ ಯಾರೂ ತಡೆಯಲು ಸಾಧ್ಯವಿಲ್ಲ. ಅವರು ಟೀಕಿಸಲಿ, ನಾವು ನಮ್ಮ ಕರ್ತವ್ಯ ಮಾಡುತ್ತೇವೆ ಎಂದರು.

ಹೆಚ್ಚಿನ ಮಳೆಯಾಗುವ ಸಾಧ್ಯತೆಯ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, ನಾನು ಮಳೆ ಬರಲಿ, ಯಾರಾದರೂ ಏನು ಬೇಕಾದರೂ ಹೇಳಲಿ, ಹೆಚ್ಚು ಮಳೆ ಬಂದರೆ ರಾಜ್ಯಕ್ಕೆ ಒಳ್ಳೆಯದು ಎಂದು ಹೇಳಿದರು. ಮಳೆಯ ನಡುವೆಯೂ ಬೆಂಗಳೂರಿನಲ್ಲಿ ರಸ್ತೆಗಳ ಸ್ಥಿತಿಯ ಬಗ್ಗೆ ಪ್ರಶ್ನಿಸಿದಾಗ, ಕೆಲಸ ನಡೆಯುತ್ತಿದೆ, ಶಾಶ್ವತ ಕಾಂಕ್ರೀಟ್ ರಸ್ತೆಗಳನ್ನು ಹಾಕಲಾಗುತ್ತಿದೆ ಎಂದು ಹೇಳಿದರು.

**ಸರ್ಕಾರದ ಎರಡು ವರ್ಷಗಳ ಆಡಳಿತದ ಸ್ಮರಣಾರ್ಥ ಹೊಸಪೇಟೆಯಲ್ಲಿ ಆಯೋಜಿಸಲಾದ ಕಾರ್ಯಕ್ರಮದಲ್ಲಿ ಭಾಗವಹಿಸಲು ಪ್ರಯಾಣಿಸುವ ಮೊದಲು ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ನಾಳೆ ಕೆಲವು ಮಳೆ ಪೀಡಿತ ಸ್ಥಳಗಳಿಗೆ ಭೇಟಿ ನೀಡಲಿದ್ದಾರೆ ಎಂದು ಹೇಳಿದರು. ನಿನ್ನೆ ರಾತ್ರಿ, ನಾನು ಕೆಲವು ಸ್ಥಳಗಳಿಗೆ ಭೇಟಿ ನೀಡಿದ್ದೆ. ನಾವು ಎಲ್ಲೇ ಇದ್ದರೂ, ಬೆಂಗಳೂರಿನ ಹೆಮ್ಮೆಯನ್ನು ಉಳಿಸುವುದು ನಮ್ಮ ಕರ್ತವ್ಯ, ಮತ್ತು ನಾವು ಅದನ್ನು ಮಾಡುತ್ತೇವೆ ಎಂದರು**

**2 ಸಾವಿರ ಕೋಟಿ ರೂ ವೆಚ್ಚದಲ್ಲಿ ಚರಂಡಿ ಕಾಮಗಾರಿ**

**ಮಳೆ ನೈಸರ್ಗಿಕ, ಪ್ರಾಕೃತಿಕ ಘಟನೆ, ಅದು ನಮ್ಮ ನಿಯಂತ್ರಣದಲ್ಲಿಲ್ಲ, ಆದರೆ ನಾವು ನಿಯಂತ್ರಿಸಬಹುದಾದ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಜನರಿಗೆ ಸಹಾಯ ಮಾಡಲು ಶ್ರಮಿಸುತ್ತಿದ್ದೇವೆ ಎಂದು ಡಿಸಿಎಂ ಹೇಳಿದರು. ಬೆಂಗಳೂರಿನ ಒಳಚರಂಡಿ ಕಾಮಗಾರಿ ಸಮಸ್ಯೆ ನಿವಾರಣೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು 2 ಸಾವಿರ ಕೋಟಿ ರೂಪಾಯಿ ವೆಚ್ಚದಲ್ಲಿ ಸರ್ಕಾರ ಕಾಮಗಾರಿ ನಡೆಸಲಿದೆ ಎಂದರು.**

## ಕೆರೆಗೆ ಹಾರಿ ಟೆಕ್ಕಿ ಆತ್ಮಹತ್ಯೆ ಪೊಲೀಸರು ಹೇಳಿದ್ದೇನು

• ಉದಯವಾಹಿನಿ, ಬೆಂಗಳೂರು

ಅತಿಯಾದ ಕೆಲಸದ ಒತ್ತಡ ಮತ್ತು ಮ್ಯಾನೇಜರ್ ನೀಡುತ್ತಿದ್ದ ಕೆಲಸದ ಒತ್ತಡದಿಂದ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದ ಯುವಕ ನಿಖಿಲ್ ಸೋಮವಂಶಿ (25) ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂಬ ಆರೋಪಗಳು ಕೇಳಿ ಬಂದಿದ್ದವು. ಈತನ ಮೃತ ದೇಹ ಮೇ 8ರಂದು ಅಗರ ಕೆರೆಯಲ್ಲಿ ಪತ್ತೆಯಾಗಿದೆ ಎಂದು ವರದಿಯಾಗಿದೆ. ಆತ್ಮಹತ್ಯೆಗೆ ಕಂಪನಿಯ ಕಠಿಣ ಕೆಲಸದ ವಾತಾವರಣ ಮತ್ತು ಕಿರುಕುಳ ನೀಡುತ್ತಿದ್ದ ಮ್ಯಾನೇಜರ್ ಎಂದು ಆರೋಪಿಸಲಾಗಿತ್ತು.



ಆದರೆ ಟೆಕ್ಕಿ ಆತ್ಮಹತ್ಯೆಗೆ ಕೆಲಸದ ಒತ್ತಡವೇ ಕಾರಣ ಎಂದು ಹೇಳಲಾಗದು ಎಂದು ಪೊಲೀಸರು ತಿಳಿಸಿದ್ದಾರೆ. ಮಹಾರಾಷ್ಟ್ರ ಮೂಲದ ನಿಖಿಲ್ ಎಚ್‌ಎಸ್‌ಆರ್ ಲೇಔಟ್‌ನಲ್ಲಿ ವಾಸಿಸುತ್ತಿದ್ದರು. ಐಐಎಸ್ಸಿ ಪದವೀಧರರಾದ ಸೋಮವಂಶಿ ಕೋರಮಂಗಲದ ಎಐ ಸಂಸ್ಥೆಯಲ್ಲಿ ಮೆಷಿನ್ ಲರ್ನಿಂಗ್ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದರು. ಯಾವುದೇ ಡೆತ್ ನೋಟ್ ಪತ್ತೆಯಾಗಿಲ್ಲ.

ನಿಖಿಲ್ ಆತ್ಮಹತ್ಯೆಗೆ ಕಾರಣ ಇನ್ನೂ ಪತ್ತೆ ಯಾಗಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ನಿಖಿಲ್ ಆತ್ಮಹತ್ಯೆ ಮಾಡಿಕೊಂಡ ಕೆಲವು ದಿನಗಳ ನಂತರ, ಅವರ ಸಹೋದ್ಯೋಗಿಗಳು ಸಾಮಾಜಿಕ ಮಾಧ್ಯಮದಲ್ಲಿ ಕೆಲಸದ ಒತ್ತಡವೇ ಅವರು ಈ ಕಠಿಣ ಕ್ರಮ ಕೈಗೊಳ್ಳಲು ಕಾರಣ ಎಂದು ಪೋಸ್ಟ್ ಮಾಡಿದ್ದಾರೆ. ಕೆಲವರು ನಿಖಿಲ್ ಅವರ ಮ್ಯಾನೇಜರ್ ಅವರ ಆತ್ಮಹತ್ಯೆಗೆ ಕಾರಣ ಎಂದು ಆರೋಪಿಸಿದ್ದಾರೆ.

ಆದರೆ, ಸಾಫ್ಟ್‌ವೇರ್ ಎಂಜಿನಿಯರ್ ಆತ್ಮಹತ್ಯೆಗೆ ಕೆಲಸಕ್ಕೆ ಸಂಬಂಧಿಸಿದ ಒತ್ತಡ ಕಾರಣ ಎಂದು ಹೇಳಲು ಯಾವುದೇ ಪುರಾವೆಗಳಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಅಂತರಾಳದಿಂದ...
EDITORIAL

# ಮಳೆಗೆ ಸಜ್ಜಾಗದ ಗ್ರೇಟರ್ ಬೆಂಗಳೂರು; ಕಾಡುವ ಪ್ರವಾಹ, ಮೈಮರೆತ ಆಡಳಿತ

ಹೆಸರಿನಲ್ಲಿ 'ಗ್ರೇಟರ್' ಎಂದು ಸೇರಿಕೊಂಡ ಮಾತ್ರಕ್ಕೆ ಬೆಂಗಳೂರು ನಗರವೇನೂ ಸಮಸ್ಯೆಗಳಿಂದ ಮುಕ್ತವಾಗಲು ಸಾಧ್ಯವಿಲ್ಲ ಎಂಬುದನ್ನು ಮುಂಗಾರುಪೂರ್ವದ ಮಳೆಯು ಆಡಳಿತದ ಹೊಣೆ ಹೊತ್ತವರಿಗೆ ಕಣ್ಣಿಗೆ ರಾಚುವಂತೆ ಎತ್ತಿ ತೋರಿಸಿದೆ. ಬೆಂಗಳೂರಿನಲ್ಲಿ ಮಳೆ ಸುರಿದರೆ ಮುಗಿಯಿತು. ರಸ್ತೆಗಳು ನದಿಗಳಾಗುತ್ತವೆ. ತಗ್ಗು ಪ್ರದೇಶಗಳು ಕೆರೆಗಳ ಸ್ವರೂಪ ತಾಳುತ್ತವೆ, ರಸ್ತೆ ಪಕ್ಕದ ಮರಗಳು ಉರುಳಿ ಬೀಳುತ್ತವೆ. ನಗರದ ಪೂರ್ವಭಾಗದ ಜಲಾವೃತ ಪ್ರದೇಶಗಳಲ್ಲಿ ಸಿಲುಕಿಕೊಂಡವರನ್ನು ರಕ್ಷಿಸಲು ಬೋಟುಗಳು ರಸ್ತೆಗೆ ಇಳಿಯಬೇಕಾಗುತ್ತದೆ. ಆದ್ದರಿಂದಲೇ, 'ಹೇಳಿದ್ದು ಗ್ರೇಟರ್ ಬೆಂಗಳೂರು, ಮಾಡಿದ್ದು ವಾಟರ್ ಬೆಂಗಳೂರು' ಎಂಬಂತಹ ಕುಹಕದ ನುಡಿಗಳ ಮಹಾಪೂರವೇ ಸಾಮಾಜಿಕ ಜಾಲತಾಣಗಳಲ್ಲಿ ಈಗ ಹರಿದಾಡುತ್ತಿದೆ. ಪ್ರತಿಸಲ ಮಳೆ ಬಂದಾಗಲೂ ರಾಜಧಾನಿಯದ್ದು ಇದೇ ಕಥೆ. ಸಾಲದು ಎನ್ನುವಂತೆ ನಗರದ ಹಲವು ರಸ್ತೆಗಳನ್ನು ವೈಟ್ ಟಾಪಿಂಗ್ ಇಲ್ಲವೇ ಉನ್ನತೀಕರಿಸುವ ಯೋಜನೆಯ ನೆಪದಲ್ಲಿ ಸಂಪೂರ್ಣವಾಗಿ ಅಗೆದುಹಾಕಲಾಗಿದ್ದು, ಕೆಸರುಗದ್ದೆಯಂತಾದ ರಸ್ತೆಗಳಿಂದ ಪರಿಸ್ಥಿತಿ ಇನ್ನಷ್ಟು ಅಸಹನೀಯವಾಗಿದೆ. ಮಳೆಯಿಂದಾಗಿ ಗೋಡೆ ಕುಸಿದಿದ್ದರಿಂದ ಮಹಿಳೆಯೊಬ್ಬರು ಮೃತಪಟ್ಟಿರುವುದಾಗಿ ವರದಿಯಾಗಿದೆ.




**ನಗರ ಮಹಾಪೂರ'ಕ್ಕೆ ಅಭಿವೃದ್ಧಿಯ ಹೆಸರಿನಲ್ಲಿ ನಡೆದ ಅಕ್ರಮಗಳೇ ಕಾರಣವಾಗಿದ್ದು, ರಾಜಧಾನಿಯ ಇಂದಿನ ಸ್ಥಿತಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು (ಬಿಬಿಎಂಪಿ) ದೂರದೇ ಬೇರೆ ಮಾರ್ಗವಿಲ್ಲ. ಮಳೆನೀರಿನ ಬಹುಪಾಲು ಒತ್ತಡವನ್ನು ಹಗುರ ಮಾಡುತ್ತಿದ್ದ ಬಹುತೇಕ ರಾಜಕಾಲುವೆಗಳು ಒತ್ತುವರಿಯಾಗಿರುವುದು, ನೀರು ಇಂಗಲು ಅಂಗುಲದಷ್ಟೂ ಜಾಗ ಇಲ್ಲದಂತೆ ಎಲ್ಲೆಡೆಯೂ ಟಾರು, ಕಾಂಕ್ರೀಟ್‌ನಿಂದ ಆವೃತವಾಗಿರುವುದು, ಕೆರೆಗಳು ಕಣ್ಮರೆ ಆಗಿರುವುದು ಹೀಗೆ ನಗರದ ಇಂದಿನ ಸ್ಥಿತಿಗೆ ಕಾರಣಗಳನ್ನು ಪಟ್ಟಿ ಮಾಡುತ್ತಾ ಹೋಗಬಹುದು. ವಾಸ್ತವವಾಗಿ ಮಳೆಗಾಲದ ಸನ್ನಿವೇಶ ಎದುರಿಸಲು ಬೇಸಿಗೆ ಕಾಲದಲ್ಲೇ ತಯಾರಿ ಮಾಡಿಕೊಳ್ಳಬೇಕು. ಚರಂಡಿಗಳ ಹೂಳು ಎತ್ತುವ, ಅವುಗಳ ಗೋಡೆ ಸರಿಪಡಿಸುವ ಹಾಗೂ ಮೋರಿಗಳನ್ನು ದುರಸ್ತಿಗೊಳಿಸುವ ಕೆಲಸಗಳು ಮಳೆಗಾಲ ಶುರುವಾಗುವ ಮುನ್ನವೇ ಮುಗಿಯಬೇಕು. ಆದರೆ, ನಿದ್ರೆಯಲ್ಲಿ ಮೈಮರೆತಿರುವ ಬಿಬಿಎಂಪಿಗೆ ನಗರದ ಪರಿಸ್ಥಿತಿಯ ಕಡೆಗೆ ಗಮನವಿಲ್ಲ.**

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬಿಬಿಎಂಪಿಯ 'ವಾರ್ ರೂಮ್'ನಲ್ಲಿ ಕುಳಿತು ಪರಿಸ್ಥಿತಿ ಅವಲೋಕಿಸಿದ್ದಾರೆ. ಜಲಾವೃತ ಪ್ರದೇಶಗಳು, ಉರುಳಿಬಿದ್ದ ಮರಗಳು, ಮಳೆನೀರು ತುಂಬಿದ ಕೆಲ ಸರ್ಕಾರಿ ಕಚೇರಿಗಳು ಅವರಿಗೆ ನಗರ ಮಹಾಪೂರದ ಆಳ ಅಗಲದ ದರ್ಶನ ಮಾಡಿಸಿವೆ. ಮಳೆ ಶುರುವಾಗುವುದಕ್ಕಿಂತ ಕೆಲವು ದಿನಗಳಿಗೆ ಮುಂಚೆ ಬೆಂಗಳೂರಿನ ಜನ ವಿಪರೀತ ತಾಪಮಾನದಿಂದ ಬಳಲಿದ್ದರು. ಈ ಮಳೆ ಅವರಿಗೆ ಆಹ್ಲಾದವನ್ನು ಉಂಟುಮಾಡಿರಲಿಕ್ಕೆ ಸಾಕು. ಆದರೆ, ಮುಂಗಾರುಪೂರ್ವದ ಮಳೆಯೇ ನಗರದಲ್ಲಿ ಈ ಪ್ರಮಾಣದ ಪ್ರವಾಹದ ಸನ್ನಿವೇಶವನ್ನು ಸೃಷ್ಟಿಸಿರುವುದು ಜನರಲ್ಲಿ ಕಳವಳ ಮೂಡಿಸಿದೆ. ಸಮಸ್ಯೆ ಬಗೆಹರಿಸಬೇಕೆಂಬ ಇಚ್ಛಾಶಕ್ತಿಯೂ ಇಲ್ಲ, ಅಧಿಕಾರಿಗಳನ್ನು ಚಿವುಟಿ ಎಬ್ಬಿಸಲು ಚುನಾಯಿತ ಕೌನ್ಸಿಲ್ ಕೂಡ ಅಸ್ತಿತ್ವದಲ್ಲಿಲ್ಲ.

ರಾಜಧಾನಿಯಲ್ಲಿ ಮಳೆ ಅನಾಹುತಗಳು, ನಗರ ಮಹಾಪೂರಗಳು ಇತ್ತೀಚಿನ ವರ್ಷಗಳಲ್ಲಿ ತೀವ್ರಗತಿಯಲ್ಲಿ ಹೆಚ್ಚುತ್ತಿದ್ದರೂ ಸಮಸ್ಯೆ ಬಗೆಹರಿಸಲು ಇದುವರೆಗೆ ರಾಜ್ಯ ಸರ್ಕಾರದ ಚುಕ್ಕಾಣಿ ಹಿಡಿದವರ್ಯಾರೂ ಸಮರ್ಪಕ ಕಾರ್ಯಯೋಜನೆಯನ್ನು ಹಾಕಿಕೊಳ್ಳದಿರುವುದು ಆಶ್ಚರ್ಯ. ಕೆಲವು ವರ್ಷಗಳ ಹಿಂದೆ ಪ್ರವಾಹ ಪರಿಸ್ಥಿತಿ ಉಲ್ಬಣಿಸಿದಾಗ ಎಲ್ಲಾ ಒತ್ತುವರಿಗಳನ್ನು ತೆರವುಗೊಳಿಸಲಾಗುವುದು ಎಂದು ಅಬ್ಬರಿಸಿ, ಕಾರ್ಯಾಚರಣೆಯನ್ನೂ ಆರಂಭಿಸಲಾಯಿತು. ಬೆಂಗಳೂರಿನ ಪೂರ್ವಭಾಗದಲ್ಲಿ ಜೆಸಿಬಿ ಯಂತ್ರಗಳ ಸದ್ದು ಜೋರಾಗಿ ಮೊಳಗಿತು. ದಿನಗಳು ಕಳೆದಂತೆ, ಬಿಬಿಎಂಪಿಗೆ ಭೂಮಾಪಕರ ಕೊರತೆ ಎದುರಾಯಿತು. ಕಾರ್ಯಾಚರಣೆ ತಣ್ಣಗಾಯಿತು. ಒತ್ತುವರಿ ತೆರವು ಕೆಲಸವನ್ನು ಆಗ ಪ್ರಭಾವಿಗಳ ಒತ್ತಡದಿಂದಾಗಿ ಮೊಟಕುಗೊಳಿಸದೇ ಇದ್ದಿದ್ದರೆ ಇಂದಿನ ಬಹುಪಾಲು ಸಮಸ್ಯೆ ನೀಗಿರುತ್ತಿತ್ತು. ಮಳೆ ಬಂದಾಗ ಒಂದಿಷ್ಟು ಕಾಮಗಾರಿ ನಡೆಸುವುದು, ಮತ್ತೆ ಹೊದ್ದು ಮಲಗುವುದು ಬಿಬಿಎಂಪಿಯ ಹಳೆಯ ಚಾಳಿ. ಇದರಿಂದ ಬೆಂಗಳೂರಿನ ಬ್ರ್ಯಾಂಡ್ ಮುಕ್ಕಾಗುವುದೇ ವಿನಾ ಹೊಳೆಯುವುದಿಲ್ಲ ಎಂಬುದನ್ನು ಬೆಂಗಳೂರು ಅಭಿವೃದ್ಧಿ ಖಾತೆಯನ್ನೂ ಹೊಂದಿರುವ ಉಪಮುಖ್ಯಮಂತ್ರಿ ಶಿವಕುಮಾರ್ ಅವರು ಗಮನಕ್ಕೆ ತಂದುಕೊಳ್ಳಬೇಕು. ಮಳೆಗಾಲದ ನಿರ್ವಹಣೆಯಲ್ಲಿ ಯಾವುದೇ ಲೋಪ ಆಗದಂತೆ ನೋಡಿಕೊಳ್ಳುವಂತೆ ಬಿಬಿಎಂಪಿ ಅಧಿಕಾರಿಗಳನ್ನು ಎಚ್ಚರಗೊಳಿಸಬೇಕು. ಬೆಂಗಳೂರನ್ನು 'ಗ್ರೇಟರ್' ಮಾಡುವಂತಹ ದೊಡ್ಡ ಉಪಕ್ರಮವು ಮೋರಿ ಸ್ವಚ್ಛಗೊಳಿಸಿ. ನೀರು ಸರಾಗವಾಗಿ ಹರಿದು ಹೋಗುವಂತೆ ನೋಡಿಕೊಳ್ಳುವ ಪುಟ್ಟ ಹೆಜ್ಜೆಯಿಂದಲೇ ಆರಂಭವಾಗಬೇಕು.

---

# ರಾಮಾಯಣ



## ದಶರಥ ಕೌಸಲ್ಯಾ ದೇವಿಯರ ಸಂವಾದ

• ಹಿಂದಿನ ಸಂಚಿಕೆಯಿಂದ **78ನೆಯ ಅಧ್ಯಾಯ**

ದೊಡ್ಡಮೀನು ತನ್ನ ಮರಿಯಾದ ಚಿಕ್ಕಮೀನನ್ನು ನುಂಗುವಂತೆ ದಶರಥರಾಯನು ತನ್ನ ಮಗನಾದ ಶ್ರೀರಾಮನನ್ನು ವನವಾಸಕ್ಕೆ ಕಳುಹಿಸಿ ತಾನೇ ಕೆಟ್ಟನು' ಎಂಬ ಅಪಕೀರ್ತಿಯು ನಿನಗೆ ಬಂದಿತು. ಧರ್ಮಿಷ್ಟನಾದ ನೀನು ಶ್ರೀರಾಮನನ್ನು ವನಕ್ಕೆ ಕಳುಹಿಸಿದೆ. ಸಮಸ್ತರಿಗೂ ನೀನೇ ಗತಿ. ಪತ್ನಿಗೆ ಗಂಡನೇ ಮೊದಲನೆಯ ಗತಿ. ಪುತ್ರನು ಎರಡನೆಯ ಗತಿ. ಹೆಂಡತಿ ಮಗನು ಇಲ್ಲದಪಕ್ಷದಲ್ಲಿ ಜ್ಞಾತಿಗಳೇ ರಕ್ಷಕರಲ್ಲದೆ ಬೇರೆ ಉಪಾಯವಿಲ್ಲ. ನೀನು ಕೈಕೇಯಾ ದೇವಿಯ ವಶವರ್ತಿಯಾದ ಮೇಲೆ ನನ್ನ ಭಾಗಕ್ಕೆ ನೀನಿಲ್ಲ. ಆದರೂ ನಾನು ನಿನ್ನನ್ನು ಬಿಟ್ಟು ವನಕ್ಕೆ ಹೋಗಬಾರದು. ನಿನ್ನಿಂದ ಕೆಟ್ಟವಳು ನಾನೊಬ್ಬಳೇ ಅಲ್ಲ, ನಿನ್ನಿಂದ ನೀನೂ ಸಮಸ್ತ ರಾಜ್ಯವೂ ಸಮಸ್ತ ಮಂತ್ರಿಗಳೂ ಎಲ್ಲರೂ ಕೆಟ್ಟರು. ನಾನೂ ಕೆಟ್ಟೆನು. ನನ್ನ ಮಕ್ಕಳೂ ಕೆಟ್ಟರು. ಕೈಕೇಯಾದೇವಿಯೊಬ್ಬಳು ಸಂತುಷ್ಟ ಚಿತ್ತೆಯಾಗಿ ಬದುಕಲಿ ಎಂದು ನುಡಿದಳು.

**ಕೌಸಲ್ಯಾ ದೇವಿಯು ದಶರಥರಾಯ ನನ್ನುಸಂತ ವಿಟ್ಟಿದ್ದು:** ಈ ಪ್ರಕಾರವಾಗಿ ಪುತ್ರಶೋಕದಿಂದ ಕುಪಿತೆಯಾದ ಕೌಸಲ್ಯಾದೇವಿಯು ನುಡಿಯಲು ದಶರಥರಾಯನು ದುಃಖಾತಿಶಯದಿಂದ ಮೂರ್ಛಿತನಾಗಿ ಬಹಳ ಹೊತ್ತಿನಮೇಲೆ ಮೂರ್ಛ ತಿಳಿದೆದ್ದು ನಿಟ್ಟುಸಿರು ಬಿಡುತ್ತ ಸಂಕಟಪಡುತ್ತಿದ್ದನು. ಪೂರ್ವದಲ್ಲಿ ತಾನು ಬೇಟೆಗೆ ಹೋದಾಗ ಶಬ್ದವೇಧಿ ಎಂಬ ಬಾಣದಿಂದ ಒಬ್ಬ ಮುನಿಪುತ್ರನನ್ನು ಕೊಂದು ಆ ಮುನಿಗೆ ದುಃಖವುಂಟು ಮಾಡಿದ್ದು ದಶರಥನ ಸ್ಮರಣೆಗೆ ಬಂದಿತು. ಆತನು ದುಃಖದಿಂದ ಕೌಸಲ್ಯಾದೇವಿಯನ್ನು ಕುರಿತು ಕೌಸಲ್ಯ, ನಿನಗೆ ಕೈ ಮುಗಿದು ಬೇಡಿಕೊಳ್ಳುತ್ತೇನೆ. ನೀನು ದಯೆಯುಳ್ಳವಳು. ಯಾವಾಗಲೂ ಪರರಿಗೆ ಹಿತವನ್ನು ಚಿಂತಿಸುವವಳು. ಒಂದುಸಾರಿಯಾದರೂ ಅನೃತವನ್ನು ನುಡಿದವಳಲ್ಲ. ಲೋಕದಲ್ಲಿ ಧರ್ಮವನ್ನು ಕೈಗೊಂಡು ನಡೆಯುವ ಪತಿವ್ರತಾಸ್ತ್ರೀಯರಿಗೆ ಪತಿಯು ಗುಣವಂತ ನಾಗಲಿ ಗುಣಹೀನನಾಗಲಿ ಪ್ರತ್ಯಕ್ಷ ದೇವತಾಸ್ವರೂಪನು. ನೀನು ಯಾವಾಗಲೂ ಧರ್ಮಬುದ್ಧಿ ಯುಳ್ಳವಳು, ನೀನು ಪುತ್ರಶೋಕದಿಂದ ಮನಸ್ಸು ನೊಂದವಳಾದರೂ ನನ್ನನ್ನು ನಿಷ್ಠುರವಚನಗಳಿಂದ ನೋಯಿಸಬೇಡ ಎಂದು ಅತ್ಯಂತ ದೈನ್ಯದಿಂದ ನುಡಿದನು. ಆ ಮಾತನ್ನು ಕೇಳಿ ಕೌಸಲಾದೇವಿಯು ಮಳೆಹುಯುವ ಸಮಯದಲ್ಲಿ ಮೇಲುಮಚ್ಚಿನ ಜಲಧಾರೆಗಳು ನೀರು ಸುರಿಯುವಂತೆ ಗಳಗಳನೆ ಕಣ್ಣುಗಳಿಂದ ಜಲಬಿಂದುಗಳನ್ನು ಸುರಿಸಿದಳು. ತನ್ನ ತಲೆಯ ಮೇಲೆ ಕೈ ಜೋಡಿಸಿಕೊಂಡು ಸಂಭ್ರಮದಿಂದ ಬಿಕ್ಕುತ್ತ ಮಹಾರಾಜ, ನಿನಗೆ ಸಾಷ್ಟಾಂಗವೆರಗಿ ಬೇಡಿಕೊಳ್ಳುತ್ತೇನೆ. ನೀನು ಇಂಥ ಮಾತನ್ನಾಡಬಹುದೆ ಲೋಕದಲ್ಲಿ ಪುರುಷರು ಸ್ತ್ರೀಯರಿಗೆ ಇಷ್ಟು ದೈನ್ಯವನ್ನು ತೋರಿಸುವುದನ್ನು ಎಲ್ಲಿಯೂ ಕಾಣೆನು, ಈ ರೀತಿಯಲ್ಲಿ ಪತಿಯಿಂದ ಕೈ ಮುಗಿಸಿಕೊಳ್ಳುವ ಸ್ತ್ರೀಯು ಇಹಲೋಕದಲ್ಲಿ ಅಪಕೀರ್ತಿಯನ್ನು ಪಡೆದು ಪರಲೋಕದಲ್ಲಿ ನರಕವನ್ನೆದುವಳು. ಪುತ್ರಶೋಕದಿಂದ ಅಜ್ಞಾನಿಯಾಗಿ ನಾನೇನು ನುಡಿದೆನೋ ಅದನ್ನು ನೀನು ಕ್ಷಮಿಸು, ಲೋಕದಲ್ಲಿ ಶೋಕವು ಧೈರ್ಯವನ್ನು ಕೆಡಿಸುವುದು. ಶೋಕವೇ ಶಾಸ್ತ್ರಜ್ಞಾನವನ್ನು ಕೆಡಿಸುವುದು. ಶೋಕವೇ ಧರ್ಮವನ್ನೂ ಕೆಡಿಸುವುದು. ಆದ್ದರಿಂದ ಶೋಕಕ್ಕೆ ಸಮಾನವಾದ ಶತ್ರುವಿಲ್ಲ. ಆಯುಧದ ಪೆಟ್ಟನ್ನಾದರೂ ಸಹಿಸಬಹುದು. ಶೋಕವು ಅಲ್ಪವಾದುದಾದರೂ ಸಹಿಸಲು ಶಕ್ಯವಲ್ಲ. ಶ್ರೀರಾಮನು ಕಾಡಿಗೆ ಹೋಗಿ ಇಂದಿಗೆ ಐದು ದಿವಸಗಳಾದವು.

ಮುಂದುವರಿಯುವುದು...

---



**ಕಲಾ ಸಾಹಿತ್ಯ**

ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ, ವಿಮರ್ಶಕರು

# ಮಾಜಿ ಪ್ರಧಾನಿ ದಿ:ರಾಜೀವ್ ಗಾಂಧಿರವರ 34ನೇ ವರ್ಷದ ಪುಣ್ಯಸ್ಮರಣೆ

ಶ್ರೀ ರಾಜೀವ್ ಗಾಂಧಿಯವರು 1944 ಆಗಸ್ಟ್ 20 ರಂದು ಮುಂಬೈಯಲ್ಲಿ ಜನಿಸಿದರು. ತಂದೆ ಫಿರೋಜ್ ಗಾಂಧಿ ತಾಯಿ ಇಂದಿರಾಗಾಂಧಿ. ರಾಜೀವ್ ಗಾಂಧಿಯವರ ವಿದ್ಯಾಭ್ಯಾಸ ಡೆಹರಾಡೂನ್‌ನ ಬೆಲ್ ಹಮ್ ವಿದ್ಯಾಲಯದಲ್ಲಿ ನಡೆಯಿತು. ಆ ಶಾಲೆಯಲ್ಲಿ ಐ ಎನ್ ಸಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಹೆಚ್ಚಿನ ಶಿಕ್ಷಣಕ್ಕಾಗಿ ಇಂಗ್ಲೆಂಡಿನ ಕೆಂಬ್ರಿಡ್ಜ್ ಶಾಲೆಗೆ ಸೇರಿಕೊಂಡರು. ಅಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಸೋನಿಯರವರ ಪರಿಚಯವಾಗಿ ಪ್ರೀತಿ ಬೆಳೆಯಿತು. ರಾಜೀವ್ ಗಾಂಧಿಗೆ ಮೊದಲಿಂದಲೂ ಪೈಲೆಟ್ ಆಗಬೇಕೆಂಬ ಆಸೆ ಇತ್ತು ಆ ಮೇರೆಗೆ ಪೈಲೆಟ್ ತರಬೇತಿ ಶಿಕ್ಷಣ ಪಡೆದು ಪೈಲೆಟ್ ಆದರು. 1968 ರಲ್ಲಿ ಸೋನಿಯಾ ರವರೊಂದಿಗೆ ವಿವಾಹವಾಗಿ ರಾಹುಲ್ ಮತ್ತು ಪ್ರಿಯಾಂಕಾ ಮಕ್ಕಳಿದ್ದಾರೆ. ಸಹೋದರ ಸಂಜಯ್ ಗಾಂಧಿ ರಾಜಕೀಯ ಪ್ರವೇಶಿಸಿ ಲೋಕಸಭಾ ಸದಸ್ಯರಾಗಿದ್ದರು. ಆದರೆ ದುರ್ದೈವ 1980 ಜೂನ್ 23 ರಂದು ಸಂಜಯ್ ಗಾಂಧಿ ವಿಮಾನ ಅಪಘಾತದಲ್ಲಿ ತೀರಿಕೊಂಡರು.ಈ ಕಾರಣದಿಂದಾಗಿ ರಾಜೀವ್ ಗಾಂಧಿ ರಾಜಕೀಯವನ್ನು ಪ್ರವೇಶಿಸಬೇಕಾಯಿತು.

ಸಂಜಯ್ ಗಾಂಧಿ ಸಾವಿನಿಂದಾಗಿ ಉತ್ತರಪ್ರದೇಶದ ಅಮೇಥಿ ಕ್ಷೇತ್ರದಿಂದ ನಡೆದ ಲೋಕಸಭೆಯ ಮರು ಚುನಾವಣೆಯಲ್ಲಿ ರಾಜೀವ್ ಗಾಂಧಿ 1981 ರಲ್ಲಿ ಆಯ್ಕೆಯಾದರು. ಹೀಗಿರುವಲ್ಲಿ 1984 ಅಕ್ಟೋಬರ್ 31 ರಂದು ತನ್ನ ತಾಯಿ ಪ್ರಧಾನಮಂತ್ರಿ ಇಂದಿರಾಗಾಂಧಿ ರವರು ತಮ್ಮ ಸ್ವಂತ ಭದ್ರತಾ ಸಿಬ್ಬಂದಿಗಳ ಗುಂಡಿಗೆ ಬಲಿಯಾದರು. ಆ ಬಳಿಕ ರಾಜೀವ್ ಗಾಂಧಿಯವರು ಹಂಗಾಮಿ ಪ್ರಧಾನಮಂತ್ರಿಯಾಗಿ, ನಂತರ 1985 ಜನವರಿ ತಿಂಗಳಲ್ಲಿ ನಡೆದ ಮಹಾಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಭಾರಿ ಬಹುಮತಗಳಿಸಿ ಸರ್ಕಾರ ರಚಿಸುವ ಹಕ್ಕು ಪಡೆಯಿತು. ರಾಜೀವ್ ಗಾಂಧಿಯವರು ಸರ್ವಾನುಮತದಿಂದ ಸಂಸದೀಯ ಪಕ್ಷದ ನಾಯಕರಾಗಿ ಪ್ರಧಾನಮಂತ್ರಿ ಸ್ಥಾನವನ್ನು ಉಳಿಸಿಕೊಂಡರು. ರಾಜೀವ್ ಗಾಂಧಿರವರು ದೂರದೃಷ್ಟಿ ಉಳ್ಳವ ನಾಯಕರಾಗಿದ್ದು, ಭಾರತವನ್ನು 21ನೇ ಶತಮಾನಕ್ಕೆ ಕೊಂಡೊಯ್ಯುವ ಪ್ರಾಮಾಣಿಕ ಪ್ರಯತ್ನ ಮಾಡಿದರು.



ದೇಶದಲ್ಲಿ ಹಲವಾರು ಸಮಸ್ಯೆಗಳಿದ್ದವು. ಪಂಜಾಬಿನಲ್ಲಿ ಅಕಾಲಿದಳದ ಅತೃಪ್ತಿ ಪಂಜಾಬ್ ಸರ್ಕಾರವನ್ನು ವಜಾ ಮಾಡಬೇಕಾಯಿತು ಶ್ರೀಲಂಕಾದ ಸಮಸ್ಯೆ, ನಿರಾಶ್ರಿತರ ಸಮಸ್ಯೆ ಆದರೆ ಅವರು ದಿಟ್ಟತನದಿಂದ ಎಲ್ಲಾ ಸಮಸ್ಯೆಗಳನ್ನು ಎದುರಿಸಿದರಲ್ಲದೇ ರಾಷ್ಟ್ರದ ಪ್ರಗತಿಗಾಗಿ ಅನೇಕ ಯೋಜನೆಗಳನ್ನು ರೂಪಿಸಿದರು. ರಾಷ್ಟ್ರೀಯ ಶಿಕ್ಷಣ ಪದ್ಧತಿಯನ್ನು ಜಾರಿಗೆ ತಂದರು. ಶಿಕ್ಷಣ ಕ್ರಮದಲ್ಲಿ ಆಧುನೀಕತೆ ತರಲು, ವಿಜ್ಞಾನ ಮತ್ತು ತಾಂತ್ರಿಕ ಕ್ಷೇತ್ರಗಳ ಬೆಳವಣಿಗೆಗೆ ಪ್ರೋತ್ಸಾಹ, ನೆರವು ನೀಡಿದರು. ದೇಶದ ರಕ್ಷಣಾ ಬಲವನ್ನು ಹೆಚ್ಚಿಸಲು ಹಲವಾರು ಯೋಜನೆಗಳನ್ನು ರೂಪಿಸಿದರು. 1986 ನವಂಬರ್ 15 ರಿಂದ 17 ರವರೆಗೆ ಮೂರು ದಿನ ಬೆಂಗಳೂರಿನಲ್ಲಿ ಏಳು ರಾಷ್ಟ್ರಗಳ ಮುಖಂಡರ ಜೊತೆಗೂಡಿ ಸಾರ್ಕ್ ಸಮ್ಮೇಳನ ರಾಜೀವ್ ಗಾಂಧಿ ಅವರ ಅಧ್ಯಕ್ಷತೆಯಲ್ಲಿ ಬಹಳ ಯಶಸ್ವಿಯಾಗಿ ನಡೆಯಿತು.

**ರಾಜೀವ್ ಗಾಂಧಿಯವರ ಹತ್ಯೆಗೆ ರೂಪಿಸಿದ ಮೂರು ಸಂಚುಗಳು:** ಗಾಂಧಿ ಜಯಂತಿ ದಿನವಾದ ಅಕ್ಟೋಬರ್ 02, 1986 ರಂದು ರಾಜ್ ಘಾಟ್‌ನಲ್ಲಿ ಗಾಂಧೀಜಿ ಸಮಾಧಿಗೆ ರಾಷ್ಟ್ರಪತಿ ಶ್ರೀ ಆರ್. ವೆಂಕಟರಾಮನ್ ಅವರ ಜೊತೆ ಪುಷ್ಪಗುಚ್ಛ ಇರಿಸುವಾಗ ಒಬ್ಬ ಪಂಜಾಬ್ ಉಗ್ರಗಾಮಿ ಪ್ರೇಮ್ ಚಂದ್ ಸಿಂಗ್ ಎಂಬುವನು ಮೂರು ದಿವಸ ಮುಂಚೆ ರಾಜಘಾಟ್‌ನ ಒಂದು ಮರದ ಪೊದೆಯಲ್ಲಿ ಕುಳಿತು, ತನ್ನ ಪ್ರಾಣದ ಮೇಲಿನ ಹಂಗನ್ನು ತೊರೆದು ಗುಂಡನ್ನು ಆರಿಸಿದನು.ಕೊನೆಗೆ ಆ ಗುಂಡು ರಾಜೀವ್ ಗಾಂಧಿಗೆ ತಗಲದೆ ಅದೃಷ್ಟವಶಾತ್ ಬದುಕುಳಿದರು. 1987 ಆಗಸ್ಟ್ 05 ರಂದು ಶ್ರೀಲಂಕಾಗೆ ರಾಜೀವ್ ಗಾಂಧಿಯವರು ಭೇಟಿಕೊಟ್ಟಾಗ ಶ್ರೀಲಂಕಾ ಅಧ್ಯಕ್ಷ ಶ್ರೀ ಜಯವರ್ದನೆ ಅವರ ಜೊತೆ ಮಿಲಿಟರಿ ಪಡೆಯ ಪರೇಡ್ ವೀಕ್ಷಣೆ ಮಾಡುತ್ತಿರಬೇಕಾದರೆ ಒಬ್ಬ ಮಿಲಿಟರಿ ಸೈನಿಕ ತನ್ನಲ್ಲಿದ್ದ ರೈಫಲ್ ಭಟ್ ನಲ್ಲಿ ತಲೆಗೆ ಹೊಡೆಯಲು ಹೋದನು ಆದರೆ ರಾಜೀವ್ ಗಾಂಧಿಯವರ ತಲೆಗೆ ಬೀಳುವ ಬದಲು ಭುಜಕ್ಕೆ ಬಿದ್ದು ಅದೃಷ್ಟವಶಾತ್ ಪಾರಾದರು.

**1991 ಮೇ 21ರಂದು ಚುನಾವಣಾ ಪ್ರಚಾರಕ್ಕಾಗಿ ರಾಜೀವ್ ಗಾಂಧಿಯವರು ತಮಿಳುನಾಡಿನ ಶ್ರೀ ಪೇರಂಬೂರುನಲ್ಲಿ ಪ್ರವಾಸ ಕೈಗೊಂಡಿದ್ದಾಗ ಸಭೆಯೊಂದರಲ್ಲಿ ಭಾಷಣ ಮಾಡಲು ವೇದಿಕೆಯ ಸಮೀಪ ಬರುತ್ತಿರುವಾಗ ಮಾನವ ಬಾಂಬ್‌ನ ದಾಳಿಗೆ ಸಿಲುಕಿ ಸಾವನ್ನಪ್ಪಿ ಹುತಾತ್ಮರಾದರು. ಕಡೆಗಾಲಕ್ಕೆ ಮೂರನೇ ಸಂಚುಗೆ ಬಲಿಯಾಗಿಯೇ ಬಿಟ್ಟರು. ಭಾರತ ಸರ್ಕಾರ 1991 ಜೂನ್ 17 ರಂದು ರಾಜೀವ್ ಗಾಂಧಿಯವರಿಗೆ ಮರಣೋತ್ತರವಾಗಿ ಭಾರತ ರತ್ನ ಪ್ರಶಸ್ತಿ ನೀಡಿ ಗೌರವಿಸಿತು. ಇಂಥಹ ಯುವ ಚೇತನ, ಚೈತನ್ಯ ಪುರುಷ, ಉತ್ತಮ ದೂರದೃಷ್ಟಿಉಳ್ಳ ರಾಜೀವ್ ಗಾಂಧಿಯವರ 34ನೇ ವರ್ಷದ ಪುಣ್ಯಸ್ಮರಣೆಯ ದಿನವಾದ ಇಂದು ಸ್ಮರಿಸಿ ನೆನೆಯುತ್ತಾ ಅವರ ಆತ್ಮಕ್ಕೆ ಶಾಂತಿ, ಸದ್ಗತಿಯು ದೊರಕಲೆಂದು ಭಾರತೀಯರಾದ ನಾವೆಲ್ಲರೂ ಆ ಭಗವಂತನಲ್ಲಿ ಪ್ರಾರ್ಥಿಸೋಣ.**

---

# ಸನಾತನ ಧರ್ಮದ ಬಗ್ಗೆ ಮಾಹಿತಿ



ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ

## ಕೃತಿ ಕರ್ತೃ

ಅಷ್ಟಾಧ್ಯಾಯಿ -- ಪಾಣಿನಿ
ರಾಮಾಯಣ-- ವಾಲ್ಮೀಕಿ
ಮಹಾಭಾರತ ---ವೇದ ವ್ಯಾಸ
ಅರ್ಥಶಾಸ್ತ್ರ--ಚಾಣಕ್ಯ
ಮಹಾಭಾಷ್ಯ ---ಪತಂಜಲಿ
ಸತ್ಸಾರಿಕ ಸೂತ್ರ-- ನಾಗಾರ್ಜುನ
ಬೌದ್ಧ ಚರಿತಮ್--- ಅಶ್ವಘೋಷ
ಸೌಂದರಾನಂದ-- ಅಶ್ವಘೋಷ
ಮಹಾವಿಭಾಶ ಶಾಸ್ತ್ರ-- ವಸುಮಿತ್ರ
ಸ್ವಪ್ನ ವಾಸವದತ್ತಮ್--ಭಾಸ
ಕಾಮಸೂತ್ರ--ವಾತ್ಸಯನ
ಕುಮಾರಸಂಭವಂ ಕಾಳಿದಾಸ
ಅಭಿಜ್ಞಾನ ಶಾಕುಂತಲಂ-- ಕಾಳಿದಾಸ+
ವಿಕ್ರಮೋರ್ವಶಿಯಾಮ್--- ಕಾಳಿದಾಸ
ಮೇಘದೂತಂ- ಕಾಳಿದಾಸ
ರಘುವಂಶಂ --ಕಾಳಿದಾಸ
ಮಾಳವಿಕಾಗ್ನಿಮಿತ್ರಂ-- ಕಾಳಿದಾಸ
ನಾಟ್ಯಶಾಸ್ತ್ರ--- ಭರತಮುನಿ
ದೇವಿಚಂದ್ರಗುಪ್ತಂ-- ವಿಶಾಖದತ್ತ
ಮೃಚ್ಛಕಟಿಕಂ --ಶೂದ್ರಕ
ಸೂರ್ಯ ಸಿದ್ಧಾಂತ-- ಆರ್ಯಭಟ
ಬೃಹತ್ ಸಂಹಿತ --ವರಾಹಮಿಹಿರ
ಪಂಚತಂತ್ರ-- ವಿಷ್ಣುಶರ್ಮಾ
ಕಥಾಸರಿತ್ಸಗರ-- ಸೋಮದೇವ
ಅಭಿಧಮ್ಮಕೋಶಕಾರಿಕ--- ವಸುಬಂಧು
ಮುದ್ರಾರಾಕ್ಷಸ --- ವಿಶಾಖದತ್ತ
ರಾವಣವಧ-- ಭಟ್ಟಿ
ಕಿರಾತಾರ್ಜುನೀಯಂ--ಭಾರವಿ
ದಶಕುಮಾರ ಚರಿತಂ-- ದಂಡಿ
ಹರ್ಷಚರಿತ-- ಬಾಣಭಟ್ಟ
ಕಾದಂಬರಿ--- ಬಾಣ
ವಾಸವದತ್ತಾ-- ಸುಬಂಧು
ನಾಗಾನಂದ---- ಹರ್ಷವರ್ಧನ
ರತ್ನಾವಳಿ --ಹರ್ಷವರ್ಧನ
ಪ್ರಿಯದರ್ಶಿಕಾ-- ಹರ್ಷವರ್ಧನ
ಮಾಲತಿ ಮಾಧವ-- ಭವಭೂತಿ
ಪೃಥ್ವಿರಾಜ ವಿಜಯ-- ಜಯನಕ
ಕರ್ಪೂರ ಮಂಜರಿ-- ರಾಜಶೇಖರ
ಕಾವ್ಯಮೀಮಾಂಸ-- ರಾಜಶೇಖರ
ನವಸಹಸಾಂಕ ಚರಿತ--ಪದ್ಮಗುಪ್ತ
ಶಬ್ದಾನುಶಾಸನ-- ರಾಜ ಭೋಜ
ಬೃಹತ್ ಕಥಾಮಂಜರಿ-- ಕ್ಷೇಮೇಂದ್ರ
ನೈಶಧ ಚರಿತಂ-- ಶ್ರೀಹರ್ಷ
ವಿಕ್ರಮಾಂಕದೇವಚರಿತಂ-- ಬಿಲ್ಹಣ
ಕುಮಾರಪಾಲ ಚರಿತಂ-- ಹೇಮಚಂದ್ರ
ಗೀತ ಗೋವಿಂದ-- ಜಯದೇವ
ಪೃಥ್ವಿರಾಜ ರಾಸೊ ಚಂದ್ರವರದಾಯಿ
ರಾಜತರಂಗಿಣಿ-- ಕಲ್ಹಣ
ಮಾನಸಲ್ಲೋಸ--- ಸೋಮೇಶ್ವರ
ಶಿಶುಪಾಲ ವಧ-- ಮಾಘ
ಗೌಡವಾಹೋ---ವಾಕ್ಪತಿ
ರಾಮ ಚರಿತ--- ಸಂಧ್ಯಾಕರಾನಂದಿ
ದ್ವಯಾಶ್ರಯ ಕಾವ್ಯ--ಹೇಮಚಂದ್ರ.

## ವೇದಗಳು

**ಪ್ರ .ಯಾರನ್ನು ವೇದ ಎಂದು ಕರೆಯಲಾಗುತ್ತದೆ?**
ಉತ್ತರ - ದೈವಿಕ ಜ್ಞಾನದ ಪುಸ್ತಕವನ್ನು ವೇದ ಎಂದು ಕರೆಯಲಾಗುತ್ತದೆ.

**ಕಿ. ದೇವರು ವೇದ-ಜ್ಞಾನವನ್ನು ಯಾವಾಗ ಕೊಟ್ಟರು?**
ಉತ್ತರ - ಸೃಷ್ಟಿಯ ಆರಂಭದಲ್ಲಿ ವೇದ- ಜ್ಞಾನವನ್ನು ಕೊಟ್ಟರು.

**ಕಿ. ದೇವರು ವೇದ ಜ್ಞಾನವನ್ನು ಏಕೆ ಕೊಟ್ಟರು?**
ಉತ್ತರ: ಮನುಷ್ಯರ ಕಲ್ಯಾಣಕ್ಕಾಗಿ ಮಾತ್ರ.

**ಕಿ.ವೇದಗಳು ಎಷ್ಟು?**
ಉತ್ತರ - ನಾಲ್ಕು.
1-ಋಗ್ವೇದ
2-ಯಜುರ್ವೇದ
3-ಸಾಮವೇದ
4-ಅಥರ್ವವೇದ

**ಪ್ರ .ವೇದಗಳ ಬ್ರಾಹ್ಮಣರು ಯಾರು?**
ವೇದ -ಬ್ರಾಹ್ಮಣ
1 - ಋಗ್ವೇದ - ಐತರೇಯ
2 - ಯಜುರ್ವೇದ - ಶತಪಥ
3 - ಸಾಮವೇದ - ತಾಂಡ್ಯ
4 - ಅಥರ್ವವೇದ - ಗೋಪಥ

**ಪ್ರ ವೇದಗಳಲ್ಲಿ ಎಷ್ಟು ಉಪವೇದಗಳಿವೆ.**
ಉತ್ತರ - ನಾಲ್ಕು. ವೇದ --ಉಪವೇದ
1- ಋಗ್ವೇದ - ಆಯುರ್ವೇದ
2- ಯಜುರ್ವೇದ - ಧನುರ್ವೇದ
3-ಸಾಮವೇದ - ಗಾಂಧರ್ವವೇದ
4- ಅಥರ್ವವೇದ - ಅರ್ಥ ವೇದ

**ಪ್ರಶ್ನೆ ವೇದಗಳಲ್ಲಿ ಎಷ್ಟು ಅಂಗಗಳಿವೆ(ವೇದಾಂಗ)**
ಉತ್ತರ - ಆರು.
1 - ಶಿಕ್ಷಣ 2 - ಕಲ್ಪ
3 - ನಿರುಕ್ತ 4 - ವ್ಯಾಕರಣ
5 - ಛಂದ 6 - ಜ್ಯೋತಿಷ್ಯ

**ಕಿ. ಈಶ್ವರ ಯಾವ ಋಷಿಮುನಿಗಳಿಗೆ ವೇದಗಳ ಜ್ಞಾನವನ್ನು ಕೊಟ್ಟರು?**
ಉತ್ತರ- ನಾಲ್ಕು ಋಷಿಮುನಿಗಳು.
ಋಷಿ--- ವೇದ
1- ಋಗ್ವೇದ - ಅಗ್ನಿ
2 - ಯಜುರ್ವೇದ - ಗಾಳಿ
3 - ಸಾಮವೇದ - ಆದಿತ್ಯ
4 - ಅಥರ್ವವೇದ - ಅಂಗಿರಾ

**ಪ್ರ . ಋಷಿಗಳಿಗೆ ದೇವರು ವೇದಗಳ ಜ್ಞಾನವನ್ನು ಹೇಗೆ ಕೊಟ್ಟರು?**
ಉತ್ತರ - ಸಮಾಧಿ ಅವಸ್ಥೆಯಲ್ಲಿ

**ಪ್ರಶ್ನೆ ವೇದಗಳಲ್ಲಿ ಯಾವ ಜ್ಞಾನವಿದೆ?**
ಉತ್ತರ - ಎಲ್ಲಾ ಸತ್ಯವಾದ ವಿದ್ಯೆಗಳ ಜ್ಞಾನ-ವಿಜ್ಞಾನ

**ಪ್ರಶ್ನೆ ವೇದದ ವಿಷಯಗಳು ಯಾವುವು?**
ಉತ್ತರ - ನಾಲ್ಕು. ವೇದ -ವಿಷಯ
1- ಋಗ್ವೇದ - ಜ್ಞಾನ
2- ಯಜುರ್ವೇದ - ಕರ್ಮ
3- ಸಾಮವೇದ - ಪೂಜೆ,ಉಪಾಸನೆ
4- ಅಥರ್ವವೇದ - ವಿಜ್ಞಾನ

**ಪ್ರ ವೇದಗಳಲ್ಲಿ ಭಾಗಗಳು**

**ಋಗ್ವೇದದಲ್ಲಿ**
1- ಮಂಡಲ- 10
2 - ಅಷ್ಟಕ - 08
3 - ಸೂಕ್ತ - 1028
4 - ಅನುವಾಕ - 85
5 - ಋಕ್ಕ್‌ಗಳು - 10589

**ಯಜುರ್ವೇದದಲ್ಲಿ.**
1- ಅಧ್ಯಾಯ - 40
2- ಮಂತ್ರ - 1975

**ಸಾಮವೇದದಲ್ಲಿ.**
1- ಆರ್ಚಿಕ - 06
2 - ಅಧ್ಯಾಯ - 06
3- ಋಕ್ಕ್ ಗಳು- 1875

**ಅಥರ್ವವೇದದಲ್ಲಿ.**
1- ಕಾಂಡ - 20
2- ಸೂಕ್ತ - 731
3 - ಮಂತ್ರ - 5977

**ಪ್ರ. ವೇದಗಳನ್ನು ಓದುವ ಹಕ್ಕು ಯಾರಿಗೆ ಇದೆ?**
ಉತ್ತರ: ವೇದಗಳನ್ನು ಓದುವ ಹಕ್ಕು ಎಲ್ಲ ಮನುಷ್ಯರಿಗೆ ಇದೆ

**ಕಿ. ವೇದಗಳಲ್ಲಿ ವಿಗ್ರಹಾರಾಧನೆಯ ನಿಯಮವಿದೆಯೇ?**
ಉತ್ತರ: ಇಲ್ಲ.

---

# ವಾಕಿಂಗ್ ಮಾಡುವವರು ಯಾವಾಗ ವಾಕಿಂಗ್ ಮಾಡುವುದು ಒಳ್ಳೆಯದು




**ತಪ್ಪಾದ ಸಮಯದಲ್ಲಿ ವಾಕ್ ಮಾಡಿದ್ರೆ ಏನಾಗುತ್ತೆ?**

ವಾಕಿಂಗ್ ಮಾಡುವುದು ಆರೋಗ್ಯಕ್ಕೆ ಒಳ್ಳೆಯದು. ಆದರೆ ನಾವು ಯಾವ ಸಮಯದಲ್ಲಿ ವಾಕ್ ಮಾಡುತ್ತಿದ್ದೇವೆ ಎನ್ನುವುದೂ ಮುಖ್ಯವಾಗುತ್ತದೆ. ಹೀಗಿರುವಾಗ ತಪ್ಪಾದ ಸಮಯದಲ್ಲಿ ವಾಕ್ ಮಾಡೋದ್ರಿಂದ ಆರೋಗ್ಯಕ್ಕೆ ಅಪಾಯವೇ ಹೆಚ್ಚು. ವಾಕಿಂಗ್ ಎನ್ನುವುದು ಇತ್ತೀಚಿನ ದಿನಗಳಲ್ಲಿ ಬಹುತೇಕರ ಒಂದು ದೈನಂದಿನ ದಿನಚರಿಯ ಭಾಗವಾಗಿದೆ. ಕೆಲವರು ಫಿಟ್‌ನೆಸ್‌ಗಾಗಿ ವಾಕಿಂಗ್ ಮಾಡಿದ್ರೆ, ಇನ್ನೂ ಕೆಲವರು ತೂಕ ಇಳಿಸುವ ಸಲುವಾಗಿ ವಾಕ್ ಮಾಡುತ್ತಾರೆ. ಎಲ್ಲಾ ವ್ಯಾಯಾಮದಲ್ಲಿ ಅತ್ಯಂತ ಸುಲಭದ ವ್ಯಾಯಾಮ ಇದಾಗಿದೆ. ಕೆಲವರು ಬೆಳಿಗ್ಗೆ ವಾಕ್ ಮಾಡಿದ್ರೆ, ಇನ್ನೂ ಕೆಲವರು ಸಂಜೆ ವಾಕ್ ಮಾಡುತ್ತಾರೆ. ಒಟ್ಟಾರೆ ಯಾರಿಗೆ ಯಾವಾಗ ಸಮಯ ಸಿಗುತ್ತೋ ಆಗ ವಾಕ್ ಮಾಡುತ್ತಾರೆ. ಆದರೆ ನಿಮಗೆ ಗೊತ್ತಾ ವಾಕ್ ಮಾಡೋದಕ್ಕೂ ಒಂದು ಸಮಯ ಅಂತ ಇರುತ್ತೇ.

**30 ನಿಮಿಷಗಳ ವಾಕಿಂಗ್‌ನ ಪ್ರಯೋಜನಗಳು:** ಪ್ರತಿಯೊಬ್ಬರೂ ಫಿಟ್ ಆಗಿರಲು ಸಂಕೀರ್ಣವಾದ ವ್ಯಾಯಾಮಗಳ ಬಗ್ಗೆ ಮಾತನಾಡುವಾಗ 30 ನಿಮಿಷಗಳ ಚುರುಕಾದ ನಡಿಗೆ ಬಹಳ ಸಿಂಪಲ್ ಎಂದು ತೋರುತ್ತದೆ. ಇದು ನಿಮ್ಮ ದೈಹಿಕ, ಮಾನಸಿಕ ಮತ್ತು ಭಾವನಾತ್ಮಕ ಯೋಗಕ್ಷೇಮಕ್ಕೆ ಸಹಕಾರಿಯಾಗಿದೆ. ಪ್ರತಿದಿನ 30 ನಿಮಿಷಗಳ ಕಾಲ ನಡೆಯುವುದರಿಂದ ಸಾಕಷ್ಟು ಪ್ರಯೋಜನಗಳಿವೆ. ಇದು ಹೃದಯ ಕಾಯಿಲೆಗಳ ಅಪಾಯವನ್ನು ಕಡಿಮೆ ಮಾಡುತ್ತದೆ, ತೂಕ ಇಳಿಯುತ್ತದೆ, ಒತ್ತಡವನ್ನು ಕಡಿಮೆ ಮಾಡುತ್ತದೆ, ರಕ್ತ ಸಂಚಾರವನ್ನು ಉತ್ತವಾಗಿಸುವುದಲ್ಲದೆ, ಬೊಜ್ಜಿನ ಸಮಸ್ಯೆಯನ್ನು ನಿವಾರಿಸುತ್ತದೆ.

**ವಾಕಿಂಗ್ ಮಾಡುವವರು ಇದನ್ನು ತಿಳಿಯೋದು ಮುಖ್ಯ:** ಬೆಳಿಗ್ಗೆ ಅಥವಾ ಸಂಜೆ ತೆರೆದ ಜಾಗದಲ್ಲಿ ನಡೆಯುವುದು ನಿಮ್ಮ ಆರೋಗ್ಯಕ್ಕೆ ತುಂಬಾ ಪ್ರಯೋಜನಕಾರಿ ಎಂದು ಸಾಬೀತುಪಡಿಸಬಹುದು. ಸರಳ ನಡಿಗೆ ಮತ್ತು ಚುರುಕಾದ ನಡಿಗೆಯಂತಹ ವ್ಯಾಯಾಮಗಳು ಸುಲಭ ಮಾತ್ರವಲ್ಲ, ಪುರುಷರು ಮತ್ತು ಮಹಿಳೆಯರಿಬ್ಬರಿಗೂ ಪ್ರಯೋಜನಕಾರಿ. ಆದರೆ ವಾಕಿಂಗ್ ಮಾಡುವವರು ಈ ಕೆಲವು ವಿಷಯಗಳನ್ನು ಮನಸ್ಸಿನಲ್ಲಿಟ್ಟುಕೊಂಡು ವಾಕ್ ಮಾಡಬೇಕು. ಉದಾಹರಣೆಗೆ, ದಿನದ ಯಾವ ಸಮಯದಲ್ಲಿ ಮತ್ತು ಎಷ್ಟು ಹೊತ್ತು ವಾಕಿಂಗ್ ಮಾಡಬೇಕು ಎನ್ನುವುದನ್ನು ತಿಳಿದಿರಬೇಕು. ಏಕೆಂದರೆ ತಪ್ಪಾದ ಸಮಯದಲ್ಲಿ ವಾಕಿಂಗ್ ಮಾಡುವುದರಿಂದ ನಿಮ್ಮ ಆರೋಗ್ಯಕ್ಕೆ ಹಾನಿಯಾಗಬಹುದು.ಅದಕ್ಕಾಗಿಯೇ, ನಡೆಯುವ ಮೊದಲು, ನೀವು ಯಾವಾಗ ನಡೆಯಬೇಕು ಮತ್ತು ಯಾವಾಗ ನಡೆಯಬಾರದು ಎಂಬುದನ್ನು ತಿಳಿದುಕೊಳ್ಳಬೇಕು.



**ಯಾವ ಸಮಯದಲ್ಲಿ ಬೆಳಗಿನ ವಾಕಿಂಗ್ ಮಾಡಬೇಕು:** ನಡೆಯಲು ಉತ್ತಮ ಸಮಯವೆಂದರೆ ಬೆಳಿಗ್ಗೆ ಸೂರ್ಯೋದಯದ ಸಮಯ.


ಸೂರ್ಯ ಉದಯಿಸಿದ ತಕ್ಷಣ, ನೀವು ಹೊರಗೆ ನಡೆಯಲು ಹೋಗಬೇಕು ಮತ್ತು ಬೆಳಿಗ್ಗೆ 8 ಗಂಟೆಯೊಳಗೆ ನಡಿಗೆಯನ್ನು ಪೂರ್ಣಗೊಳಿಸಬೇಕು. ಬೆಳಗಿನ ಸೌಮ್ಯವಾದ ಬಿಸಿಲಿನಲ್ಲಿ ನಡೆಯುವುದರಿಂದ ನಿಮಗೆ ಯಾವುದೇ ನೋವು ಅನಿಸುವುದಿಲ್ಲ. ಈ ರೀತಿಯಾಗಿ, ನೀವು ಸ್ವಲ್ಪ ಸಮಯದವರೆಗೆ ಸೂರ್ಯನ ಬೆಳಕಿನಲ್ಲಿ ಇರುವುದರಿಂದ ವಿಟಮಿನ್ ಡಿ ಪಡೆಯಬಹುದು ಮತ್ತು ಇದು ನಿಮ್ಮ ಮೂಳೆಗಳಿಗೂ ಪ್ರಯೋಜನಕಾರಿಯಾಗಿದೆ.

**ಸಂಜೆಯ ವಾಕಿಂಗ್ ಯಾವಾಗ ಮಾಡಬೇಕು:** ಬೆಳಿಗ್ಗೆ ಬದಲು ಸಂಜೆ ನಡೆಯಲು ಇಷ್ಟಪಡುವವರು ಸಂಜೆ 4 ಗಂಟೆಯ ನಂತರ ಮತ್ತು ಸಂಜೆ 6 ರಿಂದ 8 ಗಂಟೆಯವರೆಗೆ ನಡೆಯಲು ಸಲಹೆ ನೀಡಲಾಗುತ್ತದೆ. ಈ ಸಮಯದಲ್ಲಿ ಗಾಳಿಯಲ್ಲಿ ತಂಪು ಹೆಚ್ಚಾಗಲು ಪ್ರಾರಂಭವಾಗುತ್ತದೆ ಮತ್ತು ಮಾಲಿನ್ಯದ ಮಟ್ಟವೂ ಕಡಿಮೆಯಾಗುತ್ತದೆ. ಅಂತಹ ಪರಿಸ್ಥಿತಿಯಲ್ಲಿ, ನಿಮಗೆ ನಡೆಯಲು ಸುಲಭವಾಗಬಹುದು ಮತ್ತು ಅದು ನಿಮ್ಮ ಆರೋಗ್ಯಕ್ಕೂ ಪ್ರಯೋಜನಗಳನ್ನು ನೀಡುತ್ತದೆ. **ತಪ್ಪು ಸಮಯದಲ್ಲಿ ನಡೆಯುವುದರಿಂದ ಉಂಟಾಗುವ ಅಡ್ಡಪರಿಣಾಮಗಳು:** ಮುಂಜಾನೆ ಅಥವಾ ತುಂಬಾ ಮುಂಜಾನೆ (ಕತ್ತಲೆಯಲ್ಲಿ) ನಡೆಯುವುದು ಆರೋಗ್ಯಕ್ಕೆ ಹಾನಿಕಾರಕ ಏಕೆಂದರೆ ಈ ಸಮಯದಲ್ಲಿ ಗಾಳಿಯಲ್ಲಿ ಮಾಲಿನ್ಯದ ಮಟ್ಟ ಹೆಚ್ಚಾಗಿರುತ್ತದೆ. ಇದರಿಂದಾಗಿ ಆಸ್ತಮಾ, ಕೆಮ್ಮು ಮತ್ತು ಶೀತದಂತಹ ಸಮಸ್ಯೆಗಳು ಹೆಚ್ಚಾಗಬಹುದು. ಚಳಿಗಾಲದಲ್ಲಿ ಬೆಳಗಿನ ಜಾವ ಬೇಗನೆ ವಾಕಿಂಗ್ ಮಾಡೋದ್ರಿಂದ ಸ್ನಾಯುಗಳ ಒತ್ತಡ ಮತ್ತು ಕೀಲು ನೋವಿನ ಸಮಸ್ಯೆ ಹೆಚ್ಚಾಗುತ್ತದೆ. ಬೆಳಗಿನ ತಣ್ಣನೆಯ ಗಾಳಿ ಮತ್ತು ಮಾಲಿನ್ಯವು ಶ್ವಾಸಕೋಶದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ, ಇದು ಎದೆಯಲ್ಲಿ ಭಾರ ಮತ್ತು ನೋವಿಗೆ ಕಾರಣವಾಗಬಹುದು.

---

# ಕರ್ನಾಟಕದಲ್ಲಿ 8 ಸೇರಿ ದೇಶಾದ್ಯಂತ 257 ಕೇಸ್ ಪತ್ತೆ

• ಉದಯವಾಹಿನಿ, ಬೆಂಗಳೂರು



ಮತ್ತೆ ಕೋವಿಡ್ ಹೊಸ ಅಲೆ ಶುರುವಾಗಿದ್ದು, ಕರ್ನಾಟದಲ್ಲಿ 8 ಪ್ರಕರಣ ಸೇರಿ ದೇಶಾದ್ಯಂತ 257 ಕೇಸ್ ಪತ್ತೆಯಾಗಿದೆ.

ಏಷ್ಯಾದಲ್ಲಿ ಕೋವಿಡ್ ಹಾವಳಿ ಮತ್ತೆ ಶುರುವಾಗಿದ್ದು, ಸಿಂಗಾಪುರ, ಹಾಂಕಾಂಗ್ ಬಳಿಕ ದೇಶದಲ್ಲಿ ಕಾಣಿಸಿಕೊಳ್ಳುತ್ತಿದೆ. ಎಲ್‌ಎಫ್.7 ಮತ್ತು ಎನ್‌ಬಿ.1.8 ತಳಿಗಳು ಪತ್ತೆಯಾಗಿದ್ದು, ಕೊರೊನಾದ ಜೆಎನ್.1 ಗೆ ಸೇರಿದೆ.

ಇದುವರೆಗೂ ಭಾರತದಲ್ಲಿ 257 ಪ್ರಕರಣಗಳು ಹಾಗೂ ಕರ್ನಾಟಕದಲ್ಲಿ 8 ಕೇಸ್ ಪತ್ತೆಯಾಗಿದ್ದು, ಕೇರಳದಲ್ಲಿ 69, ಮಹಾರಾಷ್ಟ್ರ 44, ತಮಿಳುನಾಡು 34, ಗುಜರಾತ್, ದೆಹಲಿ, ಹರ್ಯಾಣ, ರಾಜಸ್ಥಾನ, ಸಿಕ್ಕಿಂನಲ್ಲೂ ಪಾಸಿಟಿವ್ ಕೇಸ್‌ಗಳಿವೆ. ಸದ್ಯ ಯಾವುದೇ ರೀತಿಯ ಗಂಭೀರವಾದ ಗುಣಲಕ್ಷಣಗಳು ಕಾಣಿಸಿಕೊಂಡಿಲ್ಲ. ಹೀಗಾಗಿ ಆತಂಕದ ಸ್ಥಿತಿ ನಿರ್ಮಾಣವಾಗಿಲ್ಲ. ಆದರೆ ನಿರ್ಲಕ್ಷ್ಯ ಬೇಡ ಎಂದು ಆರೋಗ್ಯ ಇಲಾಖೆ ತಿಳಿಸಿದ್ದು, ಎಲ್ಲಾ ಕಡೆ ಸಂದೇಶ ರವಾನಿಸಿದ್ದು, ಕಟ್ಟೆಚ್ಚರ ವಹಿಸಿದೆ. ಈಗಾಗಲೇ ಸಿಂಗಾಪುರ ಮತ್ತು ಹಾಂಗ್ ಕಾಂಗ್‌ನಲ್ಲಿ ಅಲರ್ಟ್ ಘೋಷಿಸಲಾಗಿದೆ. ಸಿಂಗಾಪುರದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತಿದೆ. ಮೇ 03 ರಿಂದ ಮೆ 16ರ ವರೆಗೆ 14,200 ಕೇಸ್ ದಾಖಲಾಗಿದೆ ಎಂದು ಸಿಂಗಾಪುರ ಆರೋಗ್ಯ ಸಚಿವಾಲಯ ತಿಳಿಸಿದೆ.

## ಅಪರಾಧ ತಡೆಗೆ ಕಠಿಣ ಕ್ರಮ ಜರುಗಿಸಿ: ಸಚಿವ ಈಶ್ವರ ಬಿ.ಖಂಡ್ರೆ

• ಉದಯವಾಹಿನಿ ಬೀದರ

ಅಪರಾಧಿಗಳ ವಿರುದ್ಧ ಕಠಿಣ ಕ್ರಮ ಜರುಗಿಸುವ ಮೂಲಕ ಪೊಲೀಸ್ ಇಲಾಖೆ ಕಾನೂನು ಸುವ್ಯವಸ್ಥೆ ಕಾಪಾಡಲು ಮುಂದಾಗಬೇಕು. ಅಪರಾಧ ತಡೆಗೆ ಪೊಲೀಸ್ ಇಲಾಖೆಗೆ ಎಲ್ಲಾ ರೀತಿಯಲ್ಲಿ ಸಹಕಾರ ನೀಡಲಾಗುವುದು ಎಂದು ಅರಣ್ಯ, ಪರಿಸರ ಹಾಗೂ ಜೈವಿಕ ಮತ್ತು ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಬಿ.ಖಂಡ್ರೆ ಹೇಳಿದರು.

ಎಸ್ಪಿ ಕಚೇರಿ ಆವರಣದಲ್ಲಿ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯ 1.25 ಕೋಟಿ ರೂ. ಅನುಧಾನದಲ್ಲಿ ಖರೀದಿಸಲಾದ 7 ಬುಲೆರೋ ಹಾಗೂ 2 ಸ್ಕ್ಯಾರ್ಪಿಯೋ ವಾಹನ ಗಳನ್ನು ಪೊಲೀಸ್ ಇಲಾಖೆಗೆ ಹಸ್ತಾಂತರಿಸಿ ಮಾತನಾಡಿದರು ಕಾನೂನು ಸುವ್ಯವಸ್ಥೆ ಚೆನ್ನಾಗಿದ್ದಾರೆ ಮಾತ್ರ ಜನರು ನೆಮ್ಮದಿಯ ನಿದ್ದೆ ಮಾಡಲು ಸಾಧ್ಯ. ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಇತ್ತೀಚಿಗೆ ಕೆಕೆಆರ್ ಡಿಬಿ ಅನುಧಾನದಲ್ಲಿ ಎಐ ಕ್ಯಾಮೆರಾ ಒಳಗೊಂಡ ಕಮಾಂಡ್ ಸೆಂಟರ್ ಸ್ಥಾಪನೆ ಮಾಡಲಾಗಿದೆ ಮುಂದೆಯೂ ಕಾನೂನು ಸುವ್ಯವಸ್ಥೆಗೆ ಎಲ್ಲಾ ರೀತಿಯಲ್ಲಿ ಕ್ರಮವಹಿಸಲಾಗುವುದು ಎಂದರು.

## ಸೈಬರ್ ಅಪರಾಧ ತಡೆಯಲು ಸಹಕರಿಸಿ: ಸಿ.ಪಿ.ಐ ರಮೇಶ ಅವಜಿ

• ಉದಯವಾಹಿನಿ ವಿಜಯಪುರ

ನಗರದ ಎ.ಎಸ್ ಪಾಟೀಲ ವಾಣಿಜ್ಯ ಮಹಾ ವಿದ್ಯಾಲಯ ವತಿಯಿಂದ ಸಿದ್ದಾಪುರ ಗ್ರಾಮದಲ್ಲಿ ಆಯೋಜಿಸಿದ್ದ ಎನ್.ಎಸ್.ಎಸ್ ವಾರ್ಷಿಕ ಶಿಬಿರದ ಪ್ರಯುಕ್ತ ಜಿಲ್ಲಾ ಪೊಲೀಸ್ ಇಲಾಖೆಯ ಸಹಯೋಗದೊಂದಿಗೆ ಶಿಬಿರಾರ್ಥಿಗಳಿಗೆ 'ಮಾದಕ ದ್ರವ್ಯ ಪದಾರ್ಥಗಳ ದುರ್ಬಳಕೆ ಮತ್ತು ಸೈಬರ್ ಅಪರಾಧ ಕಾನೂನು' ವಿಷಯದ ಬಗ್ಗೆ ಚರ್ಚೆ ಮತ್ತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ವಿಜಯಪುರ ಗ್ರಾಮೀಣ ವೃತ್ತ ಸಿ.ಪಿ.ಐ ರಮೇಶ್ ಅವಜಿ ಮಾತನಾಡಿ, ಮಾದಕ ದ್ರವ್ಯಕ್ಕೆ ಸಂಬಂಧಿಸಿದ ಪ್ರಕರಣಗಳಲ್ಲಿ ಪೊಲೀಸ್ ಇಲಾಖೆ ತೆಗೆದುಕೊಂಡ ಕಾನೂನು ಕ್ರಮಗಳ ಕುರಿತು ತಮ್ಮ ಅನುಭವ ಹಂಚಿಕೊಂಡರು.

ಮಾದಕ ದ್ರವ್ಯಗಳ ದುರ್ಬಳಕೆ ಮತ್ತು ಅದರ ದುಷ್ಪರಿಣಾಮಗಳಿಗೆ ಸಂಬಂಧಿಸಿದ ಅಪರಾಧಗಳಿಗೆ ಭಾರತೀಯ ದಂಡ ಸಂಹಿತೆಯ ಬೇರೆ ಬೇರೆ ಸೆಕ್ಷನ್‌ಗಳು ಅನ್ವಯಿಸುತ್ತವೆ ಎಂದರು.



ಮಾದಕ ವಸ್ತುವಿನ ದುರ್ಬಳಕೆ, ಯರ್ಗಿಂಗ್ ಮತ್ತು ಸೈಬರ್ ಅಪರಾಧಗಳ ಹಾನಿ ತಡೆಯುವಲ್ಲಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಮಹತ್ತರ ಜವಾಬ್ದಾರಿ ವಹಿಸಬೇಕು. ಮಾದಕ ವಸ್ತುಗಳ ವ್ಯಸನದಿಂದ ವಿದ್ಯಾರ್ಥಿಗಳ ಮೇಲೆ ದೈಹಿಕ ಮತ್ತು ಮಾನಸಿಕವಾಗಿ ಆಗುವ ದುಷ್ಪರಿಣಾಮಗಳ ಬಗ್ಗೆ ಅವರು ಜಾಗೃತಿ ಮೂಡಿಸಿದರು. ಅರಕೇರಿ ಗ್ರಾಮ ಪಂಚಾಯತಿ ಅಧ್ಯಕ್ಷ ಶ್ರೀರಂಗ ಅವರು, ಪ್ರಸ್ತುತ ದಿನಗಳಲ್ಲಿ ಮಾದಕ ವ್ಯಸನಗಳ ವಿರುದ್ಧ ಹೋರಾಡುವ ಮನೋಧೈರ್ಯ ಹೊಂದಿರಬೇಕೆಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಎನ್.ಎಸ್.ಎಸ್ ಸಂಯೋಜನಾಧಿಕಾರಿ ಪ್ರೊ. ಪ್ರದೀಪ ಕುಂಬಾರ, ಮಾದಕ ವಸ್ತುವಿನ ದುರ್ಬಳಕೆ, ಆ್ಯಂಟಿ ಯರ್ಗಿಂಗ್ ಮತ್ತು ಸೈಬರ್ ಕ್ರೈಮ್ ದುಷ್ಪರಿಣಾಮಗಳ ವಿರುದ್ಧ ವಿದ್ಯಾರ್ಥಿಗಳನ್ನು ಒಗ್ಗೂಡಿಸಲು ಒತ್ತಾಯಿಸಿದರು. ಸೌಮ್ಯ ಕುಲಕರ್ಣಿ ಪ್ರಾರ್ಥನಾ ಗೀತೆ ಹಾಡಿದರು.

ಪ್ರೀತಿ ಮೇತ್ರಿ ನಿರೂಪಿಸಿದರು ಹಾಗೂ ವಾಸಂತಿ ವಂದಿಸಿದರು. ಶಶಾಂಕ್ ದೇಸಾಯಿ, ವಿವೇಕ ತಮ್ಮದಡ್ಡಿ ಹಾಗೂ ಕಾಲೇಜಿನ ಬೋಧಕ, ಬೋಧಕೇತರ ಸಿಬ್ಬಂದಿ ವರ್ಗ ಮತ್ತು ಎನ್.ಎಸ್.ಎಸ್ ಶಿಬಿರಾರ್ಥಿಗಳಿದ್ದರು.

## ಹಳ್ಳ ಕೊಳ್ಳಗಳು, ನಾಲಾಗಳಲ್ಲಿ ಹೊಸ ನೀರು ಹರಿಯುತ್ತಿದೆ, ಇದರಿಂದ ಹೊಲಗದ್ದೆಗಳಲ್ಲಿ ಕೆರೆಯಂತೆ ನೀರು ನಿಂತಿದೆ

# ಬೇಸಿಗೆಯಲ್ಲಿ ಸತತ 3 ದಿನಗಳಿಂದ ಬಿರುಗಾಳಿ ಸಹಿತ ಧಾರಾಕಾರ ಮಳೆ

ಉದಯವಾಹಿನಿ ವಿಶೇಷ

• ಮಹೇಬೂಬಶಾ ಅಣವಾರ

• ಉದಯವಾಹಿನಿ ಚಿಂಚೋಳಿ

ತಾಲ್ಲೂಕಿನಾದ್ಯಂತ ಪಟ್ಟಣ ಸೇರಿದಂತೆ ಗ್ರಾಮೀಣ ಪ್ರದೇಶಗಳಲ್ಲಿ ಕಳೆದ ಮೂರ್ನಾಲ್ಕು ದಿನಗಳಿಂದ ಬಿರುಗಾಳಿ ಸಹಿತ ಧಾರಾಕಾರ ಮಳೆ ಸುರಿಯುತ್ತಿರುವುದರಿಂದ ಹೊಲಗದ್ದೆಗಳು,ಹಳ್ಳ ಕೊಳ್ಳಗಳು,ನಾಲೆಗಳಲ್ಲಿ ಹೊಸ ನೀರು ಹರಿಯುತ್ತಿವೆ ಇದರಿಂದ ಹೊಲಗದ್ದೆಗಳಲ್ಲಿ ಕೆರೆಯಂತೆ ನೀರು ನಿಂತ್ತಿವೆ.

ತಾಲ್ಲೂಕಿನ ರೈತರಿಗೆ ಬೆಳೆ ಬೆಳೆಸಲು ಅತ್ಯಂತ ಅವಶ್ಯಕವಾಗಿರುವ ಚಂದ್ರಂಪಳ್ಳಿ ಕೆರೆ ಹಾಗೂ ನಾಗಾರಾಳ ಕೆರೆಗಳಲ್ಲಿ ಅಲ್ಪಸ್ವಲ್ಪ ಹೊಸ ನೀರು ಬಂದಿವೆ ಹಾಗೂ ಮುಲ್ಲಾಮಾರಿ ನದಿ ಸೇರಿದಂತೆ ಸುಲೇಪೇಟ ನಾಲಾ,ಚಿಮ್ಮಾಯಿದ್ಲಾಯಿ ನಾಲಾ,ದೇಗಲಮಡಿ ನಾಲಾಗಳು ಧಾರಾಕಾರ ಮಳೆಯಿಂದ ಹೊಸ ನೀರು ಆಗಮನದಿಂದ ನಾಲಾ ನದಿಗಳು ಹರಿಯುತ್ತಿವೆ ಇದರಿಂದ ರೈತರ ಹೊಲಗದ್ದೆಗಳು ಮಳೆಯಿಂದ ನೆನೆದು ಹೊಲಗಳಲ್ಲಿ ನೀರು ಸಂಗ್ರಹವಾಗಿ ಕೆರೆಯಂತೆ ನೀರು ನಿಂತ್ತಿವೆ.

ಮೂರ್ನಾಲ್ಕು ದಿನಗಳಿಂದ ಬಿರುಗಾಳಿ ಸಹಿತ ಧಾರಾಕಾರವಾಗಿ ಸುರಿಯುತ್ತಿರುವ ಮಳೆಯಿಂದ ಪಟ್ಟಣದ ಸೇರಿದಂತೆ ಗ್ರಾಮೀಣ ಪ್ರದೇಶಗಳಲ್ಲಿ ಆಗಾಗ ವಿದ್ಯುತ್ ಸಂಪರ್ಕ ಕಡಿತಗೊಳ್ಳುತ್ತಿದೆ.





ಉದಯವಾಹಿನಿ ಚಿತ್ರ

ಹೊಲಗಳಲ್ಲಿ ನಿಂತ ನೀರು

ಮತ್ತೊಂದೆಡೆ ಮುಖ್ಯರಸ್ತೆಗಳಿಗೆ ಹಳೆಯ ಗಿಡಮರಗಳು ಉರುಳಿ ಬಿಳುತ್ತಿವೆ ಟ್ರಾಫಿಕ್ ಸಮಸ್ಯೆಯಿಂದ ಸಾರ್ವಜನಿಕರು ತೊಂದರೆ ಅನುಭವಿಸುತ್ತಿದರೆ ಜನರಿಗೆ ಅನುಕೂಲ ಕಲ್ಪಿಸಲು ಅರಣ್ಯ ಇಲಾಖೆಯ ಅಧಿಕಾರಿಗಳು ರಸ್ತೆಗಳಿಗೆ ಬಿದ್ದಿರುವ ಮರಗಿಡಗಳು ತೆರವುಗೊಳಿಸುವ ಕಾರ್ಯದಲ್ಲಿ ತೊಡಗಿದ್ದಾರೆ.

ಮತ್ತೊಂದೆಡೆ ಬಿರುಗಾಳಿ ಸಹಿತ ಧಾರಾಕಾರ ಮಳೆಗೆ ತಾಲ್ಲೂಕಿನ ಕುಂಚಾವರಂ ವ್ಯಾಪ್ತಿಯ ಲಿಂಗನಗರ ತಾಂಡಾದಲ್ಲಿ ಮನೆಯ ಮೇಲ್ಛಾವಣಿ ಕುಸಿದು ಬಿದ್ದರೆ ಗಾರಂಪಳ್ಳಿ ಗ್ರಾಮದಲ್ಲಿ ಒಂದು ಕಡೆಯ ಗೋಡೆ ಕುಸಿದು ಬಿದ್ದಿದೆ ಹಾಗೂ ವಿವಿಧೆಡೆ ಸಣ್ಣಪುಟ್ಟ ಗೋಡೆ ಇನ್ನಿತರ ಘಟನೆಗಳು ಜರುಗಿವೆ ಎಂಬುವ ಮಾಹಿತಿ ಸಿಕ್ಕಿದೆ.

**ಮೇ 19ರ ಸೋಮವಾರ ಮಳೆ ವಿವರ:-** ಚಿಂಚೋಳಿ 40.4ಮೀಮೀ,ಕುಂಚಾವರಂ 50.4ಮೀಮೀ,ಐನಾಪುರ 07.7ಮೀಮೀ,ಸುಲೇಪೇಟ 08.8ಮೀಮೀ,ಚಿಮ್ಮನಚೋಡ 04.0ಮೀಮೀ,ಕೋಡ್ಲಿ 24.2ಮೀಮೀ,ನೀಡಗುಂದಾ 00.0ಮೀಮೀ,ಮಳೆ ಮಾಪನ ಕೇಂದ್ರಗಳ ಮಳೆ ವರದಿಯಾಗಿದೆ.

**ಮೇ 20ರ ಮಂಗಳವಾರ ಮಳೆ ವಿವರ:-** ಚಿಂಚೋಳಿ 02.2ಮೀಮೀ,ಕುಂಚಾವರಂ 00.0ಮೀಮೀ,ಐನಾಪುರ 12.5ಮೀಮೀ,ಸುಲೇಪೇಟ 00.0ಮೀಮೀ,ಚಿಮ್ಮನಚೋಡ 03.0ಮೀಮೀ,ಕೋಡ್ಲಿ 04.4ಮೀಮೀ,ನೀಡಗುಂದಾ 00.0ಮೀಮೀ ಮಳೆಯಾಗಿದೆ.



ಕಳೆದ ಒಂದು ತಿಂಗಳಲ್ಲಿ ಆಗಾಗ ಬಿರುಗಾಳಿ ಸಹಿತ ಧಾರಾಕಾರವಾಗಿ ಸುರಿಯುತ್ತಿರುವ ಮಳೆಯಿಂದ ಹಾಗೂ ಸಿಡಿಲಿನಿಂದ ಹಾಗೂ ವಿದ್ಯುತ್ ಶಾಕ್‌ನಿಂದ ಅಣವಾರ,ಕುಂಚಾವರಂ ವ್ಯಾಪ್ತಿ,ಹಾಗೂ ರುಸ್ತಾಂಪುರ ಮತ್ತು ಚಂದನಕೇರಾ ಸೇರಿದಂತೆ ಐದಾರು ಧನಕರುಗಳು ಮೇಕೆಗಳು ಮೃತಪಟ್ಟಿವೆ,ಮೂರ್ನಾಲ್ಕು ಮನೆಗಳು ಕುಸಿದು ಬಿದ್ದಿವೆ ಈಗಾಗಲೇ ಪರಿಶೀಲಿಸಿ ನೈಸರ್ಗಿಕ ವಿಕೋಪದಡಿ ಪರಿಹಾರ ನೀಡಲಾಗುತ್ತಿದೆ.

– ವೆಂಕಟೇಶ ದುಗ್ಗನ್, ಗ್ರೇಡ್2 ತಹಶೀಲ್ದಾರ್ ಚಿಂಚೋಳಿ.



ಮಳೆ ದಿನಾಲು ಬರುತ್ತಿದೆ ಎಂದು ರೈತರು ಬಿತ್ತನೆ ಮಾಡಬೇಡಿ ವಾತಾವರಣದಲ್ಲಿ ಬಿಸಿಲಿನ ತಾಪಯಿದೆ ಮಳೆ ಬಾರದೆ ಇದ್ದಲ್ಲಿ ಬಿತ್ತನೆ ಮಾಡಿದ ಬೀಜಗಳ ಮೊಳಕೆಗಳು ಒಣಗುವ ಸಾಧ್ಯತೆ ಇರುತ್ತದೆ. ಜೂನ್ ತಿಂಗಳಿನಲ್ಲಿ ರೈತರು ಬಿತ್ತನೆ ಮಾಡಿ ಕೃಷಿ ಇಲಾಖೆ ವತಿಯಿಂದ ಬಿತ್ತನೆ ಮಾಹಿತಿ ನೀಡಲಾಗುವುದು,ಈಗಾಗಲೇ ರೈತರಿಗೋಸ್ಕರ ತಾಲ್ಲೂಕಿನ ಆಯಾ ವಲಯದ ಕೃಷಿ ಬೀಜೋತ್ಪಾದನಾ ಕೇಂದ್ರದಲ್ಲಿ ಬೀಜಗಳನ್ನು ರಸಗೊಬ್ಬರ ದಾಸ್ತಾನು ಮಾಡಲಾಗುತ್ತಿದೆ,ರೈತರು ಬೀಜಗಳನ್ನು ತೆಗೆದುಕೊಂಡು ಹೋಗಿ ದಾಸ್ತಾನು ಮಾಡಿಕೊಳ್ಳಿ.

– ವೀರಶೇಟ್ಟಿ ರಾಠೋಡ್, ಸಹಾಯಕ ಕೃಷಿ ನಿರ್ದೇಶಕರು ಚಿಂಚೋಳಿ

## ಅಕ್ಟೋಬರ್‌ನಲ್ಲಿ ಕಟಪಾಡಿ ಓವರ್ಪಾಸ್ ಕಾಮಗಾರಿ ಆರಂಭ



ಉದಯವಾಹಿನಿ ಚಿತ್ರ

• ಉದಯವಾಹಿನಿ ಕಾಪು

ರಾಷ್ಟ್ರೀಯ ಹೆದ್ದಾರಿ 66 ರ ಕಟಪಾಡಿ ಜಂಕ್ಷನ್ ಬಳಿ ವಾಹನ ದಟ್ಟಣೆ ಕಡಿಮೆ ಮಾಡುವ ನಿಟ್ಟಿನಲ್ಲಿ ಓವರ್ ಪಾಸ್ ಮಂಜೂರಾಗಿ ಟೆಂಡರ್ ಪ್ರಕ್ರಿಯೆ ಮುಗಿದಿದ್ದು ಈ ಸಂಬಂಧ ಇಂದು ಸಂಸದ ಕೋಟ ಶ್ರೀನಿವಾಸ ಪೂಜಾರಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ವಿಚಾರವಾಗಿ ಸಂಸದರು ಕಾಪು ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಹಾಗೂ ರಾಷ್ಟ್ರೀಯ ಹೆದ್ದಾರಿ ಇಲಾಖಾಧಿಕಾರಿಗಳೊಂದಿಗೆ ಚರ್ಚಿಸಿದರು. ಈಗಾಗಲೇ ಉಡುಪಿಯ ಕಲ್ಯಾಣಪುರ ಸಂತೆಕಟ್ಟೆ ಬಳಿ ಓವರ್ ಪಾಸ್ ಕಾಮಗಾರಿ ಹಾಗೂ ಅಂಬಲಪಾಡಿ ಜಂಕ್ಷನ್ ಬಳಿ ಅಂಡರ್ ಪಾಸ್ ಕಾಮಗಾರಿ ಪ್ರಗತಿಯಲ್ಲಿ ಇರುವುದರಿಂದ ಜೊತೆಗೆ ಮಳೆಗಾಲ ಸಮೀಪಿಸುತ್ತಿರುವುದರಿಂದ ಮುಂದಿನ ಅಕ್ಟೋಬರ್ ತಿಂಗಳಿನಲ್ಲಿ ಕಟಪಾಡಿಯ ಓವರ್ಪಾಸ್ ಕಾಮಗಾರಿ ಆರಂಭಿಸುವುದಾಗಿ ಸಂಸದರು ತಿಳಿಸಿದರು.

## ರೈತರಿಗೆ ಹೆಚ್ಚಿನ ದರಕ್ಕೆ ರಸಗೊಬ್ಬರ ಮಾರಾಟ ಹಿನ್ನೆಲೆ ಜಂಟಿ ಕೃಷಿ ನಿರ್ದೇಶಕರಿಂದ ಅಂಗಡಿಗಳ ಮೇಲೆ ದಿಢೀರ್ ದಾಳಿ

• ಉದಯವಾಹಿನಿ ಕಲಬುರಗಿ

ರೈತರಿಂದ ಎಂ.ಆರ್.ಪಿ. ದರಕ್ಕಿಂತ ಹೆಚ್ಚಿಗೆ ಹಣ ಪಡೆದು ಡಿ.ಎ.ಪಿ. ರಸಗೊಬ್ಬರ ಮಾರಾಟ ಮಾಡುತ್ತಿದ್ದಾರೆ ಎಂಬ ದೂರಿನ ಹಿನ್ನೆಲೆಯಲ್ಲಿ ಮಂಗಳವಾರ ಜಂಟಿ ಕೃಷಿ ನಿರ್ದೇಶಕ ಸಮದ್ ಪಟೇಲ್ ನೇತೃತ್ವದ ಕೃಷಿ ಅಧಿಕಾರಿಗಳ ತಂಡ ಕಲಬುರಗಿ ನಗರದ ಗಂಜ್ ಪ್ರದೇಶದಲ್ಲಿರುವ ರಸಗೊಬ್ಬರ ಮಾರಾಟ ಅಂಗಡಿಗಳಿಗೆ ಅನಿರೀಕ್ಷಿತ ದಾಳಿ ಮಾಡಿ ತಪಾಸಣೆ ಮಾಡಿತು.

ಗಂಜ್ ಏರಿಯಾದ ಚಂದ್ರಿಕಾ ಅಗ್ರೋ ಸಿಂಡಿಕೇಟ್, ಭುವನೇಶ್ವರಿ ಕೃಷಿ ಕೇಂದ್ರ, ಚನ್ನವೀರ ಅಗ್ರೋ ಕೆಮಿಕಲ್ಸ್, ಪದ್ಮಾವತಿ ಟ್ರೇಡರ್ಸ್, ಬಕ್ಕಮಪ್ರಭು ಅಗ್ರೋ ಕೇಂದ್ರ, ಬಸವ ಅಗ್ರೋ ಏಜೆನ್ಸಿ, ವೀರಭದ್ರೇಶ್ವರ ಕೃಷಿ ಭಂಡಾರ ಹಾಗೂ ಇತರೆ ರಸಗೊಬ್ಬರ ಮಾರಾಟಗಾರರ ಅಂಗಡಿಗಳ ಭೇಟಿ ನೀಡಿ ರಸಗೊಬ್ಬರ ದಾಸ್ತಾನಿನ ವಿವರ ಮತ್ತು ಪಾಯಿಂಟ್ ಆಫ್ ಸೇಲ್ ದಾಸ್ತಾನನ್ನು





ಉದಯವಾಹಿನಿ ಚಿತ್ರ

ಪರಿಶೀಲಿಸಲಾಯಿತು. ಇನ್ನು ಕಾಟನ್ ಮಾರ್ಕೆಟ್‌ನಲ್ಲಿರುವ ಗೋದಾಮುಗಳಿಗೆ ಭೇಟಿ ನೀಡಿದ ತಂಡ Fertilizer control order- 1985 -ಉಲ್ಲಂಘನೆ ಕುರಿತು ಸಹ ಪರಿಶೀಲಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಜಂಟಿ ಕೃಷಿ ನಿರ್ದೇಶಕ ಸಮದ್ ಪಟೇಲ್ ಅವರು, ರಸಗೊಬ್ಬರ ಹೆಚ್ಚಿನ ಬೆಲೆಗೆ ಮಾರಾಟ ಮಾಡಬಾರದೆಂದು ಈಗಾಗಲೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಇದಾದ ಮೇಲೂ ಅನಾವಶ್ಯಕವಾಗಿ ರೈತರಿಂದ ನಿಗಧಿತ ಬೆಲೆಗಿಂತ ಹೆಚ್ಚಿನ ಹಣ ವಸೂಲಿ ಮಾಡಿದಲ್ಲಿ ಅಂತಹವರ ಮೇಲೆ ನಿರ್ದಾಕ್ಷಿಣ್ಯವಾಗಿ ಶಿಸ್ತಿನ ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಿದಲ್ಲದೆ ಮುಂದಿನ ದಿನಗಳಲ್ಲಿ ತಾಲ್ಲೂಕ ಮಟ್ಟದಲ್ಲಿ ಸಹ ಇದೇ ರೀತಿಯಾಗಿ ಅನಿರೀಕ್ಷಿತ ದಾಳಿ ಮಾಡಲಾಗುವುದೆಂದು ತಿಳಿಸಿದರು.

### ರಸಗೊಬ್ಬರ ಕೊರತೆ ಇಲ್ಲ

ಜಿಲ್ಲೆಯಲ್ಲಿ ಯಾವುದೇ ರೀತಿಯ ರಸಗೊಬ್ಬರದ ಕೊರತೆ ಇರುವುದಿಲ್ಲ. ರೈತ ಭಾಂದವರು ಆತಂಕಕ್ಕೆ ಒಳಗಾಗುವ ಅವಶ್ಯಕತೆ ಇಲ್ಲ ಎಂದು ಸ್ಪಷ್ಟಪಡಿಸಿರುವ ಸಮದ್ ಪಟೇಲ್ ಅವರು, ಜಿಲ್ಲೆಯಲ್ಲಿ ಒಟ್ಟಾರೆಯಾಗಿ ಡಿ.ಎ.ಪಿ, ಯೂರಿಯಾ, ಇತರೆ ರಸಗೊಬ್ಬರ ಒಳಗೊಂಡಂತೆ 30,000 ಮೆಟ್ರಿಕ್ ಟನ್‌ಕ್ಕಿಂತಲೂ ಹೆಚ್ಚು ದಾಸ್ತಾನಿದೆ. ಲಭ್ಯವಿರುವ ರಸಗೊಬ್ಬರ ಪಡೆದು ಬಿತ್ತನೆ ಮಾಡುವಂತೆ ರೈತರಲ್ಲಿ ಮನವಿ ಮಾಡಿಕೊಂಡಿದ್ದಾರೆ.

## ಜಾನುವಾರುಗಳ ರಕ್ಷಣೆ

• ಉದಯವಾಹಿನಿ ಬೇಲೂರು

ಅಕ್ರಮವಾಗಿ ಕಸಾಯಿ ಖಾನೆಗೆ ಸಾಗಿಸುತ್ತಿದ್ದ ಜಾನುವಾರುಗಳನ್ನು ಮಂಗಳವಾರ ಪೊಲೀಸರು ರಕ್ಷಿಸಿ, ವಾಹನ ಚಾಲಕ ಹಾಸನದ ಖಲೀಲ್ ಪಾಷಾ(30)ನನ್ನು ಬಂಧಿಸಿದರು.

ವಿಶ್ವ ಹಿಂದೂ ಪರಿಷತ್ ಕಾರ್ಯಕರ್ತರ ಮಾಹಿತಿ ಅನ್ವಯ ಪೊಲೀಸರು ದಾಳಿ ನಡೆಸಿದಾಗ ಆರೋಪಿ ಹಾಸನದ ಕಡೆಯಿಂದ ಚಿಕ್ಕಮಗಳೂರು ಕಡೆಗೆ ಸರಕು ಸಾಗಾಣಿಕೆ ವಾಹನದಲ್ಲಿ ಸಾಗಿಸುತ್ತಿರುವುದು ಖಚಿತವಾಯಿತು.

ಕೂಡಲೆ ಪಿಎಸ್ಐ ಶಿವನಗೌಡ ಪಾಟೀಲ್ ನೇತೃತ್ವದಲ್ಲಿ ಪಟ್ಟಣದ ರಾಯಪುರ ಗ್ರಾಮದ ಬಳಿ ಅತಿ ವೇಗವಾಗಿ ಚಲಿಸುತ್ತಿದ್ದ ವಾಹನ ಅಡ್ಡಗಟ್ಟಿ ಪರಿಶೀಲಿಸಿದರು. ಅಲ್ಲಿ ಜಾನುವಾರು ಕಂಡು ಬಂದವು. ಬೇಲೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ, ಜಾನುವಾರುಗಳನ್ನು ಗೋ ಶಾಲೆಗೆ ಕಳುಹಿಸಿಕೊಡಲಾಯಿತು. ವಿಶ್ವ ಹಿಂದೂ ಪರಿಷತ್ ತಾಲ್ಲೂಕು ಘಟಕದ ಪ್ರಧಾನ ಕಾರ್ಯದರ್ಶಿ ನಾಗೇಶ್ (ಗುಂಡ) ಮಾತನಾಡಿ, ಪೊಲೀಸ್, ಪುರಸಭೆ ಹಾಗೂ ಕಂದಾಯ ಇಲಾಖೆ ತಿಂಗಳಿಗೊಮ್ಮೆ ಗೋ ಮಾಂಸ ಅಡ್ಡೆಗಳ ಮೇಲೆ ದಾಳಿ ನಡೆಸುತ್ತಿವೆ. ಆದರೂ, ಪಟ್ಟಣದಲ್ಲಿ ಕದ್ದುಮುಚ್ಚಿ ಮಾರಾಟ ಮಾಡಲಾಗುತ್ತಿದೆ ಎಂದರು.

## ಪರೀಕ್ಷೆಗಳನ್ನು ವ್ಯವಸ್ಥಿತವಾಗಿ ನಡೆಸಲು ಕ್ರಮ ವಹಿಸಿ

• ಉದಯವಾಹಿನಿ ಗದಗ

ಜಿಲ್ಲೆಯಲ್ಲಿ 2025 ನೇ ಎಸ್‌ಎಸ್‌ಎಲ್‌ಸಿ ಪರೀಕ್ಷೆ-2 ಪರೀಕ್ಷೆಗಳು ಮೇ 26 ರಿಂದ ಜೂನ್ 2 ರವರೆಗೆ ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 1.45 ಗಂಟೆಯವರೆಗೆ ನಡೆಯಲ್ಲಿದ್ದು, ಪರೀಕ್ಷೆಗಳನ್ನು ವ್ಯವಸ್ಥಿತವಾಗಿ ಅಚ್ಚುಕಟ್ಟಾಗಿ ನಡೆಸಲು ಕ್ರಮ ವಹಿಸಬೇಕೆಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ತಿಳಿಸಿದರು.

ಗದಗ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ-2 ಕುರಿತು ಜರುಗಿದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಪರೀಕ್ಷೆಗಳಲ್ಲಿ ಯಾವುದೇ ಅಕ್ರಮಗಳು ಅವ್ಯವಹಾರಗಳು ನಡೆಯದಂತೆ ನೋಡಿಕೊಳ್ಳಬೇಕು. ಜಿಲ್ಲೆಯ ಒಟ್ಟು 20 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆಯಲಿದ್ದು ಅಲ್ಲಿ ಕುಡಿಯುವ ನೀರು, ವಿದ್ಯುತ್ ವ್ಯವಸ್ಥೆ ಸೇರಿದಂತೆ ಮೂಲಭೂತ ಸೌಲಭ್ಯಗಳು ಇರುವಂತೆ ನೋಡಿಕೊಳ್ಳಬೇಕು.

ಪರೀಕ್ಷಾ ಅವಧಿಯಲ್ಲಿ ಪರೀಕ್ಷಾ ಕೇಂದ್ರಗಳ ಸುತ್ತ ನಿಷೇಧಾಜ್ಞೆ ಜಾರಿಗೊಳಿಸಲಾಗಿದ್ದು ಪರೀಕ್ಷಾ ಅವಧಿಯಲ್ಲಿ ಯಾವುದೇ ಲೋಪ ದೋಷಗಳಾಗದಂತೆ ಕ್ರಮ ವಹಿಸಬೇಕೆಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ನಿರ್ದೇಶನ ನೀಡಿದರು.

ಸಭೆಯಲ್ಲಿ ಪರೀಕ್ಷಾ ಕೇಂದ್ರಗಳ ಸುತ್ತ ಸೂಕ್ತ ಪೊಲೀಸ ಬಂದೋಬಸ್ತ, ಮಾರ್ಗಾಧಿಕಾರಿಗಳ ವಾಹನ ವ್ಯವಸ್ಥೆ ಕುರಿತು ಚರ್ಚಿಸಲಾಯಿತು. ಸಭೆಯಲ್ಲಿ ಪರೀಕ್ಷಾ ಕೇಂದ್ರ ಮುಖ್ಯಸ್ಥರು, ವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.



ಉದಯವಾಹಿನಿ ಚಿತ್ರ

ಎಸ್‌ಎಸ್‌ಎಲ್‌ಸಿ-2 ಪರೀಕ್ಷೆಗಳು ಮೇ 26 ರಿಂದ ಜೂನ್ 2 ರವರೆಗೆ ಜಿಲ್ಲೆಯ 20 ಪರೀಕ್ಷಾ ಕೇಂದ್ರಗಳಲ್ಲಿ ಜರುಗಲಿದ್ದು ಒಟ್ಟು 5532 ಅಭ್ಯರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಪರೀಕ್ಷಾ ಕೇಂದ್ರಗಳಲ್ಲಿ ಮೂಲಭೂತ ಸೌಲಭ್ಯ ಒದಗಿಸಲು ಕ್ರಮ ವಹಿಸಲಾಗಿದೆ. ಪರೀಕ್ಷೆಗಳು ಸುಗಮವಾಗಿ ನಡೆಯಲು ಸಕಲ ಸಿದ್ಧತೆಗೆ ಕ್ರಮ ವಹಿಸಲಾಗಿದೆ

-ಆರೆಸ್‌ಬುರುಡಿ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ

## ಸಮಾವೇಶಕ್ಕೆ ಬಸ್‌ಗಳ ಬಳಕೆ: ಪ್ರಯಾಣಿಕರ ಪರದಾಟ



ಉದಯವಾಹಿನಿ ಚಿತ್ರ

• ಉದಯವಾಹಿನಿ ಯಲಬುರ್ಗಾ

ನೆರೆಯ ವಿಜಯನಗರ ಜಿಲ್ಲೆಯ ಹೊಸಪೇಟೆಯಲ್ಲಿ ರಾಜ್ಯ ಸರ್ಕಾರ ಹಮ್ಮಿಕೊಂಡಿರುವ ಸಾಧನಾ ಸಮಾವೇಶ ಹಾಗೂ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಣಾ ಕಾರ್ಯಕ್ರಮಕ್ಕೆ ಜನರನ್ನು ಕರೆದೊಯ್ಯಲು ಹೋಗಲು ಸಾರಿಗೆ ಸಂಸ್ಥೆಯ ಬಸ್‌ಗಳನ್ನು ಬಳಸಿಕೊಂಡಿರುವ ಹಿನ್ನೆಲೆಯಲ್ಲಿ ಸಾಮಾನ್ಯ ಪ್ರಯಾಣಿಕರಿಗೆ ಸೂಕ್ತ ಸಾರಿಗೆ ಸೇವೆ ಲಭ್ಯವಾಗದೇ ಪರದಾಡಬೇಕಾಯಿತು. ತಾಲ್ಲೂಕಿನ ವಿವಿಧ ಗ್ರಾಮಗಳಿಂದ ಶಾಲೆ, ಕಾಲೇಜು ಹಾಗೂ ವಿವಿಧ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಸರ್ಕಾರಿ ನೌಕರರಿಗೆ ಸಕಾಲದಲ್ಲಿ ಸೇವೆಗೆ ಹಾಜರಾಗಲು ಮತ್ತು ವಿದ್ಯಾರ್ಥಿಗಳಿಗೆ ತರಗತಿಗಳಿಗೆ ಹಾಜರಾಗಲು ತೊಂದರೆಯಾಯಿತು. ಮೇ 19ರ ಸಂಜೆಯಿಂದ 21ರ ಬೆಳಿಗ್ಗೆವರೆಗೆ ದೈನಂದಿನ ಬಸ್ ಸಂಚಾರದಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಸ್ಥಳೀಯ ಘಟಕದ ವ್ಯವಸ್ಥಾಪಕರು ನೋಟಿಸ್ ಜಾರಿಮಾಡಿ ಸಾರ್ವಜನಿಕರ ಗಮನಕ್ಕೆ ತಂದಿದ್ದರು. ಆದರೆ ಹೆಚ್ಚಿನ ಸಂಖ್ಯೆಯ ಪ್ರಯಾಣಿಕರಿಗೆ ಸಾರಿಗೆ ಸೇವೆಯಲ್ಲಿ ವ್ಯತ್ಯಯ ಉಂಟಾಗುವ ಸಂಗತಿ ತಿಳಿಯದೇ ಇದ್ದುದರಿಂದ ನಿತ್ಯ ಸಂಚರಿಸುವ ವಿದ್ಯಾರ್ಥಿಗಳು ಹಾಗೂ ಪ್ರಯಾಣಿಕರು ಸಾಕಷ್ಟು ಸಂಖ್ಯೆಯಲ್ಲಿ ನಿಲ್ದಾಣಕ್ಕೆ ಬಂದು ಬಸ್‌ಗಳಿಗೆ ಕಾಯ್ದರು.

ಪ್ರತಿ ಗ್ರಾ.ಪಂಗೆ ಎರಡು ಬಸ್‌ಗಳಂತೆ ತಾಲ್ಲೂಕಿನ ಎಲ್ಲಾ ಗ್ರಾ.ಪಂಗಳಿಂದ ಹೊಸಪೇಟೆಯ ಸಮಾವೇಶಕ್ಕೆ ವಿವಿಧ ಯೋಜನೆಗಳ ಫಲಾನುಭವಿಗಳು ಹಾಗೂ ಬೆಂಬಲಿಗರು ಸೇರಿ ಸುಮಾರು 4 ಸಾವಿರ ಸಂಖ್ಯೆಯ ಜನರನ್ನು ಕರೆದುಕೊಂಡು ಹೋಗಿವೆ. ಕುಕನೂರು ಮತ್ತು ಯಲಬುರ್ಗಾ ಘಟಕವನ್ನು ಒಳಗೊಂಡು ಒಟ್ಟು 71 ಬಸ್‌ಗಳು ಸಮಾವೇಶದ ಸೇವೆಯಲ್ಲಿ ನಿತರವಾಗಿದ್ದರಿಂದ ಜನಸಾಮಾನ್ಯರ ಸಾರಿಗೆ ಸೇವೆಗೆ ಅಲಭ್ಯವಾಗಿವೆ. ಈ ಕಾರಣದಿಂದ ಸಕಾಲದಲ್ಲಿ ಸಾರಿಗೆ ಸೇವೆ ದೊರೆಯದೇ ಪ್ರಯಾಣಿಕರು ಪರದಾಡಬೇಕಾಯಿತು.

## ಶವ ಪರೀಕ್ಷೆ ವರದಿ ನೀಡಲು ಲಂಚ: ವೈದ್ಯನ ಬಂಧನ

• ಉದಯವಾಹಿನಿ ಶಿಕಾರಿಪುರ

ಪಟ್ಟಣದ ಸರ್ಕಾರಿ ಆಸ್ಪತ್ರೆ ವೈದ್ಯರೊಬ್ಬರು ಶವ ಪರೀಕ್ಷೆ ವರದಿ ನೀಡುವುದಕ್ಕಾಗಿ ಮಂಗಳವಾರ ಲಂಚ ಪಡೆಯುವ ವೇಳೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ ವೈದ್ಯರನ್ನು ಬಂಧಿಸಿದ್ದಾರೆ. ವೈದ್ಯ ಗೋಪಾಲ್ ಜಿ.ಹರಿಗಿ ಬಂಧಿತ ವೈದ್ಯ.



ಉದಯವಾಹಿನಿ ಚಿತ್ರ

ಸತೀಶ್ ಮಂಚಿ ಎಂಬುವರ ಶವ ಪರೀಕ್ಷೆ ವರದಿ ನೀಡುವುದಕ್ಕೆ ತಾಲ್ಲೂಕಿನ ಕಪ್ಪನಹಳ್ಳಿ ಗ್ರಾಮದ ಎನ್.ವೈ. ಸುನೀಲ್ ಅರ್ಜಿ ಸಲ್ಲಿಸಿದ್ದರು.

ವರದಿ ನೀಡುವುದಕ್ಕೆ ವೈದ್ಯರು 20,000 ಲಂಚದ ಬೇಡಿಕೆ ಇಟ್ಟಿದ್ದರು. ಹಣ ನೀಡುವಾಗ ವೈದ್ಯರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿ ಶಿವಮೊಗ್ಗ ಲೋಕಾಯುಕ್ತ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ. ಲೋಕಾಯುಕ್ತ ಇನ್‌ಸ್ಪೆಕ್ಟರ್ ಗುರುರಾಜ್, ಯೋಗೀಶ್, ಮಂಜುನಾಥ್, ಸುರೇಂದ್ರ,ಚನ್ನೇಶ್, ದೇವರಾಜ್ ಇತರೆ ಸಿಬ್ಬಂದಿ ದಾಳಿಯಲ್ಲಿ ಪಾಲ್ಗೊಂಡಿದ್ದರು.

## ಕಣ್ಮನ ಸೆಳೆಯುವ ಕಾರಟಗಿ ಅಗ್ನಿಶಾಮಕ ಠಾಣೆಯ ಸುಂದರವಾದ ಉದ್ಯಾನವನ ಇಲಾಖೆಯ ಕಾಯಕದ ಜೊತೆಗೆ ಪರಿಸರ ಕಾಳಜಿ ವಹಿಸಿದ ಅಗ್ನಿಶಾಮಕ ಇಲಾಖೆ

• ಉದಯವಾಹಿನಿ ಕಾರಟಗಿ

ಇಲ್ಲಿಗೆ ಬಂದವರಿಗೆ ಉದ್ಯಾನವನಕ್ಕೆ ಬಂದಂತೆ ಭಾಸವಾಗುತ್ತದೆ ಇದು ಅಗ್ನಿ ಶಾಮಕ ಠಾಣೆ ಅನ್ನೋದನ್ನೆ ಮೈಮರೆಸುತ್ತದೆ ಇಲ್ಲಿನ ಪ್ರಕೃತಿ ಸೌಂದರ್ಯ, ಹೌದು ಕಾರಟಗಿ ಪಟ್ಟಣದ 14 ನೇ ವಾರ್ಡ್ ರಾಮನಗರದ ನವಲಿ ರಸ್ತೆಯಲ್ಲಿರುವ ಕಾರಟಗಿ ಅಗ್ನಿಶಾಮಕ ಠಾಣೆಯ ಕಛೇರಿ ಹಾಗೂ ಆವರಣದಲ್ಲಿರುವ ಉದ್ಯಾನವನ ನೋಡಲು ತುಂಬಾ ಸೊಗಸಾಗಿದೆ.

ಠಾಣೆಯ ಪೆಂಟ್, ಇಲಾಖೆ ಹೆಸರಿನ ಬೋರ್ಡ್‌ನ್ನು ನೋಡಿ ದಾರಿಯಲ್ಲಿ ಹೋಗುವ ಸಾರ್ವಜನಿಕರು ತುಂಬಾ ಚೆನ್ನಾಗಿ ಕಾಣುತ್ತಿರುವ ದೃಶ್ಯ ಕಂಡು ಬರುತ್ತಿದೆ. ಮತ್ತು ಈ ಠಾಣೆಯ ಆವರಣದಲ್ಲಿ ಸಿಬ್ಬಂದಿಯವರ ವಸತಿ ಗೃಹದ ಪಕ್ಕದಲ್ಲಿ ಸ್ವತಃ ಸಿಬ್ಬಂದಿಯವರೆ ನಿರ್ಮಿಸಿರುವ ಒಂದು ಉದ್ಯಾನವನವು ಕೂಡ ಇದೆ, ಈ ಗಾರ್ಡನ್‌ನಲ್ಲಿ ವಿಶೇಷವಾಗಿ ಮಕ್ಕಳು ಆಟವಾಡುವ ಜೋಕಾಲಿ, ಕುದರೆ, ಬಾತುಕೋಳಿ, ಜಾರು ಬಂಡಿ, ಮರಳು, ಮತ್ತು ಆಸನದ ಸಿಮೆಂಟ್‌ನ ಚೇರ್‌ಗಳು, ವಾಕಿಂಗ್ ಮಾಡುವ ಫುಟ್ಪಾತ್, ಹಾಗೂ ನಾಣ್ಣುಡಿಗಳು ದುರಂತ್ ಪ್ಲಾಂಟ್, ಇನ್ನಿತರ ಪ್ಲಾಂಟ್‌ನ ಗಿಡಗಳನ್ನು ನೆಡಿಸಿ ಈ ಒಂದು ಸುಂದರ ಉದ್ಯಾನವನ್ನು ನಿರ್ಮಿಸಿರುವುದು ಇವೆಲ್ಲವೂ ನೋಡುಗರ ಗಮನ ಸೆಳೆಯುಂತಿವೆ.



ಉದಯವಾಹಿನಿ ಚಿತ್ರ

ನೋಡಲು ತುಂಬಾ ಸೊಗಸಾಗಿದೆ

ಇಲ್ಲಿನ ಠಾಣೆಯ ಅಧಿಕಾರಿ/ಸಿಬ್ಬಂದಿಯವರ ಮಕ್ಕಳು, ಹಾಗೂ ಅವರ ಕುಟುಂಬದವರು ಆಟವಾಡುವ ಸ್ಥಳವನ್ನು ನೋಡಿ, ರಸ್ತೆಯಲ್ಲಿ ವಾಕಿಂಗ್ ಹೋಗುವ ಸಾರ್ವಜನಿಕರು, ಬ್ಯಾಂಕ್ ನೌಕರರು, ಗಣ್ಯ ವ್ಯಕ್ತಿಗಳು ಠಾಣೆಯ ಗಾರ್ಡನ್ ಭೇಟಿ ಕೊಟ್ಟು ಇಲಾಖೆಯ ಪರಿಸರ ಕಾಳಜಿ ಬಗ್ಗೆ ಹಾಗೂ ಈ ಠಾಣೆಯ ಬಗ್ಗೆ ವಿಶೇಷ ಮೆಚ್ಚುಗೆ ವ್ಯಕ್ತಪಡಿಸಿರುತ್ತಾರೆ.

ಹಾಗೂ ಠಾಣೆಯ ಸಿಬ್ಬಂದಿಯವರು ಬಿಡುವಿನ ವೇಳೆ ಶ್ರಮದಾನ ಮೂಲಕ ಮಾಡಿದ ಕೆಲಸಕ್ಕೆ ಠಾಣೆಯ ಪ್ರಭಾರ ಅಗ್ನಿಶಾಮಕ ಠಾಣಾಧಿಕಾರಿ ಶ್ರೀ ರಾಘವೇಂದ್ರ, ಈಳಿಗೇರರವರು ಸಿಬ್ಬಂದಿಯವರಿಗೆ ಅಭಿನಂದನೆ ಸಲ್ಲಿಸಿದ್ದಾರೆ. ಮತ್ತು ಸಾರ್ವಜನಿಕರು ತುರ್ತು ಅಗ್ನಿ ಕರೆ/ ರಕ್ಷಣಾ ಕರೆಗಾಗಿ ಠಾಣೆಯ ದೂರವಾಣಿ ಸಂಖ್ಯೆ-08533 274600 ಗೆ ಕರೆ ಮಾಡಲು ಕೋರಿರುತ್ತಾರೆ.

## ಸಾಧನಾ ಸಮಾವೇಶಕ್ಕೆ 3 ಲಕ್ಷ ಜನ

• ಉದಯವಾಹಿನಿ ಬಳ್ಳಾರಿ

ರಾಜ್ಯದಲ್ಲಿನ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ನಾಳೆಗೆ ಎರಡು ವರ್ಷ ಪೂರ್ಣಗೊಳ್ಳಲಿದೆ. ಸರ್ಕಾರದ ಸಾಧನೆಗಳನ್ನು ತಿಳಿಸಲು ನಾಳೆ ಹೊಸಪೇಟೆಯಲ್ಲಿ ಸಾಧನಾ ಸಮಾವೇಶ ಹಮ್ಮಿಕೊಳ್ಳಲಾಗಿದೆ ಇದಕ್ಕೆ ರಾಜ್ಯದ ವಿವಿಧಡೆಯಿಂದ 3 ಲಕ್ಷ ಜನ ಬರಲಿದ್ದಾರೆ. ಎಲ್ಲರೂ ಸೇರಿ ಇದನ್ನು ಯಶಸ್ವಿಗೊಳಿಸಬೇಕು ಎಂದು ಮಾಜಿ ಸಚಿವ, ಗ್ರಾಮೀಣ ಶಾಸಕ ಬಿ.ನಾಗೇಂದ್ರ ಹೇಳಿದ್ದಾರೆ. ಹೊಸಪೇಟೆ ನಗರದ ಪುನೀತ್ ರಾಜ್‌ಕುಮಾರ್ ಕ್ರೀಡಾಂಗಣದಲ್ಲಿ ನಡೆಯುವ ಸಾಧನಾ ಸಮಾವೇಶದ ಹಿನ್ನೆಲೆ ತಮ್ಮ ಕ್ಷೇತ್ರದ ಕೌಲ್ ಬಜಾರ್ ವ್ಯಾಪ್ತಿಯ 11 ವಾರ್ಡ್ಗಳ ಸದಸ್ಯರು ಹಾಗೂ ಕಾಂಗ್ರೆಸ್ ಪಕ್ಷದ ಮುಖಂಡರು, ಕಾರ್ಯಕರ್ತರ ಪೂರ್ವಭಾವಿ ಸಭೆಯನ್ನುನಿನ್ನೆ ಸಂಜೆ ನಗರದ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ನಡೆಸಿ ಮಾತನಾಡುತ್ತಿದ್ದರು.

ಈ ಸಾಧನಾ ಸಮಾವೇಶದಲ್ಲಿ 3 ಲಕ್ಷ ಜನ ಪಾಲ್ಗೊಳ್ಳುವ ನಿರೀಕ್ಷೆ ಇದೆ. ಒಂದು ಲಕ್ಷ ಫಲಾನುಭವಿಗಳಿಗೆ ಹಕ್ಕು ಪತ್ರ ವಿತರಿಸಲಾಗುವುದು ಹಾಗೂ ಬೇರೆ ಇಲಾಖೆಗಳ ಕಾರ್ಯಕ್ರಮಗಳೂ ಸಹ ಇದರಲ್ಲಿವೆ. ಲೋಕಸಭಾ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ , ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ ಶಿವಕುಮಾರ್ ಹಾಗೂ ಸಚಿವರು ಸಂಸದರು ಶಾಸಕರು ಸಮಾವೇಶದಲ್ಲಿ ಪಾಲ್ಗೊಳ್ಳುವರು.



ಉದಯವಾಹಿನಿ ಚಿತ್ರ

## • ಜಿಲ್ಲೆಯಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಸಮುದ್ರ ತಡೆಗೋಡೆ ನಿರ್ಮಾಣಕ್ಕೆ ಕೋಟ್ಯಂತರ ರೂ. ವಿನಿಯೋಗ

# ಮಳೆಗಾಲ ಬಂತೆಂದ್ರೆ ಸಾಕು ಕಾಸರಗೋಡು ಕರಾವಳಿ ನಿವಾಸಿಗಳಿಗೆ ಭೀತಿ

• ಉದಯವಾಹಿನಿ ಕಾಸರಗೋಡು

ಮುಂಗಾರು ಸಮೀಪಿಸಿರುವುದರಿಂದ ಜಿಲ್ಲೆಯ ಕರಾವಳಿ ನಿವಾಸಿಗಳಲ್ಲಿ ಆತಂಕ ಮನೆ ಮಾಡಿದೆ. ಜಿಲ್ಲೆಯಲ್ಲಿ ಕರಾವಳಿ ಸಂರಕ್ಷಣೆಗಾಗಿ ಕೋಟ್ಯಂತರ ರೂ. ವಿನಿಯೋಗಿಸಿದರೂ ಹಲವು ಯೋಜನೆಗಳು ಪೋಲಾಗುತ್ತಿವೆ. ಸಮುದ್ರ ತಡೆಗೋಡೆ ಮೊದಲಾದ ನಿರ್ಮಾಣ ಕಾಮಗಾರಿಗಳು ಕೂಡ ಪ್ರಯೋಜನಕ್ಕೆ ಬಾರದೆ ನಶಿಸುತ್ತಿವೆ. ಮಳೆಗಾಲದಲ್ಲಿ ಕರಾವಳಿಯ ಜನತೆ ಅತ್ಯಧಿಕ ಅಸುರಕ್ಷತೆಯನ್ನು ಎದುರಿಸುತ್ತಾರೆ. ಸಮುದ್ರ ಪ್ರಕ್ಷುಬ್ಧಗೊಳ್ಳುವಾಗ ಉಗ್ರ ಅಲೆಗಳಿಗೆ ಶಕ್ತಿ ಹೆಚ್ಚುತ್ತದೆ. ಅತಿ ಶಕ್ತಿಯಿಂದ ಅಲೆಗಳು ಅಪ್ಪಳಿಸುವಾಗ ಸಮುದ್ರ ತಡೆಗೋಡೆಗಳು ನಶಿಸುತ್ತವೆ. ಜಿಲ್ಲೆಯಲ್ಲಿ ಕಳೆದ 10 ವರ್ಷಗಳಲ್ಲಿ ಸಮುದ್ರ ತಡೆಗೋಡೆ ನಿರ್ಮಾಣಕ್ಕೇ ಕೋಟ್ಯಂತರ ರೂ. ವಿನಿಯೋಗಿಸಲಾಗಿದೆ.

1. ಮಂಜೇಶ್ವರ ಮತ್ತು ವಲಿಯಪರಂಬದ ಕರಾವಳಿ ಪ್ರದೇಶಗಳಲ್ಲಿ ಸಮುದ್ರ ತಡೆಗೋಡೆಗಳ ನಿರ್ಮಾಣಕ್ಕೆ ಕೋಟ್ಯಂತರ ರೂಪಾಯಿಗಳು ವಿನಿಯೋಗಿಸಲಾದರೂ, ಈ ಯೋಜನೆಗಳು ಕರಾವಳಿಯ ನಿವಾಸಿಗಳಿಗೆ ತೃಪ್ತಿಕರವಾಗಿಲ್ಲ.
2. ಸಮುದ್ರ ತಡೆಗೋಡೆಗಳು ಉಗ್ರ ಅಲೆಗಳಿಂದ ಮನೆಗಳನ್ನು ಕಾಪಾಡಲು ವಿಫಲವಾಗುತ್ತಿವೆ.
3. ಕರಾವಳಿ ನಿವಾಸಿಗಳು ಕಡಲ್ಕೊರೆತ ತಡೆಗಟ್ಟಲು ಕಗ್ಗಲ್ಲಿನ ಗೋಡೆಯ ಬದಲು ಟೆಟ್ರಾಪೋಡ್ ತಂತ್ರಜ್ಞಾನವನ್ನು ಉಪಯೋಗಿಸಲು ಅಧಿಕಾರಿಗಳಿಂದ ಕ್ರಮಗಳನ್ನು ಕೈಗೊಳ್ಳಬೇಕೆಂದು ಒತ್ತಿಸುತ್ತಿದ್ದಾರೆ.

ಕಡಲ ತೀರ ಸಂರಕ್ಷಣೆಗಾಗಿ ಮೂಸೊಡಿಯಲ್ಲಿ ಗ್ರೋಯಿನ್ಸ್ ಫೀಲ್ಡ್‌ನ 2 ಸಮುದ್ರ ತಡೆ ಗೋಡೆಗಳನ್ನು ನಿರ್ಮಿಸಲಾಗಿದೆ.

ಗ್ರೋಯಿನ್ಸ್ ಫೀಲ್ಡ್ ಕರಾವಳಿ ಸಂರಕ್ಷಣೆಗೆ ಹಾಗೂ ಮಣ್ಣು ಕೊಚ್ಚಿ ಹೋಗುವುದನ್ನು ತಡೆಗಟ್ಟಲು ಕಡಲ ತೀರಗಳಲ್ಲಿ ಹಾಗೂ ನದಿ ತೀರಗಳಲ್ಲಿ ತಡೆಗೋಡೆ ನಿರ್ಮಿಸಲಾಗುತ್ತದೆ. ಸಮುದ್ರಕ್ಕೆ ಉದ್ದವಾಗಿ ಕಗ್ಗಲ್ಲಿನ ತಡೆಗೋಡೆಗಳನ್ನು ನಿರ್ಮಿಸಲಾಗುತ್ತದೆ. ಗ್ರೋಯಿನ್ಸ್ ಫೀಲ್ಡ್ ಗೋಡೆಗಳನ್ನು ನಿರ್ಮಿಸಿದರೂ ಮಳೆಗಾಲದಲ್ಲಿ ಕಡಲ್ಕೊರೆತ ತೀವ್ರಗೊಳ್ಳುವಾಗ ಹಲವಾರು ಕುಟುಂಬಗಳು ತಮ್ಮ ಮನೆಗಳನ್ನು ಬಿಟ್ಟು ವಾಸ ಸ್ಥಳಾಂತರಿಸುತ್ತವೆ.

ಆದರೆ ಇಲ್ಲಿ ಮನೆ ಬಿಟ್ಟು ಹೋಗಲಾಗದೆ ಅಸಹಾಯಕ ಪರಿಸ್ಥಿತಿಯಲ್ಲಿರುವ ಕುಟುಂಬಗಳಿವೆ. ತಮಗೆ ಹೋಗಲು ಬೇರೆ ಸ್ಥಳವಿಲ್ಲ ಎಂದು ಇವರು ಹೇಳುತ್ತಾರೆ. ಮಂಜೇಶ್ವರ ಮೀನುಗಾರಿಕಾ ಬಂದರಿನ ಸಮೀಪ ಗ್ರೋಯಿನ್ಸ್ ಫೀಲ್ಡ್‌ನ 17 ಕಗ್ಗಲ್ಲು ಗೋಡೆಗಳನ್ನು ನಿರ್ಮಿಸಲಾಗಿದೆ. ಇವುಗಳ ನಿರ್ಮಾಣ ವರ್ಷಗಳ ಹಿಂದೆಯೇ ಪೂರ್ಣವಾಗಿದೆ. ಆದರೆ ಕಡಲ್ಕೊರೆತ ಸಂಭವಿಸುವಾಗ ಈ ಗೋಡೆಗಳು ಸುರಕ್ಷಿತ ವ್ಯವಸ್ಥೆಯನ್ನು ನೀಡುವುದಿಲ್ಲ ಎಂದು ಕರಾವಳಿಯ ಕುಟುಂಬಗಳು ಹೇಳುತ್ತವೆ. ಮಂಜೇಶ್ವರ ಮೀನುಗಾರಿಕಾ ಬಂದರು ಸಮೀಪ ಹಾರ್ಬರ್ ಎಂಜಿನಿಯರಿಂಗ್ ಇಲಾಖೆ ನಿರ್ಮಿಸಿದ ಕಗ್ಗಲ್ಲಿನ ಒಂದು ಭಾಗ ಹಾನಿಗೀಡಾದ ಸ್ಥಿತಿಯಲ್ಲಿದೆ. ಉಳಿದ ಭಾಗ ಕೂಡ ಹಾನಿಗೀಡಾಗುವ ಸ್ಥಿತಿಯಲ್ಲಿದೆ. ಇಲ್ಲಿ ಮಾತ್ರವಲ್ಲದೆ ರಾಜ್ಯದ ಅತ್ಯಧಿಕ ವಿಸ್ತೀರ್ಣವಿರುವ ಪಂಚಾಯಿತಿಯಾದ ವಲಿಯಪರಂಬದ ಕರಾವಳಿ ತೀರಗಳಲ್ಲಿ ವಾಸವಿರುವ ಸಾವಿರಾರು ಕುಟುಂಬಗಳು ಕೂಡ ಕಡಲ್ಕೊರೆತ ಸಂದರ್ಭದಲ್ಲಿ ಭೀತಿಯಿಂದ ಕಾಲ ಕಳೆಯುವಂತಾಗಿದೆ. ಕಡಲ್ಕೊರೆತ ತಡೆಗಟ್ಟಲು ಕಗ್ಗಲ್ಲಿನ ಗೋಡೆಯ ಬದಲು ಟೆಟ್ರಾಪೋಡ್ ತಂತ್ರಜ್ಞಾನವನ್ನು ಪರಿಗಣಿಸಬೇಕು ಎಂಬ ಬೇಡಿಕೆ ಇದುವರೆಗೆ ಫಲ ಕಂಡಿಲ್ಲ.

ಎಷ್ಟು ತೀವ್ರವಾದ ಕಡಲ್ಕೊರೆತ ಸಂಭವಿಸಿದರೂ ನಶಿಸದ, ಕುಟುಂಬಗಳಿಗೆ ಸಂರಕ್ಷಣೆ ಖಾತರಿಪಡಿಸುವ ರೀತಿಯಲ್ಲಿ ಕಗ್ಗಲ್ಲಿನ ಗೋಡೆಗಳನ್ನು ನಿರ್ಮಿಸಲು ಅಗತ್ಯ ಕ್ರಮಗಳನ್ನು ಸಂಬಂಧಪಟ್ಟ ಅಧಿಕಾರಿಗಳು ಕೈಗೊಳ್ಳಬೇಕು ಎಂದು ಕರಾವಳಿ ನಿವಾಸಿಗಳು ಆಗ್ರಹಿಸುತ್ತಿದ್ದಾರೆ.



ಉದಯವಾಹಿನಿ ಚಿತ್ರ

ಸಿಕ್ಕಿಲ್ಲ ಶಾಶ್ವತ ಪರಿಹಾರ

### ಕಡಲ್ಕೊರೆತ ಭೀತಿ

ಸಮುದ್ರ ತಡೆಗೋಡೆ ಮರು ನಿರ್ಮಿಸಲು, ದುರಸ್ತಿ ನಡೆಸಲು ಮತ್ತೆ ಕೋಟ್ಯಂತರ ರೂ. ಮೀಸಲಿರಿಸಿರುವುದಾಗಿ ಅಧಿಕೃತ ಅಂಕಿ ಅಂಶಗಳು ಹೇಳುತ್ತವೆ. ಕಡಲ್ಕೊರೆತ ಭೀತಿ ಎದುರಿಸುತ್ತಿರುವ ಮನೆಗಳ ಸುರಕ್ಷತೆಯನ್ನು ಖಾತರಿಪಡಿಸಲು 1.18 ಕೋಟಿ ರೂ. ವಿನಿಯೋಗಿಸಲಾಗಿದೆ. ಆದರೆ ಈ ಯೋಜನೆಗಳ್ಯಾವುದೂ ಮೀನು ಕಾರ್ಮಿಕ ಕುಟುಂಬಗಳ ಸುರಕ್ಷತೆಗೆ ಪ್ರಯೋಜನಕಾರಿಯಾಗಿಲ್ಲ ಎಂಬುದು ವಾಸ್ತವವಾಗಿದೆ.

### ಜೀವದ ಆಸೆ ಬಿಟ್ಟು ಬದುಕು

ಮಂಜೇಶ್ವರದಿಂದ ವಲಿಯಪರಂಬವರೆಗಿನ ಕರಾವಳಿ ಪ್ರದೇಶಗಳಲ್ಲಿ ವಾಸವಿರುವ ಕುಟುಂಬಗಳು ಕಡಲ್ಕೊರೆತಗಳು ಸಂಭವಿಸುವಾಗ ಹೆಚ್ಚು ಆತಂಕಕ್ಕೊಳಗಾಗುತ್ತಾರೆ. ಮಂಜೇಶ್ವರ ಮೂಸೋಡಿ ಕಡಪ್ಪುರವು ಕಡಲ್ಕೊರೆತ ತೀವ್ರವಾಗಿ ಅನುಭವಕ್ಕೆ ಬರುವ ಇನ್ನೊಂದು ಕರಾವಳಿ ಪ್ರದೇಶವಾಗಿದೆ. ಇಲ್ಲಿ ಹಲವಾರು ಕುಟುಂಬಗಳು ಮಳೆಗಾಲ ಆರಂಭಗೊಳ್ಳುವಾಗ ಜೀವದ ಆಸೆ ಬಿಟ್ಟು ಬದುಕುವಂತಾಗಿದೆ. ಮೂಸೋಡಿ ಕಡಪ್ಪುರದಲ್ಲಿ ಸಮುದ್ರ ತಡೆಗೋಡೆ ನಿರ್ಮಿಸಲಾಗಿದೆಯಾದರೂ ಉಗ್ರ ಅಲೆಗಳು ಮನೆಗಳಿಗೂ ನುಗ್ಗುತ್ತವೆ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 12:00 ರಿಂದ 01:30 |
| ಗುಳಿಕ ಕಾಲ | ಬೆಳಿಗ್ಗೆ | 10:30 ರಿಂದ 12:00 |
| ಯಮಗಂಡ ಕಾಲ | ಬೆಳಿಗ್ಗೆ | 07:30 ರಿಂದ 09:00 |

**ಮೇಷ** ರಕ್ತದೊತ್ತಡವಿರುವ ರೋಗಿಗಳು ತಮ್ಮ ರಕ್ತದೊತ್ತಡ ಕಡಿಮೆ ಮಾಡಲು ಮತ್ತು ಕೊಲೆಸ್ಟರಾಲ್ ನಿಯಂತ್ರಣದಲ್ಲಿರಿಸಲು ಕೆಂಪು ವೈನ್ ತೆಗೆದುಕೊಳ್ಳಬಹುದು. ಇದು ಅವರಿಗೆ ಮತ್ತಷ್ಟು ವಿಶ್ರಾಂತಿ ತರುತ್ತದೆ.

**ವೃಷಭ** ಮನೆ ಬಳಕೆಯ ವಸ್ತುಗಳ ಯಾವುದೇ ಅಸಡ್ಡೆಯ ಬಳಕೆ ನಿಮಗೆ ಸಮಸ್ಯೆ ಉಂಟು ಮಾಡಬಹುದು. ಇಂದು ನಿಮ್ಮ ಹಣವನ್ನು ಅನೇಕ ವಿಷಯಗಳಿಗೆ ಖರ್ಚು ಮಾಡಬಹುದು.

**ಮಿಥುನ** ಮೋಜಿಗಾಗಿ ಹೊರಹೋಗುವವರಿಗೆ ಸಂತೋಷ ಮತ್ತು ಆನಂದವನ್ನು ಹಂಚಿಕೊಳ್ಳಿ. ನಿಮ್ಮ ತಾಯಿ ಅಥವಾ ತಂದೆಯ ಆರೋಗ್ಯಕ್ಕಾಗಿ ನೀವು ಇಂದು ಸಾಕಷ್ಟು ಹಣವನ್ನು ಖರ್ಚು ಮಾಡಬೇಕಾಗಬಹುದು.

**ಕರ್ಕಾಟಕ** ಹಣದ ಲಾಭ ನಿಮ್ಮ ನಿರೀಕ್ಷೆಯಂತಿರುವುದಿಲ್ಲ. ಒಬ್ಬರು ಇನ್ನೊಬ್ಬರ ದೃಷ್ಟಿಕೋನವನ್ನು ಅರ್ಥಮಾಡಿಕೊಳ್ಳುವ ಮೂಲಕ ವೈಯಕ್ತಿಕ ಸಮಸ್ಯೆಗಳನ್ನು ಪರಿಹರಿಸಿ.

**ಸಿಂಹ** ಹೆಚ್ಚಿನ ಸಾಧನೆ ಮತ್ತು ಉನ್ನತ ಪ್ರೊಫೈಲ್‌ಗೆ ಒಂದು ಒಳ್ಳೆಯ ದಿನ. ಸಾಮಾಜಿಕ ಹಾಗೂ ಧಾರ್ಮಿಕ ಕಾರ್ಯಗಳಿಗೆ ಅತ್ಯುತ್ತಮ ದಿನ. ಸಂಗಾತಿಯನ್ನು ನಿಮ್ಮನ್ನು ಹೊಂದಿರಲು ಅದೃಷ್ಟ ಮಾಡಿದ್ದಾರೆಂದು ತೋರುತ್ತಿದೆ.

**ಕನ್ಯಾ** ಮಕ್ಕಳು ನಿಮ್ಮ ಗೃಹಕೃತ್ಯಗಳನ್ನು ಮುಗಿಸುವಲ್ಲಿ ನಿಮಗೆ ಸಹಾಯ ಮಾಡುತ್ತಾರೆ. ತಮ್ಮ ಬಿಡುವಿನ ವೇಳೆಯಲ್ಲಿ ಈ ರೀತಿಯ ಚಟುವಟಿಕೆಗಳನ್ನು ಮಾಡಲು ಅವರಿಗೆ ಪ್ರೋತ್ಸಾಹಿಸಿ.

**ತುಲಾ** ಅನಗತ್ಯ ಆಲೋಚನೆಗಳು ನಿಮ್ಮ ಮನಸ್ಸನ್ನು ಆಕ್ರಮಿಸಿಕೊಳ್ಳಲು ಬಿಡಬೇಡಿ. ಶಾಂತವಾಗಿ ಮತ್ತು ಒತ್ತಡ ಮುಕ್ತವಾಗಿ ಉಳಿಯಲು ಪ್ರಯತ್ನಿಸಿ ಹಾಗೂ ಅದು ನಿಮ್ಮ ಮಾನಸಿಕ ದೃಢತೆಯನ್ನು ಹೆಚ್ಚಿಸುತ್ತದೆ.

**ವೃಶ್ಚಿಕ** ಹಣವನ್ನು ಉಳಿಸುವ ನಿಮ್ಮ ಬಯಕೆ ಪೂರ್ಣಗೊಳ್ಳಬಹುದು. ಅಧ್ಯಯನಗಳನ್ನು ತಪ್ಪಿಸಿ ಹೊರಾಂಗಣ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವಿಕೆ ನಿಮ್ಮ ಪೋಷಕರಿಗೆ ಕೋಪ ಬರಿಸಬಹುದು.

**ಧನಸ್ಸು** ನಿಮ್ಮ ಮನಸ್ಸಿನಲ್ಲಿ ಸಕಾರಾತ್ಮಕ ಆಲೋಚನೆಗಳನ್ನು ತನ್ನಿ. ನಿಮ್ಮ ಹಣವನ್ನು ಸಂಗ್ರಹಿಸಿದಾಗ ಮಾತ್ರ ಹಣ ನಿಮ್ಮ ಕೆಲಸಕ್ಕೆ ಬರುತ್ತದೆ. ಇದನ್ನು ನೀವು ಚೆನ್ನಾಗಿ ಅರ್ಥಮಾಡಿಕೊಳ್ಳಿ.

**ಮಕರ** ನಿಮ್ಮ ಶಕ್ತಿಯ ಮಟ್ಟ ಹೆಚ್ಚಿರುತ್ತದೆ. ಹಣದ ಪರಿಸ್ಥಿತಿ ದಿನದಲ್ಲಿ ನಂತರ ಸುಧಾರಿಸುತ್ತದೆ. ಒಂದು ಅಂಚೆಯ ಮೂಲಕ ಬಂದ ಪತ್ರ ಇಡೀ ಕುಟುಂಬಕ್ಕೆ ಸಂತೋಷದ ಸುದ್ದಿ ತರುತ್ತದೆ.

**ಕುಂಭ** ಆರೋಗ್ಯ ಚೆನ್ನಾಗಿರುತ್ತದೆ. ಇಂದು ನೀವು ಯಾವುದೇ ಅಜ್ಞಾತ ಮೂಲಗಳಿಂದ ಹಣವನ್ನು ಪಡೆಯಬಹುದು, ಇದರಿಂದ ನಿಮ್ಮ ಅನೇಕ ಆರ್ಥಿಕ ಸಮಸ್ಯೆಗಳು ದೂರವಾಗುತ್ತವೆ.

**ಮೀನ** ಪ್ರಕೃತಿಯು ನಿಮ್ಮಲ್ಲಿ ಗಮನಾರ್ಹ ವಿಶ್ವಾಸ ಮತ್ತು ಬುದ್ಧಿವಂತಿಕೆಯನ್ನಿರಿಸಿದೆ. ಅದನ್ನು ಸಾಧ್ಯವಾದಷ್ಟೂ ಬಳಸಿಕೊಳ್ಳಿ. ದಿನದಲ್ಲಿ ನಂತರ ಹಣಕಾಸು ಪರಿಸ್ಥಿತಿಗಳು ಸುಧಾರಿಸುತ್ತವೆ.

● ಪ್ರತಿ ಮನೆಯಿಂದ ಸಂಗ್ರಹಿಸುವ ಹಸಿಕಸ ಇಂಧನದ ರೂಪದಲ್ಲಿ ಕೊಳವೆಗಳ ಮೂಲಕ ಅಡುಗೆ ಕೋಣೆಗೆ ಮರಳಿ ಬರಲಿದೆ

# ಕಸದಿಂದ ಸಿಎನ್‌ಜಿ ಉತ್ಪಾದನೆ: ಡಿಪಿಆರ್ ಸಿದ್ಧಪಡಿಸಿದ ಮಹಾನಗರ ಪಾಲಿಕೆ

• ಉದಯವಾಹಿನಿ ದಾವಣಗೆರೆ

ನಗರದಲ್ಲಿ ನಿತ್ಯ ಉತ್ಪತ್ತಿಯಾಗುವ ಕಸವನ್ನು ವೈಜ್ಞಾನಿಕವಾಗಿ ನಿರ್ವಹಿಸಿ ರಸವಾಗಿ ಪರಿವರ್ತಿಸಲು ಮಹಾನಗರ ಪಾಲಿಕೆ ಮುಂದಾಗಿದೆ. ಹಸಿ ಕಸದಲ್ಲಿ ಸಾಂದ್ರೀಕೃತ ನೈಸರ್ಗಿಕ ಅನಿಲ (ಸಿಎನ್‌ಜಿ) ಉತ್ಪಾದನೆಗೆ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಿದೆ.

ಪಾಲಿಕೆಯ ಪ್ರಸ್ತಾವಕ್ಕೆ ನಗರಾಭಿವೃದ್ಧಿ ಇಲಾಖೆ ಅನುಮೋದನೆ ನೀಡಿದರೆ ಮುಂದಿನ ಎರಡು ವರ್ಷಗಳಲ್ಲಿ ಕಸದಿಂದ ನೈಸರ್ಗಿಕ ಅನಿಲ ಉತ್ಪಾದನೆ ಕಾರ್ಯರೂಪಕ್ಕೆ ಬರಲಿದೆ. ಪ್ರತಿ ಮನೆಯಿಂದ ಸಂಗ್ರಹಿಸುವ ಹಸಿಕಸ ಇಂಧನದ ರೂಪದಲ್ಲಿ ಕೊಳವೆಗಳ ಮೂಲಕ ಅಡುಗೆ ಕೋಣೆಗೆ ಮರಳಿ ಬರಲಿದೆ.

'ಸ್ವಚ್ಛ ಭಾರತ್ ಮಿಷನ್ -2'ರ ಅಡಿಯಲ್ಲಿ ರಾಜ್ಯದ 10 ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಿಎನ್‌ಜಿ ಉತ್ಪಾದನೆಗೆ ನಗರಾಭಿವೃದ್ಧಿ ಇಲಾಖೆ ನಿರ್ಧರಿಸಿದೆ. ಭಾರತೀಯ ಅನಿಲ ಪ್ರಾಧಿಕಾರದ (ಗೇಲ್) ಮಾರ್ಗದರ್ಶನದಲ್ಲಿ ಇದು ಅನುಷ್ಠಾನಕ್ಕೆ ಬರಲಿದೆ. ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಿಎನ್‌ಜಿ ಉತ್ಪಾದನೆಗೆ ಮಹಾನಗರ ಗ್ಯಾಸ್ ಲಿಮಿಟೆಡ್' ಆಸಕ್ತಿ ತೋರಿದೆ.

ಸ್ವಚ್ಛ ಭಾರತ್ ಮಿಷನ್ -2


☛ ಉದಯವಾಹಿನಿ ಚಿತ್ರ

ಸಿಎನ್‌ಜಿ ಉತ್ಪಾದನಾ ಘಟಕ ಸಿದ್ಧಪಡಿಸಲು 21 ತಿಂಗಳ ಕಾಲಮಿತಿಯನ್ನು ಕೇಳಿದೆ. ದಾವಣಗೆರೆ ತಾಲ್ಲೂಕಿನ ಅವರಗೊಳ್ಳ ಗ್ರಾಮದ ಸಮೀಪ ಮಹಾನಗರ ಪಾಲಿಕೆಯ ಘನತ್ಯಾಜ್ಯ ವಿಲೇವಾರಿ ಘಟಕ 33 ಎಕರೆಯಲ್ಲಿದೆ. 16 ಎಕರೆ ವಿಸ್ತೀರ್ಣದಲ್ಲಿ ಪಾರಂಪರಿಕ ತ್ಯಾಜ್ಯ ಹರಡಿಕೊಂಡಿದೆ. 20 ವರ್ಷಗಳಿಂದ ವಿಲೇವಾರಿ ಆಗದೇ ಉಳಿದಿರುವ ಈ ಕಸವನ್ನು ಡಿಸೆಂಬರ್ ಹೊತ್ತಿಗೆ ಕರಗಿಸುವ ಪ್ರಯತ್ನ ಆರಂಭವಾಗಿದೆ. ಈ ತ್ಯಾಜ್ಯ ಹರಡಿಕೊಂಡಿರುವ 11 ಎಕರೆ ಪ್ರದೇಶದಲ್ಲಿ

> ಹಸಿ ಕಸದಿಂದ ನೈಸರ್ಗಿಕ ಅನಿಲ ತಯಾರಿಸುವ ಪ್ರಯತ್ನ ಆರಂಭಿಸುತ್ತಿದ್ದೇವೆ. ಕಸವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಇದರಿಂದ ಸಾಧ್ಯವಾಗಲಿದೆ
> -ರೇಣುಕಾ,
> ಆಯುಕ್ತ ಮಹಾನಗರ ಪಾಲಿಕೆ

ಸಿಎನ್‌ಜಿ ಉತ್ಪಾದನಾ ಘಟಕ ನಿರ್ಮಾಣವಾಗಲಿದೆ. ನಿತ್ಯ 5 ಟನ್ ಸಿಎನ್‌ಜಿ ಉತ್ಪಾದನೆಯ ಗುರಿ ಹೊಂದಲಾಗಿದೆ. ಅಡುಗೆ ಮತ್ತು ವಾಹನಕ್ಕೆ ಇಂಧನ ರೂಪದಲ್ಲಿ ಬಳಸುವ ನೈಸರ್ಗಿಕ ಅನಿಲ ಉತ್ಪಾದನೆಗೆ ನಿರ್ಧರಿಸಲಾಗಿದೆ. 125 ಟನ್ ಹಸಿ ಕಸವನ್ನು ಇಂಧನವಾಗಿ ಪರಿವರ್ತನೆ ಮಾಡುವ ಗುರಿ ಹೊಂದಲಾಗಿದೆ. ಪಾಲಿಕೆ ವ್ಯಾಪ್ತಿಯಲ್ಲಿ ನಿತ್ಯ ಲಭ್ಯವಾಗುವ 100 ಟನ್ ಹಸಿ ಕಸದಲ್ಲಿ 70 ಟನ್ ಇದಕ್ಕೆ ನೀಡಲು ಸಾಧ್ಯವಿದೆ. ಉಳಿದ ಹಸಿಕಸವನ್ನು ಹರಿಹರ ಹಾಗೂ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎಪಿಎಂಸಿ) ಆವರಣದಿಂದ ಪಡೆಯಲಾಗುತ್ತದೆ ಎಂದು ಮಹಾನಗರ ಪಾಲಿಕೆ ಆಯುಕ್ತ ರೇಣುಕಾ ವಿವರಿಸಿದರು.

ಮಧ್ಯಪ್ರದೇಶದ ಇಂಧೋರ್‌ನಲ್ಲಿ ಕಸದಿಂದ ದೊಡ್ಡ ಪ್ರಮಾಣದಲ್ಲಿ ಸಿಎನ್‌ಜಿ ತಯಾರಿಸಲಾಗುತ್ತಿದೆ. ಗೋವಾದಲ್ಲಿ ವಿದ್ಯುತ್ ಉತ್ಪಾದನೆಗೆ ಕಸವನ್ನು ಬಳಸಲಾಗುತ್ತಿದೆ. ಹಸಿ ಕಸದಿಂದ ಸಿಎನ್‌ಜಿ ಉತ್ಪಾದನೆ ಮಾಡುವ ಪ್ರಯತ್ನ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನಲ್ಲಿ ಯಶಸ್ವಿಯಾಗಿದೆ. 2 ಟನ್ ಹಸಿ ಕಸವನ್ನು ಇಂಧನವಾಗಿ ಪರಿವರ್ತಿಸುವ ಪ್ರಯತ್ನ ಅವರಗೊಳ್ಳದ ಘನ ತ್ಯಾಜ್ಯ ವಿಲೇವಾರಿ ಘಟಕದಲ್ಲಿಯೂ ನಡೆದಿದೆ. ಇದನ್ನು ಜನರೇಟರ್‌ಳಿಗೆ ಮಾತ್ರ ಬಳಕೆ ಮಾಡಲಾಗುತ್ತಿದೆ.

**1.5 ಕೋಟಿ ಉಳಿತಾಯ**

**ಆವರಗೊಳ್ಳದ ಘನ ತ್ಯಾಜ್ಯ ವಿಲೇವಾರಿ ಘಟಕದಲ್ಲಿ ಕಸದಿಂದ ಗೊಬ್ಬರ ತಯಾರಿಕೆಯ ಹೊಣೆಯನ್ನು 'ಎಂಎಸ್‌ಜಿಪಿ' ಎಂಬ ಸಂಸ್ಥೆಗೆ ನೀಡಲಾಗಿದೆ. ಮಹಾನಗರ ಪಾಲಿಕೆ ಪ್ರತಿ ಟನ್ ಕಸ ನಿರ್ವಹಣೆಗೆ 232 ಶುಲ್ಕ ಪಾವತಿಸುತ್ತಿದೆ. ಕಸದಲ್ಲಿ ಇಂಧನ ತಯಾರಿಕೆ ಆರಂಭವಾದ ಬಳಿಕ ಈ ಶುಲ್ಕ ಪಾವತಿ ಸ್ಥಗಿತವಾಗಲಿದೆ. ಇದರಿಂದ ಮಹಾನಗರ ಪಾಲಿಕೆಗೆ 1.5 ಕೋಟಿ ಉಳಿತಾಯ ಆಗಲಿದೆ ಎಂದು ಅಂದಾಜಿಸಲಾಗಿದೆ. ಸ್ವಚ್ಛ ಭಾರತ್ ಮಿಷನ್-1ರ ಅಡಿಯಲ್ಲಿ ಕಸ ವಿಲೇವಾರಿಗೆ ಹೊರಗುತ್ತಿಗೆ ನೀಡಲಾಗಿದೆ. ಕಸದ ಪುನರ್ಬಳಕೆ ಮತ್ತು ಗೊಬ್ಬರ ತಯಾರಿಕೆಗೆ ಪ್ರಯೋಗಗಳು ನಡೆಯುತ್ತಿವೆ. ಮೂರು ವರ್ಷದ ಗುತ್ತಿಗೆ ಅವಧಿ ಪೂರ್ಣಗೊಳ್ಳುವ ಹೊತ್ತಿಗೆ ಸಿಎನ್‌ಜಿ ಘಟಕ ಸಿದ್ಧವಾಗಲಿದೆ ಎಂದು ಮಹಾನಗರ ಪಾಲಿಕೆಯ ಮೂಲಗಳು ಮಾಹಿತಿ ನೀಡಿವೆ.**

## ಕ್ಷಯರೋಗಿಗಳಿಗೆ ಆಯುಷ್ ಇಲಾಖೆಯ ಚ್ಯವನಪ್ರಶ್ ಉಚಿತ ಹಂಚಿಕೆ

• ಉದಯವಾಹಿನಿ ಚಿತ್ರದುರ್ಗ

ಜಿಲ್ಲಾ ಆಯುಷ್ ಅಧಿಕಾರಿಗಳಾದ ಡಾ.ಚಂದ್ರಕಾಂತ್, ಹಾಗೂ ಆಯುಷ್ ವೈದ್ಯಾಧಿಕಾರಿಗಳಾದ ಡಾ. ಶಿವಕುಮಾರ್ ಇವರುಗಳು ಬುದ್ದನಗರ ಆರೋಗ್ಯ ಕೇಂದ್ರದಲ್ಲಿ ಆಯೋಜಿಸಲಾಗಿದ್ದ ಆಶಾ ಮಾಸಿಕ ಸಭೆಗೆ ಆಗಮಿಸಿ

ಕ್ಷಯರೋಗ ನಿಯಂತ್ರಿಸಲು ಚಿಕಿತ್ಸೆ ಪಡೆಯುತ್ತಿರುವ ಫಲಾನುಭವಿಗಳಿಗೆ ಆಯುಷ್ ಪೌಷ್ಠಿಕ ಔಷಧಿ ಚ್ಯವನಪ್ರಶ್‌ವನ್ನು ವಿತರಿಸಿದರು. ಜಿಲ್ಲಾ ಆಯುಷ್ ಅಧಿಕಾರಿಗಳು ಮಾತನಾಡಿ ಚ್ಯವನ ಪಾಶವು ನಮ್ಮ ದೇಹದ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಿ ಯಾವುದೇ ರೋಗ ವಾಸಿಯಾಗಲು ಸಹಕರಿಸುತ್ತದೆ. ಕ್ಷಯರೋಗಿಗಳಲ್ಲಿ ಇದೊಂದು ಉತ್ತಮ ಪೂರಕ ಔಷಧಿ. ಆರೋಗ್ಯ ಇಲಾಖೆಯ ವತಿಯಿಂದ ನೀಡುವ ಗುಳಿಗೆಗಳ ಜೊತೆಗೆ ಈ ಔಷಧವನ್ನು ಸೇವಿಸುವುದರಿಂದ ಶೀಘ್ರ ಗುಣಮುಖ ಕಾಣಬಹುದು ಎಂದು ತಿಳಿಸಿದರು. ಆಯುಷ್ ವೈದ್ಯರಾದ ಡಾ. ಶಿವಕುಮಾರ್ ಅವರು ಎಲ್ಲಾ


☛ ಉದಯವಾಹಿನಿ ಚಿತ್ರ

ವೈದ್ಯ ಪದ್ಧತಿಗಳು ಕೈಜೋಡಿಸಿ ಸಂಯುಕ್ತವಾಗಿ ಪ್ರಯತ್ನಿಸಿದಾಗ ಸಮುದಾಯದಲ್ಲಿ ಉತ್ತಮ ಆರೋಗ್ಯ ನೀಡಲು ಸಾಧ್ಯ. ಚ್ಯವನ ಪ್ರಾಶವು ಕ್ಷಯ ರೋಗಿಗಳಲ್ಲಿ ಶಕ್ತಿಯನ್ನು ನೀಡುತ್ತದೆ ಹಾಗೂ ಪೂರಕ ಪೋಷಕಾಂಶಗಳನ್ನು ಒದಗಿಸಿ ಶೀಘ್ರ ಗುಣಮುಖರಾಗಲು ಸಹಕರಿಸುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಟಿ. ಶ್ರೀನಿವಾಸಮೂರ್ತಿ, ಕ್ಷಯರೋಗ ನಿಯಂತ್ರಣ ಕಚೇರಿಯ ನಂದನ್ ಎಸ್‌ಟಿಎಸ್ ನಾಗರಾಜ್ ಟಿಬಿಎಚ್‌ವಿ ಸಂತೋಷ್, ಲೋಕೇಶ್ ಫಾರ್ಮಸಿ ಅಧಿಕಾರಿ ಬೂತರಾಜ್, ಆರೋಗ್ಯ ನಿರೀಕ್ಷಣಾಧಿಕಾರಿ ಕೋಟೇಶ್ ಚಕ್ರವರ್ತಿ, ಕೇಶವ ರೇಖ ಪಿಎಚ್‌ಸಿಓ ರವರು ಆಶಾ ಕಾರ್ಯಕರ್ತೆಯರು ಮತ್ತು ಸಿಬ್ಬಂದಿ ವರ್ಗ ಹಾಜರಿದ್ದರು.

> ಆಯುಷ್ ಇಲಾಖೆಯಿಂದ ವಿತರಿಸುವ ಚ್ಯವನ್ ಪ್ರಾಶ್ ಉತ್ತಮ ಪೌಷ್ಠಿಕಾಂಶಗಳಿಂದ ಕೂಡಿದ್ದು ಯಾವುದೇ ವಯಸ್ಸಿನವರು ಸೇವಿಸಬಹುದಾಗಿದೆ ಇದನ್ನು ಒಂದು ಲೋಟ ಹಾಲಿನೊಂದಿಗೆ ಬೆರೆಸಿ ತಿನ್ನಬಹುದು ಅಥವಾ ನೀರಿನೊಂದಿಗೆ ಆದರೂ ಬೆರೆಸಿ ತಿನ್ನಬಹುದು ಇದನ್ನ ಕ್ಷಯರೋಗಿಗಳಿಗೆ ನೀಡುವುದರಿಂದ ಅವರು ಬೇಗ ಗುಣಮುಖರಾಗಬಹುದಾಗಿದೆ ಎಲ್ಲರೂ ಕೈ ಜೋಡಿಸಿ ಟಿ.ಬಿ.ಯನ್ನು ಕೊನೆಗಾಣಿಸೋಣ
> -ಡಾ. ಶಿವಕುಮಾರ್

## ಭಾರತದ ಉತ್ತರಕ್ಕೆ ವಿಶ್ವವೇ ಜಾಗೃತವಾಗಿದೆ

• ಉದಯವಾಹಿನಿ ಬಾಗಲಕೋಟೆ

ದೇಶದ ರಕ್ಷಣೆಗೆಗಾಗಿ ನಮ್ಮೆಲ್ಲರ ನಡೆ ಎಂಬ ದ್ಯೇಯವಾಕ್ಯದೊಂದಿಗೆ ಬೃಹತ ತಿರಂಗಾ ಯಾತ್ರೆ ನಡೆಯಿತು. ನಗರದ ಬಿ.ವಿ.ವಿ.ಸಂಘದ ಆವರಣದಲ್ಲಿರುವ ಶ್ರೀ ಬೀಳೂರ ಅಜ್ಜನ ದೇವಸ್ಥಾನದಿಂದ ಪ್ರಾರಂಭವಾದ ಬೃಹತ ತಿರಂಗಾ ಯಾತ್ರೆ, ಪಶು ಆಸ್ಪತ್ರೆ, ಟೀಕಿನ ಮಠದ ರಸ್ತೆ, ಅಡತ ಬಜಾರ, ವಲ್ಲಬಾಯಿ ಚೌಕ, ಪೋಲೀಸ್ ಚೌಕ್ ಮುಖಾಂತರ ಮಹಾತ್ಮಾ ಗಾಂಧಿ ರಸ್ತೆ ಮೂಲಕ ಬಸವೇಶ್ವರ ವೃತ್ತದಲ್ಲಿ ಸಮಾವೇಶಗೊಂಡಿತು.

ಸಾರ್ವಜನಿಕರನ್ನುದ್ದೇಶಿಸಿ ಮಾತನಾಡಿದ ಸಂಸದ ಪಿ,ಸಿ,ಗದ್ದಿಗೌಡರ ಪಾಕಿಸ್ತಾನದಲ್ಲಿ ಉಗ್ರಗಾಮಿಗಳನ್ನು ತಯಾರು ಮಾಡುವ ನೆಲೆಗಳನ್ನು ಕೇವಲ 27 ಸೆಕೆಂಡಗಳಲ್ಲಿ ನಮ್ಮ ಯೋಧರು ಧ್ವಂಸಗೊಳಿದ್ದಾರೆ, ದೇಶದ ವ್ಯವಸ್ಥೆಯನ್ನು ಬುಡಮೇಲು ಮಾಡುವ ದುರಾಲೋಚನೆ ಇದಕ್ಕೆ ಸೈನಿಕರು ತಕ್ಕ ಪಾಠ ಕಲಿಸಿದ್ದಾರೆ, ಹಾಗಾಗಿ ಪ್ರಧಾನಿ ಮೋದಿಯವರ ನಾಯಕತ್ವದಲ್ಲಿ


☛ ಉದಯವಾಹಿನಿ ಚಿತ್ರ

ನೀಡಿರುವ ತಕ್ಕ ಉತ್ತರವನ್ನು ಇಡಿ ವಿಶ್ವವೇ ನೋಡಿದೆ ಎಂದರು.

ಗುಳೆದಗುಡ್ಡದ ಒಪ್ಪತ್ತೇಶ್ವರಮಠದ ಪೂಜ್ಯ ಶ್ರೀ ಒಪ್ಪತ್ತೇಶ್ವರಸ್ವಾಮಿಗಳು ಮಾತನಾಡಿ ಭಾರತ ಶಾಂತಿಪ್ರೀಯ ದೇಶವಾದರು ನಮ್ಮನ್ನು ತುಳಿಯಲು ಬಂದವರನ್ನು ಸುಮ್ನೆ ಬಿಡುವ ದೇಶವಲ್ಲಾ ಎನ್ನುವ ಎಚ್ಚರಿಕೆಯನ್ನು ಈ ಆಪ್ರೇಶನ ಸಿಂಧೂರ ಮಾಡಿದೆ, ಗುಡಿಯೋಳಗಿನ ದೇವರಗಿಂತ ಗಡಿಯೋಳಗಿನ ದೇವರು ದೊಡ್ಡವ ಎನ್ನುವು ಹಾಗೆ ಗಡಿಯಲ್ಲಿನ ಸೈನಿಕರಿಂದಾಗಿ ನಾವೆಲ್ಲ ಇಂದು ಸುರಕ್ಷಿತವಾಗಿದ್ದೆವೆ, ಅಂಥ ಸೈನಿಕರಿಗೆ ಶಕ್ತಿ ತುಂಬುವ ಇಂಥಹ ತಿರಂಗಯಾತ್ರೆ ಮಾಡಿದ್ದು ಶ್ಲಾಘನೀಯ ಎಂದರು.

## ಮಾದಿಗ ದಂಡೋರ ತಾಲ್ಲೂಕಾ ನೂತನ ಸಮಿತಿ ರಚನೆ

• ಉದಯವಾಹಿನಿ,ಚಿಂಚೋಳಿ

ತಾಲ್ಲೂಕಿನ ಪೋಲಕಪಳ್ಳಿ ಪ್ರವಾಸಿ ಮಂದಿರದಲ್ಲಿ ಮಾದಿಗ ಸಮಾಜದ ಹಿರಿಯ ಮುಖಂಡ ಗೋಪಾಲರಾವ ಕಟ್ಟಿಮನಿ ಅಧ್ಯಕ್ಷತೆಯಲ್ಲಿ ನೂತನ ಜಿಲ್ಲಾಧ್ಯಕ್ಷರಾಗಿ ಆಯ್ಕೆಯಾದ ಸುಂದರ ಸಾಗರ ಸಮ್ಮುಖದಲ್ಲಿ ತಾಲ್ಲೂಕಾ ಮಾದಿಗ ದಂಡೋರ ನೂತನ ಪದಾಧಿಕಾರಿಗಳ ನೇಮಕ ಮತ್ತು ಪದಗ್ರಹಣ ಸಮಾರಂಭ ಮಾಡಲಾಯಿತು ಎಂದು ಮಾದಿಗ ದಂಡೋರ ತಾಲೂಕು ಸಮಿತಿಗೆ ನೂತನವಾಗಿ ಆಯ್ಕೆಯಾದ ತಾಲ್ಲೂಕಾಧ್ಯಕ್ಷ ಮಲ್ಲು ಕೊಡಂಬಲ್ ತಿಳಿಸಿದ್ದಾರೆ.

ಗೌರವ ಅಧ್ಯಕ್ಷ ಕಾಶಿನಾಥ ಮಾಸ್ಟರ್ ಬೀರನಳ್ಳಿ, ತಾಲ್ಲೂಕಾಧ್ಯಕ್ಷ ಮಲ್ಲು ಕೋಡಂಬಲ್,ಉಪಾಧ್ಯಕ್ಷ ಸುಶೀಲ್ ಐನೋಳ್ಳಿ,ಪ್ರಧಾನ ಕಾರ್ಯದರ್ಶಿ ಮೋಹನ್ ದಂಡಿನ, ಕಾರ್ಯದರ್ಶಿ ವಿವೇಕ್


☛ ಉದಯವಾಹಿನಿ ಚಿತ್ರ

ಹೋಸಮನಿ, ಸಹ ಕಾರ್ಯದರ್ಶಿ ಶ್ಯಾಮ್ ನಿಡಗುಂದಿ, ಖಜಾಂಚಿ ಜನಾರ್ಧನ ಸೇರಿದಂತೆ ವಿವಿಧ ಘಟಕಗಳ ಪದಾಧಿಕಾರಿಗಳು ಸಹ ನೇಮಕ ಮಾಡಲಾಗಿದೆ ಎಂದು ತಿಳಿಸಿದ್ದಾರೆ. ವಿಜಯರಾಜ ಕೋಡಂಪಳ್ಳಿ, ಸುನೀಲ್ ಸಲಗಾರ್, ಸುಭಾಷ್ ಸುಲೇಪೇಟ,ಪ್ರಭು ಬಸವಪುರ, ಚಂದ್ರಕಾಂತ ಹೊಸಮನಿ, ರೇವಣಸಿದ್ಧ ಬಲೆನೂರ್,ಬಸ್ಸು ಕೊಡ್ಲಿ,ಕರಣ ರಾಜಪೂರ,ಅಶ್ವಥ ಕಟ್ಟಿಮನಿ,ಶಿವು ದಸ್ತಾಪೂರ,ಸುಭಾಷ್ ಮೋಘಾ,ಕಿರಣ ಹಲಚೇರಾ,ಸಂಗು ಭೀಮನೂರ,ಆನಂದ,ಅಭಿಶೇಕ್, ಸುಧಾಕರ,ಅನೇಕರಿದ್ದರು.

## ಅಧಿಕಾರಿಗಳು ಜಾತಿ ಗಣತಿಯಲ್ಲಿ ಮಾದಿಗ ಜನಾಂಗದ ಜಾತಿಗೆ ಸರಿಯಾಗಿ ನೋಂದಾಯಿಸಿಕೊಳ್ಳಬೇಕು

• ಉದಯವಾಹಿನಿ ಅರಸೀಕೆರೆ

ಕರ್ನಾಟಕ ರಾಜ್ಯ ಸರ್ಕಾರವು ಪರಿಶಿಷ್ಟಜಾತಿಗಳಲ್ಲಿ ಒಳ ಮೀಸಲಾತಿ ಸಂಬಂಧವಾಗಿ ಜಾತಿ ಗಣತಿ ಕಾರ್ಯವು ನಡೆಯುತ್ತಿದ್ದು ಈಗ ಅಸ್ಪೃಶ್ಯ ಅಲ್ಲದ ಬೇಡ ಜಂಗಮ ಸಮುದಾಯ ಆಗಿರುವುದರಿಂದ ಅವರನ್ನು ಜಾತಿ ಗಣತಿಯಲ್ಲಿ ತೆಗೆದುಕೊಳ್ಳಬಾರದು. ಈ ವರ್ಗದವರು ಯಾವುದೇ ಸಾಮಾಜಿಕ ತುಳಿತಕ್ಕೆ ಒಳಗಾಗಿ ಅವಮಾನ ನೋವು ಮತ್ತು ಜಾತಿನಿಂದನೆ ಪ್ರಕರಣಗಳನ್ನು ಅನುಭವಿಸಿರುವುದಿಲ್ಲ ಇವರುಗಳು ಪರಿಶಿಷ್ಟ ಜಾತಿಗೆ ಸೇರದ ಸಮುದಾಯದವರು ಆಗಿರುತ್ತಾರೆ ಈಗಾಗಲೇ ಅರಸೀಕೆರೆ ತಾಲ್ಲೂಕಿನಾದ್ಯಂತ ಜಾತಿ ಗಣತಿ ಕಾರ್ಯವು ನಡೆಯುತ್ತಿರುವುದರಿಂದ ಬೇಡ ಜಂಗಮ ಜನಾಂಗದವರು ನಮ್ಮನ್ನು ಪರಿಶಿಷ್ಟ ಜಾತಿಯ ಪಟ್ಟಿಗೆ ಸೇರಿಸಿ ಎಂದು ಗಣತಿ ದಾರದಲ್ಲಿ ಒತ್ತಡ ಏರುತ್ತಿರುವುದು ಕಂಡುಬಂದಿರುತ್ತದೆ.

ಆದುದರಿಂದ ತಾಲ್ಲೂಕು ತಹಶೀಲ್ದಾರರು ಜಿಲ್ಲಾಧಿಕಾರಿಗಳು ಇಂತಹ ಸುಳ್ಳು ಮಾಹಿತಿ ನೀಡಿದವರ ಮೇಲೆ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಈಗಾಗಲೇ ಜಾತಿಗಣತಿ ಕಾರ್ಯವು ನಡೆಯುತ್ತಿದ್ದು ಮಾದಿಗ ಸಮುದಾಯದವರು ಆದಿ ಕರ್ನಾಟಕ ಆದಿ ದ್ರಾವಿಡ ಎಂದು ಎಂದು ಬರೆಸಿದರು ಕೂಡ ಜಾತಿ ಕಾಲಮ್ನಲ್ಲಿ 61 ರಲ್ಲಿ ಮಾದಿಗ ಎಂದು ಕಡ್ಡಾಯವಾಗಿ ಬರೆಸಬೇಕು ಆಗ ಹುಟ್ಟಿದ ಮಗುವನ್ನು ಗಣತಿಗೆ ಸೇರಿಸಬೇಕು ಯಾರು ಕೂಡ ಜಾತಿಗಣತಿಯಿಂದ ಹೊರಗೆ ಉಳಿಯಬಾರದು ಮಾದಿಗ ಜನಾಂಗದ ಮುಂದಿನ ಭವಿಷ್ಯಕ್ಕಾಗಿ ಮೀಸಲಾತಿ ಉದ್ಯೋಗ


☛ ಉದಯವಾಹಿನಿ ಚಿತ್ರ

**ಗಣತಿ ದಾರದಲ್ಲಿ ಒತ್ತಡ**

ಶಿಕ್ಷಣ ರಾಜಕೀಯ ಇನ್ನಿತರ ಸೌಲಭ್ಯಕ್ಕಾಗಿ ಅಗತ್ಯವಾಗಿರುವುದರಿಂದ ಎಲ್ಲರೂ ಕೂಡ ಅಂಜಿಕೆ ಇಲ್ಲದೆ ಮಾದಿಗ ಎಂದು ಬರೆಸಬೇಕು ಯಾವುದೇ ಕಾರಣಕ್ಕೂ ಹಿಂಜರಿಯಬಾರದು ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ತಾಲ್ಲೂಕ ಅಧ್ಯಕ್ಷ ಎಪಿ ಚಂದ್ರಯ್ಯ. ಪ್ರಧಾನ ಕಾರ್ಯದರ್ಶಿ ಎನ್‌ಹೆಚ್ ಕರಿಯಪ್ಪ. ಉಪಾಧ್ಯಕ್ಷರಾದ ರುದ್ರಮುನಿ. ಜಿಲ್ಲಾ ಮಾದಿಗ ದುಂಡೂರಾ ಅಧ್ಯಕ್ಷ ಎಮ್ ಟಿ ವೆಂಕಟೇಶ್. ಸಮಾಜದ ಮುಖಂಡರಾದ ಸಂಕೋಡನಹಳ್ಳಿ ಮಂಜುನಾಥ್. ಮಲ್ದೇವಿಹಳ್ಳಿ ಮಂಜುನಾಥ್. ಕೊಟ್ರೇಶ್ ಸೇರಿದಂತೆ ಅರಸೀಕೆರೆ ನಾಗರಾಧ್ಯಕ್ಷರಾದ ಎನ್ ಜಯ ಕುಮಾರ್ ಉಪಸ್ಥಿತರಿದ್ದರು.

## ಕಾಡಾನೆ ದಾಳಿ: ಕಾರು ಜಖಂ

• ಉದಯವಾಹಿನಿ ಬೆಳಗಾವಿ

ತಾಲ್ಲೂಕಿನ ಉಚಗಾಂವ ಗ್ರಾಮದ ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡ ವಸತಿ ಬಡಾವಣೆಗೆ ಮಂಗಳವಾರ ಬೆಳಿಗ್ಗೆ ನುಗ್ಗಿದ ಕಾಡಾನೆ, ಮನೆ ಮುಂದಿದ್ದ ಕಾರಿಗೆ ಗುದ್ದಿ, ತುಳಿದು, ಬೀಳಿಸಿ ಜಖಂ ಗೊಳಿಸಿದೆ. ಉಚಗಾಂವ- ಬೆಕ್ಕಿನಕೆರೆ ಮಾರ್ಗದಲ್ಲಿ ಡಾ.ನಿರಂಜನ್ ಕದಂ ಅವರ ಮನೆ ಆವರಣಕ್ಕೆ ಬೆಳಗಿನಜಾವ 1.30ರ ಸುಮಾರಿಗೆ ನುಗ್ಗಿದ ಕಾಡಾನೆ ಕಾರಿನ ಮೇಲೆ ದಾಳಿ ಮಾಡಿದೆ. ಅಲ್ಲದೇ ಹತ್ತಿರವೇ ಇದ್ದ ಸಂಭಾಜೀರಾವ್ ಕದಂ ಮತ್ತು ಕಿರಣ್ ಕದಂ ಅವರ ಮನೆಯ ಬಳಿಯಿದ್ದ ಎರಡು ಪ್ಲಾಸ್ಟಿಕ್ ನೀರಿನ ಟ್ಯಾಂಕುಗಳನ್ನು ನಾಶಪಡಿಸಿದೆ.

ಈಚೆಗೆ ಬೆಳಗಾವಿ ತಾಲ್ಲೂಕಿನ ಧಾಮಣೆ ಗ್ರಾಮದಲ್ಲಿ ಗೋಡಂಬಿ ಕೀಳುತ್ತಿದ್ದ ರೈತನ ಮೇಲೆ ದಾಳಿ ನಡೆಸಿತ್ತು. ಇದರಲ್ಲಿ ಗಾಯಗೊಂಡ ರೈತ ಚಿಕಿತ್ಸೆಗೆ ಸ್ಪಂದಿಸದೇ ಮೃತಪಟ್ಟಿದ್ದನ್ನು ಇಲ್ಲಿ ಸ್ಮರಿಸಬಹುದು.

## ಅರಸೀಕೆರೆಯಲ್ಲಿ ಭಾರಿ ಮಳೆ ಸುರಿದಿದ್ದರ ಪರಿಣಾಮ ನಗರಸಭೆ ಅಧ್ಯಕ್ಷರ ಸಿಟಿ ರೌಂಡ್ಸ್


☛ ಉದಯವಾಹಿನಿ ಚಿತ್ರ

• ಉದಯವಾಹಿನಿ ಅರಸೀಕೆರೆ

ಅರಸೀಕೆರೆ ನಗರದಲ್ಲಿ ರಾತ್ರಿ ಸುರಿದ ಮಳೆಗೆ ರಾಜ್ ಕಾಲುವೆ ಚಿರಂಡಿಯಲ್ಲಿ ಮಣ್ಣು ತುಂಬಿಕೊಂಡು ಮಳೆಯ ನೀರು ಮುಂದೆ ಸಾಗದೆ ಹಲವು ಸರ್ಕಾರಿ ಕಟ್ಟಡಗಳ ಮುಂದೆ ನೀರು ತುಂಬಿದ ಕಾರಣ ನಗರಸಭೆ ಅಧ್ಯಕ್ಷರಾದ ಎಂ ಸಮೀವುಲ್ಲಾ ಮತ್ತು ಉಪಾಧ್ಯಕ್ಷರಾದ ಮನೋಹರ್ ಮೇಸ್ತ್ರಿರವರು ವಿಷಯ ತಿಳಿದು ನಗರದ ಸರ್ಕಾರಿ ಮೌಲನ ಆಜಾದ್ ಮಾದರಿ ಶಾಲೆ ಹಾಗೂ ಪ್ರತಿಭಾ ಕಾಲೇಜ್ ಹಿಂಭಾಗದಿಂದ ಮಾರುತಿ ನಗರದವರೆಗೆ ಹಾದು ಹೋಗಿರುವ ರಾಜಕಾಲುವೆ ಚರಂಡಿಯು ಸಂಪೂರ್ಣ ಮಣ್ಣು ತುಂಬಿದ ಕಾರಣ ಹಲವು ಸಮಸ್ಯೆಗಳಿಗೆ ಕಾರಣವಾಗಿದೆ ಎಂದು ತಿಳಿದು ಭೇಟಿ ನೀಡಿ ಪರಿಶೀಲನೆ ಮಾಡಿ ಸ್ಥಳದಲ್ಲೇ ಪರಿಹಾರ ನೀಡಲು ಸೂಚನೆ ನೀಡಿ ತಾವು ಕೂಡ ಸ್ಥಳದಲ್ಲೇ ಇದ್ದು ಬಗೆಹರಿಸಿದರು.

ಈ ಸಂಧರ್ಭದಲ್ಲಿ ಪರಿಸರ ಅಭಿಯಂತರರದ ರವಿಕುಮಾರ್, ಅರೋಗ್ಯ ನಿರೀಕ್ಷಕರಾದ ರೇವಣ್ಣ ಸಿದ್ದಪ್ಪ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

## ಅಪ್ರಾಪ್ತ ಬಾಲಕಿಯ ರಕ್ಷಣೆ

• ಉದಯವಾಹಿನಿ, ಉಡುಪಿ

ಅಪ್ರಾಪ್ತ ಪ್ರಾಯದ ಬಾಲಕಿಯನ್ನು ಇಂದ್ರಾಳಿಯ ರೈಲು ನಿಲ್ದಾಣದಲ್ಲಿ ರಕ್ಷಿಸಿರುವ ಘಟನೆ ನಡೆದಿದೆ. ರಕ್ಷಿಸಲ್ಪಟ್ಟ ಅಪರಿಚಿತ ಬಾಲಕಿಗೆ ಮಕ್ಕಳ ಕಲ್ಯಾಣ ಸಮಿತಿಯ ಆದೇಶದಂತೆ ನಿಟ್ಟೂರು ಬಾಲಕೀಯರ ಬಾಲ ಮಂದಿರದಲ್ಲಿ ಪುರ್ನವಸತಿ ಕಲ್ಪಿಸಲಾಗಿದೆ. ಬಾಲಕಿಯು ಹೆಸರು ಆರತಿ (13ವ) ಅಹಮದಬಾದ್ ಮಧುವನದ ನಿವಾಸಿಯೆಂದು ಹೇಳಿಕೊಂಡಿದ್ದಾರೆ. ಕಾರ್ಯಚರಣೆಯಲ್ಲಿ ರೈಲ್ವೆ ಆರ್ ಪಿ ಎಫ್ ಸುಧೀರ್ ಶೆಟ್ಟಿ, ಜೀನಾ ಪಿಂಟೋ, ರೈಲ್ವೇ ಮಕ್ಕಳ ಸಹಾಯವಾಣಿ ಸಿಬ್ಬಂದಿ ಅತೀಶ್ ಕುಮಾರ್, ನಾಗರೀಕ ಸಮಿತಿಯ ಸಂಚಾಲಕ ನಿತ್ಯಾನಂದ ಒಳಕಾಡು, ಮಕ್ಕಳ ರಕ್ಷಣಾ ಘಟಕದ ಸಿಬ್ಬಂದಿಗಳಾದ ರಮ್ಯ, ಲಕ್ಷ್ಮೀಕಾಂತ್ ಭಾಗಿಯಾಗಿದ್ದರು.


☛ ಉದಯವಾಹಿನಿ ಚಿತ್ರ

## ಉದ್ಯೋಗ ವಂಚನೆ : ಇಬ್ಬರು ಪೊಲೀಸ್ ಅಧಿಕಾರಿಗಳ ಅಮಾನತು

• ಉದಯವಾಹಿನಿ ಮಂಗಳೂರು

ವಿದೇಶದ ಉದ್ಯೋಗ ನೇಮಕಾತಿಯಲ್ಲಿ ವಂಚನೆಗೆ ಸಂಬಂಧಿಸಿದ ಕ್ರಿಮಿನಲ್ ಪ್ರಕರಣದ ತನಿಖೆಯಲ್ಲಿ ಗಂಭೀರ ಲೋಪ ಎಸಗಿದ ಇಬ್ಬರು ಅಧಿಕಾರಿಗಳನ್ನು ಮಂಗಳೂರು ನಗರ ಪೊಲೀಸರು ಅಮಾನತುಗೊಳಿಸಿದ್ದಾರೆ. ಹಿಂದೆ ದೂರುಗಳು ಮತ್ತು ನಿರ್ದೇಶನಗಳನ್ನು ಪಡೆದಿದ್ದರೂ ಸಹ, ಮೆಸರ್ಸ್ ಹೈರ್‌ಗ್ಲೋ ಎಲಿಗಂಟ್ ಓವರ್‌ಸೀಸ್ ಇಂಟರ್‌ನ್ಯಾಷನಲ್ ಪ್ರೈವೇಟ್ ಲಿಮಿಟೆಡ್ ವಿರುದ್ಧ ಸಮಯೋಚಿತ ಮತ್ತು ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ವಿಫಲವಾದ ಕಾರಣ ಮಂಗಳೂರು ಪೂರ್ವ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಸೋಮಶೇಖರ್ ಜೆಸಿ ಅವರನ್ನು ಅಮಾನತುಗೊಳಿಸಲಾಗಿದೆ.

ಅವರ ನಿಷ್ಕ್ರಿಯತೆ ಮತ್ತು ಮೇಲ್ವಿಚಾರಣಾ ಜವಾಬ್ದಾರಿಯ ಕೊರತೆಯಿಂದಾಗಿ ಆರೋಪಿಗಳು ಉದ್ಯೋಗ ಆಕಾಂಕ್ಷಿಗಳಿಗೆ 1.82 ಕೋಟಿ ರೂ.ಗೂ ಹೆಚ್ಚು ವಂಚನೆ ಮಾಡುವುದನ್ನು ಮುಂದುವರಿಸಿದ್ದಾರೆ ಎಂದು ಆರೋಪಿಸಲಾಗಿದೆ. ಪ್ರಸ್ತುತ ಬರ್ಕೆ ಪೊಲೀಸ್ ಠಾಣೆಯಲ್ಲಿ ಸೇವೆ ಸಲ್ಲಿಸುತ್ತಿರುವ ಮತ್ತು ಈ ಹಿಂದೆ ಮಂಗಳೂರು ಪೂರ್ವ ಠಾಣೆಯಲ್ಲಿ ಅಪರಾಧ ಸಂಖ್ಯೆ 235/2024 ರಲ್ಲಿ ತನಿಖಾಧಿಕಾರಿಯಾಗಿದ್ದ ಪಿಎಸ್‌ಐ ಉಮೇಶ್ ಕುಮಾರ್ ಎಂ ಎನ್ ಅವರನ್ನು ಅಮಾನತುಗೊಳಿಸಲಾಗಿದೆ.

ಆರೋಪಿಗಳನ್ನು ಬಂಧಿಸುವಲ್ಲಿ ವಿಫಲತೆ, ಪ್ರಮುಖ ಸಾಕ್ಷ್ಯಗಳನ್ನು ಸಂಗ್ರಹಿಸುವುದು, ಸಾಕ್ಷಿಗಳನ್ನು ಪರೀಕ್ಷಿಸುವುದು ಸೇರಿದಂತೆ ತನಿಖೆಯಲ್ಲಿ ಅನೇಕ ಲೋಪಗಳನ್ನು ಮಾಡಿದ್ದಾರೆ ಎಂದು ಅವರ ಮೇಲೆ ಆರೋಪಿಸಲಾಗಿದೆ.


ನಿರ್ಲಕ್ಷ್ಯ, ಬೇಜವಾಬ್ದಾರಿ ಮತ್ತು ಕರ್ತವ್ಯ ಉಲ್ಲಂಘನೆಯನ್ನು ಉಲ್ಲೇಖಿಸಿ ಇಲಾಖೆ ಇಬ್ಬರೂ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಂಡಿದೆ.

## ಸಾಮಾಜಿಕ ಜಾಲತಾಣಕ್ಕಿಂತ ಸಮಾಜ ಮುಖ್ಯ : ಸತ್ಯಂಪೇಟೆ

• ಉದಯವಾಹಿನಿ ಕಲಬುರಗಿ

ಯಾವುದೋ ಭ್ರಮಾಲೋಕದಲ್ಲಿ ಮುಳುಗಿ ಗೊಂದಲದ ಗೂಡಾಗಿರುವ ಇಂದಿನ ಯುವಕರು ಸಂವಿಧಾದ ರಕ್ಷಣೆಗೆ ಮುಂದಾಗಬೇಕು ಎಂದು ಪತ್ರಕರ್ತ-ಲೇಖಕ ಡಾ.ಶಿವರಂಜನ ಸತ್ಯಂಪೇಟೆ ಹೇಳಿದರು.

ನಗರದ ಹೊರ ವಲಯದಲ್ಲಿರುವ ಪಂಚಾಯತ್ ರಾಜ್ ಇಲಾಖೆಯ ಅಬ್ದುಲ್ ನಜೀರ್ ಸಾಬ್ ತರಬೇತಿ ಕೇಂದ್ರದಲ್ಲಿ ಸೋಮವಾರ ಆಯೋಜಿಸಿದ್ದ 4ನೇ ದಿನದ ತರಬೇತಿ ಕಾರ್ಯಕ್ರಮದಲ್ಲಿ ಸಂವಿಧಾನ ಮತ್ತು ಮಾಧ್ಯಮ ವಿಷಯ ಕುರಿತು ಮಾತನಾಡಿದ ಅವರು, ಪ್ರಬಲ ಮಾಧ್ಯಮವಾಗಿ ಬೆಳೆಯುತ್ತಿರುವ ಸಾಮಾಜಿಕ ಜಾಲತಾಣ ನೆಚ್ಚಿಕೊಂಡಿರುವ ಯುವಕರಿಗೆ ಸಮಾಜ ಮುಖ್ಯವಾಗಬೇಕು ಎಂದು ಕರೆ ನೀಡಿದರು. ಬಸವಣ್ಣನವರು ಕಳಬೇಡ, ಕೊಲಬೇಡ ಎಂಬ ವಚನದ ಮೂಲಕ ಸಾರ್ಥಕ ಬದುಕಿಗೆ ಸಪ್ತ ಸೂತ್ರಗಳನ್ನು ಹೇಳಿದರೆ, ಡಾ. ಬಿ.ಆರ್. ಅಂಬೇಡ್ಕರ್ ಅವರು ಸಂವಿಧಾನದ ಮೂಲಕ ಭಾರತೀಯರ ಬದುಕಿಗೆ ಘನತೆ ತಂದು ಕೊಟ್ಟರು ಎಂದು ಅಭಿಪ್ರಾಯಪಟ್ಟರು.


☛ ಉದಯವಾಹಿನಿ ಚಿತ್ರ

ಸಂವಿಧಾನದ ರಕ್ಷಣೆಯಲ್ಲಿ ಪ್ರಜಾಪ್ರಭುತ್ವದ ನಾಲ್ಕನೇ ಅಂಗವಾದ ಮಾಧ್ಯಮದ ಮೇಲೆ ಸಾಕಷ್ಟು ಜವಾಬ್ದಾರಿಯಿದ್ದು, ಸಂವಿಧಾನದ ಓದು ಮತ್ತು ಅನುಸರಣೆ ಬಹಳ ಅಗತ್ಯ ಎಂದು ಅವರು ಪ್ರತಿಪಾದಿಸಿದರು.

● ತಾಲ್ಲೂಕು 38 ಹಳ್ಳಿಗಳ ವ್ಯಾಪ್ತಿ ಹೊಂದಿದೆ, ಅದರಲ್ಲಿ ಅರ್ಧಕ್ಕೂ ಹೆಚ್ಚು ಹಳ್ಳಿಗಳು ನೀರಿನ ಸಮಸ್ಯೆ ಎದುರಿಸುತ್ತಿವೆ

# ಹಲವು ಗ್ರಾಮಗಳಲ್ಲಿ ಕುಡಿಯುವ ನೀರಿನ ಕೊರತೆ

• ಉದಯವಾಹಿನಿ, ಗುಳೇದಗುಡ್ಡ

ತಾಲ್ಲೂಕು 38 ಹಳ್ಳಿಗಳ ವ್ಯಾಪ್ತಿ ಹೊಂದಿದೆ. ಅದರಲ್ಲಿ ಅರ್ಧಕ್ಕೂ ಹೆಚ್ಚು ಹಳ್ಳಿಗಳು ನೀರಿನ ಸಮಸ್ಯೆ ಎದುರಿಸುತ್ತಿವೆ.

ಅಸಂಗಿ, ಲಾಯದಗುಂದಿ, ನಾಗರಾಳ, ಸಬ್ಬಲಹುಣಸಿ ಗ್ರಾಮಗಳಿಗೆ ಆಸಂಗಿಯ ಹತ್ತಿರ ಕೆರೆ ನಿರ್ಮಾಣ ಮಾಡಿ ಮಲಪ್ರಭಾ ನದಿಯ ನೀರನ್ನು ಸಂಗ್ರಹಿಸಿ ಸರಬರಾಜು ಮಾಡಲಾಗುತ್ತಿದೆ ಆದರೆ ನೀರು ಕಲುಷಿತವಾಗಿರುವುದರಿಂದ ಅದನ್ನು ಕುಡಿಯಲು ಉಪಯೋಗಿಸದೇ, ಇತರ ಬಳಕೆಗೆ ಹಾಗೂ ದನಕರುಗಳಿಗೆ ಮಾತ್ರ ಕುಡಿಯಲು ಉಪಯೋಗಿಸಲಾಗುತ್ತಿದೆ. ಗ್ರಾಮಕ್ಕೊಂದು ಕೊಳವೆ ಬಾವಿ ಇದೆ. ಅದರಿಂದ ನೀರು ಸಂಗ್ರಹಿಸಿ ಕುಡಿಯಲು ಸರಬರಾಜು ಮಾಡಲಾಗುತ್ತಿದೆ. ವಿದ್ಯುತ್ ಕೈಕೊಟ್ಟರೆ, ಕೊಳವೆಬಾವಿ ಹಾಳಾದರೆ ನೀರಿನ ತೀವ್ರ ತೊಂದರೆ ಎದುರಿಸಬೇಕಾಗುತ್ತದೆ. ತಾಲ್ಲೂಕಿನ ಹುಲ್ಲಿಕೇರಿ ಗ್ರಾಮದಲ್ಲಿ ಒಂದೇ ಕೊಳವೆ ಬಾವಿ ಇದ್ದು ಅದು ಹಾಳಾದರೆ ಟ್ಯಾಂಕರ್ ನೀರೇ ಗತಿ. ತೆಗ್ಗಿ ಗ್ರಾಮದಲ್ಲಿ ನೀರಿನ ತೀವ್ರ ತೊಂದರೆ ಇದ್ದು ಈಚೆಗೆ ಗ್ರಾಮಸ್ಥರು ಕೆಲವಡಿ ಗ್ರಾಮ ಪಂಚಾಯತಿಗೆ ಖಾಲಿ ಕೊಡಗಳೊಂದಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಿದ್ದರು. ಟ್ಯಾಂಕರ್ ಮೂಲಕ ಕುಡಿಯುವ ನೀರನ್ನು ತೆಗ್ಗಿ ಗ್ರಾಮಕ್ಕೆ ಪೂರೈಸಲಾಗುತ್ತಿದೆ.


☛ ಉದಯವಾಹಿನಿ ಚಿತ್ರ



### ಕಾರ್ಯಗತಗೊಳ್ಳದ 24×7 ಯೋಜನೆ

**ವಾರದ 24 ಗಂಟೆ ಕುಡಿಯುವ ನೀರು ಸರಬರಾಜು ಮಾಡುವ ಮೊದಲ ಹಂತದ ಯೋಜನೆ ಜಾರಿಗೊಂಡರೂ ಗುಳೇದಗುಡ್ಡ ಪಟ್ಟಣಕ್ಕೆ ವಾರದಲ್ಲಿ ಎರಡು ದಿನ ಮಾತ್ರ ನೀರು ಪೂರೈಸಲಾಗುತ್ತಿದೆ. ಆದರೆ ಈಚೆಗೆ ಶಾಸಕ ಭೀಮಸೇನ ಚಿಮ್ಮನಕಟ್ಟಿ ಅವರು ಎರಡನೇ ಹಂತದ ಶಾಶ್ವತ ಕುಡಿಯುವ ನೀರಿನ ಯೋಜನೆ ಉದ್ಘಾಟನೆ ಮಾಡಿದ್ದಾರೆ. ಆದರೆ ಪಟ್ಟಣದ ತುಂಬ ರಸ್ತೆ ಅಗೆದು ಪೈಪ್ ಲೈನ್ ಅಳವಡಿಸುವ ಕಾರ್ಯ ವರ್ಷವಾದರೂ ಇನ್ನೂ ಮುಗಿದಿಲ್ಲ. ಪಟ್ಟಣದಲ್ಲಿರುವ ಉತ್ತಮ ಸಿಸಿ ರಸ್ತೆ ಅಗೆದಿರುವುದರಿಂದ ಜನರು ಅಡ್ಡಾಡಲು ಸಹ ಪರದಾಡುತ್ತಿದ್ದಾರೆ. ನಲ್ಲಿಗಳಲ್ಲಿ ನೀರು ಯಾವಾಗ ಬರುತ್ತದೆ ಎಂದು ಕಾಯುವಂಥ ಸ್ಥಿತಿ ಉಂಟಾಗಿದೆ.**


> ತಾಲ್ಲೂಕಿನ ಹಳ್ಳಿಗಳಲ್ಲಿ ನೀರಿನ ತೊಂದರೆಯಾಗದಂತೆ ನೋಡಿಕೊಳ್ಳಲು ಗ್ರಾಮ ಪಂಚಾಯಿತಿ ಪಿಡಿಒಗಳಿಗೆ ಸೂಚಿಸಲಾಗಿದೆ. ರೈತರೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ
> -ಮಲ್ಲಿಕಾರ್ಜುನ ಬಡಿಗೇರ
> ತಾಲ್ಲೂಕು ಪಂಚಾಯಿತಿ ಇಒ ಗುಳೇದಗುಡ್ಡ

**ಕಾರ್ಯಗತಗೊಳ್ಳದ ಜಲಜೀವನ್ ಮಿಷನ್:** 'ಬಹುಗ್ರಾಮ ಕುಡಿಯುವ ನೀರಿಗಾಗಿ ಜಲಜೀವನ ಮಿಷನ್ ಅನ್ನು ಎಲ್ಲ ಗ್ರಾಮಗಳಲ್ಲಿ ಜಾರಿಗೊಳಿಸಲಾಗಿದೆ. ಆದರೆ ಇದುವರೆಗೆ ನೀರು ಬಂದಿಲ್ಲ.

ಗ್ರಾಮದ ಮುಖ್ಯ ರಸ್ತೆ ಅಗೆದು ಸರಿಯಾಗಿ ಮುಚ್ಚದೇ ಹೋಗಿದ್ದಾರೆ ಎಂದು ಹುಲ್ಲಿಕೇರಿ ಗ್ರಾಮದ ಮುಖಂಡ ರಮೇಶ ಬೂದಿಹಾಳ ದೂರುತ್ತಾರೆ.

**ಶುದ್ಧ ಕುಡಿಯುವ ನೀರಿನ ಘಟಕ ಸ್ಥಗಿತ:** ಪಟ್ಟಣದಲ್ಲಿ 8ಕ್ಕೂ ಹೆಚ್ಚು ಶುದ್ಧ ಕುಡಿಯುವ ನೀರಿನ ಘಟಕಗಳಿದ್ದು ಅದರಲ್ಲಿ 4 ಸ್ಥಗಿತಗೊಂಡಿವೆ. ಶುದ್ಧ ನೀರಿಗಾಗಿ ಪಟ್ಟಣದ ಜನರು ಅಲೆಯುವಂತಾಗಿದೆ. ಕೆಲವು ಶುದ್ಧ ನೀರಿನ ಘಟಕಗಳನ್ನು ಟೆಂಡರ್ ಕರೆದು ಗುತ್ತಿಗೆ ನೀಡದೇ ಇರುವುದು ತೊಂದರೆಯಾಗಿದೆ. ತಾಲ್ಲೂಕಿನ ಹಲವು ಗ್ರಾಮಗಳಲ್ಲಿ ಇದೆ ಸ್ಥಿತಿ ಇದೆ. ಆದಷ್ಟು ಬೇಗನೇ ಶುದ ನೀರಿನ ವವಸೆ ಮಾಡಬೇಕು ಎಂದು ಪುರಸಭೆ ಸದಸ್ಯ ಉಮೇಶ ಹುನಗುಂದ ಒತಾಯಿಸಿದಾರೆ.

**ಅರ್ಧಕ್ಕೆ ನಿಂತ ಕೆರೆ ತುಂಬುವ ಯೋಜನೆ:** ಮಲಪ್ರಭಾ ನದಿಯಿಂದ ಪಟ್ಟಣಕ್ಕೆ ಹೊಂದಿಕೊಂಡಿರುವ ಪರ್ವತಿ ಕೆರೆಗೆ ನೀರು ತುಂಬಿಸುವ 2 ಕೋಟಿ ವೆಚ್ಚದ ಕೆಲಸ ಆರಂಭವಾಗಿತ್ತು. ಅನಿವಾರ್ಯ ಕಾರಣ ಹೇಳಿ ಕಾಮಗಾರಿ ಸ್ಥಗಿತಗೊಂಡಿರುವುದರಿಂದ ಕೆಲವು ಹಳ್ಳಿಗಳಿಗೆ ನೀರಿನ ತೊಂದರೆಯಾಗಿದೆ.



# ಮುದ್ದಿನ ನಾಯಿಗೋಸ್ಕರ ಪವಿ ಪೂವಪ್ಪ ಲವ್ ಬ್ರೇಕಪ್

## ಕಣ್ಣೀರಿಟ್ಟ ಬಿಗ್ ಬಾಸ್ ಸ್ಪರ್ಧಿ

'ಬಿಗ್ ಬಾಸ್' ಖ್ಯಾತಿಯ ಪವಿ ಪೂವಪ್ಪ ಅವರು ಮೊದಲ ಬಾರಿಗೆ ತಮ್ಮ ಲವ್ ಬ್ರೇಕಪ್ ಬಗ್ಗೆ ಮಾತನಾಡಿದ್ದಾರೆ. ನಾಯಿ ವಿಚಾರಕ್ಕೆ ಬಾಯ್‌ಫ್ರೆಂಡ್ ಡಿಜೆ ಮ್ಯಾಡಿ ಅವರೊಂದಿಗೆ ಬ್ರೇಕಪ್ ಮಾಡಿಕೊಂಡಿದ್ದರ ಬಗ್ಗೆ ನಟಿ ರಿವೀಲ್ ಮಾಡಿದ್ದಾರೆ. 1'ಭರ್ಜರಿ ಬ್ಯಾಚುಲರ್ 2' ಕಾರ್ಯಕ್ರಮದಲ್ಲಿ ಬ್ರೇಕಪ್ ಸ್ಟೋರಿಯನ್ನು ಹೇಳುತ್ತಾ ಪವಿ ಪೂವಪ್ಪ ಬಿಕ್ಕಿ ಬಿಕ್ಕಿ ಅತ್ತಿದ್ದಾರೆ. ನಾವು ಐದು ವರ್ಷಗಳ ಕಾಲ ರಿಲೇಷನ್‌ಶಿಪ್‌ನಲ್ಲಿದ್ವಿ. ಅವರು ನಾರ್ಥ್ ಇಂಡಿಯನ್ ನಾನು ಸೌತ್ ಇಂಡಿಯನ್. ನನಗೆ ನನ್ನ ನಾಯಿ ಅಂದರೆ ಪಂಚಪ್ರಾಣ. ನನ್ನ ಹುಟ್ಟುಹಬ್ಬಕ್ಕೆ ಆ ನಾಯಿಯನ್ನು ಅವರೇ ಉಡುಗೊರೆಯಾಗಿ ನೀಡಿದ್ದರು. ಆದರೆ ನನ್ನನ್ನು ಬಿಟ್ಟು ಹೋಗಲು ನಾಯಿ ಕಾರಣವನ್ನು ಕೊಟ್ಟರು. ನಾಯಿಯನ್ನು ಮಾರಿಬಿಡು ಆಗಲೇ ನಿನ್ನನ್ನು ಮನೆಗೆ ಸೇರಿಸಿಕೊಳ್ಳುವುದು ಅಂತೆಲ್ಲಾ ಹೇಳಿದ್ದರು. ಇಲ್ಲ ಅಂದ್ರೆ ಮದುವೆ ಆಗಲ್ಲ ಎಂದು ಹೇಳಿದ್ದರು. ಆ ನಾಯಿ ನನಗೆ ಎಷ್ಟು ಇಷ್ಟ ಅನ್ನೋದು ಅವರಿಗೂ ಚೆನ್ನಾಗಿ ಗೊತ್ತಿತ್ತು. ಈಗಲೂ ಅವನು ನನ್ನನ್ನು ಬಿಟ್ಟು ಇರೋದಿಲ್ಲ ಎಂದಿದ್ದಾರೆ. ಬ್ರೇಕಪ್ ಮಾಡಿಕೊಳ್ಳುವ ಉದ್ದೇಶದಿಂದಲೇ ನಾಯಿ ವಿಚಾರ ಹೇಳಿ ಹೀಗೆ ಮಾಡಿದ್ದಿರಬಹುದು. ಬಹುಶಃ ಅವರಿಗೆ ಮದುವೆ ಆದಮೇಲೆ ಜವಾಬ್ದಾರಿಗಳನ್ನು ತೆಗೆದುಕೊಳ್ಳಲು ಇಷ್ಟವಿರಲಿಲ್ಲ. ಹಾಗಾಗಿ ನಾಯಿ ಕಾರಣ ಕೊಟ್ಟು ಬ್ರೇಕಪ್ ಮಾಡಿಕೊಂಡಿದ್ದಾರೆ. ಇದಾಗಿ 8 ತಿಂಗಳುಗಳಾಗಿದೆ. ಎರಡು ದಿನದ ಹಿಂದೆ ನಾನು ಅವರನ್ನು ನೋಡಿದೆ ಎನ್ನುತ್ತಾ ಪವಿ ಪೂವಪ್ಪ ಗಳಗಳನೆ ಅತ್ತಿದ್ದಾರೆ. ಆಗ 'ಭರ್ಜರಿ ಬ್ಯಾಚುಲರ್ಸ್' ತಂಡದವರು ಅವರನ್ನು ಸಂತೈಸಿದ್ದಾರೆ. 'ಬಿಗ್ ಬಾಸ್' ಕನ್ನಡ 10ರಲ್ಲಿ ಪವಿ ಪೂವಪ್ಪ ಅವರು ವೈಲ್ಡ್ ಕಾರ್ಡ್ ಸ್ಪರ್ಧಿಯಾಗಿ ಎಂಟ್ರಿ ಕೊಟ್ಟಿದ್ದರು. ಕೆಲವೇ ದಿನ ಇದ್ದರೂ ಜನರ ಮನಗೆದ್ದಿದ್ದರು. ಇದೀಗ 'ಭರ್ಜರಿ ಬ್ಯಾಚುಲರ್ 2' ಉಲ್ಲಾಸ್‌ಗೆ ಪವಿ ಮೆಂಟರ್ ಆಗಿದ್ದಾರೆ.

# ಅಬ್ಬರಿಸಿ ಬೊಬ್ಬಿರಿದ ಜ್ಯೂ.ಎನ್‌ಟಿಆರ್

## ತಾರಕ್ ಡೈಲಾಗ್ ಶುರು



ತೆಲುಗಿನ ಸ್ಟಾರ್ ನಟ ಜ್ಯೂ.ಎನ್‌ಟಿಆರ್‌ಗೆ ಮೇ 20 ಹುಟ್ಟುಹಬ್ಬದ ಹಿನ್ನೆಲೆ 'ವಾರ್ 2' ಟೀಸರ್ ರಿಲೀಸ್ ಮಾಡಲಾಗಿದೆ. ಹೃತಿಕ್ ರೋಷನ್ ಮುಂದೆ ಖಡಕ್ ವಿಲನ್ ಆಗಿ ತಾರಕ್ ಬಾಲಿವುಡ್‌ಗೆ ಪಾದಾರ್ಪಣೆ ಮಾಡಿದ್ದಾರೆ. 'ವಾರ್ 2' ಟೀಸರ್‌ನಲ್ಲಿ ಹೃತಿಕ್ ಮುಂದೆ ಜ್ಯೂ.ಎನ್‌ಟಿಆರ್ ಅಬ್ಬರಿಸಿದ್ದಾರೆ. ಖಡಕ್ ವಿಲನ್ ಆಗಿ ಕಾಣಿಸಿಕೊಂಡಿದ್ದಾರೆ. ಟೀಸರ್‌ನಲ್ಲಿ ನನ್ನ ಕಣ್ಣುಗಳ ಯಾವತ್ತಿನಿಂದಲೋ ನಿನ್ನನ್ನು ಹುಡುಕಾಡುತ್ತಿದೆ ಎನ್ನುತ್ತಾ ತಾರಕ್ ಡೈಲಾಗ್ ಶುರುವಾಗಿದೆ. ನಿನಗೆ ನನ್ನ ಬಗ್ಗೆ ಗೊತ್ತಿಲ್ಲ. ಈಗ ಗೊತ್ತಾಗುತ್ತದೆ, ಗೆಟ್ ರೆಡಿ ಫಾರ್ ವಾರ್ ಎಂದು ತಾರಕ್ ಡೈಲಾಗ್ ಹೊಡೆದಿದ್ದಾರೆ. ಹೃತಿಕ್ ಮತ್ತು ತಾರಕ್ ಜುಗಲ್ ಬಂದಿ ಮಸ್ತ್ ಆಗಿದೆ. ಇಬ್ಬರೂ ಪೈಪೋಟಿಯಲ್ಲಿ ಫೈಟಿಂಗ್ ಮಾಡಿದಂತಿದೆ. ಅಷ್ಟರ ಮಟ್ಟಿಗೆ ಆಕ್ಷನ್ ಸೀಕ್ವೆನ್ಸ್ ಟೀಸರ್‌ನಲ್ಲಿ ತೋರಿಸಲಾಗಿದೆ.

ಈ ಚಿತ್ರದ ಟೀಸರ್ ಅಭಿಮಾನಿಗಳಿಂದ ಉತ್ತಮ ರೆಸ್ಪಾನ್ಸ್ ಸಿಕ್ಕಿದೆ. ಗ್ಲ್ಯಾಮರ್ ಗೊಂಬೆಯಾಗಿ ಕಿಯಾರಾ ಅಡ್ವಾಣಿ ನಟಿಸಿದ್ದು, ಬಿಕಿನಿಯಲ್ಲಿ ಮಿಂಚಿದ್ದಾರೆ. ರಾ ಏಜೆಂಟ್ ಆಗಿರೋ ಹೃತಿಕ್‌ಗೆ ನಾಯಕಿಯಾಗಿ ನಟಿಸಿದ್ದಾರೆ.

ಈ ಚಿತ್ರವನ್ನು 150 ದಿನಗಳ ಕಾಲ 6 ದೇಶಗಳಲ್ಲಿ 'ವಾರ್ 2' ಶೂಟಿಂಗ್ ಮಾಡಲಾಗಿದೆ. ಯಶ್ ರಾಜ್ ಫಿಲ್ಮ್ ನಿರ್ಮಾಣದ ಈ ಸಿನಿಮಾವನ್ನು 'ಬ್ರಹ್ಮಾಸ್ತ್ರ' ಡೈರೆಕ್ಟರ್ ಅಯಾನ್ ಮುಖರ್ಜಿ ನಿರ್ದೇಶನ ಮಾಡಿದ್ದಾರೆ. ಆ.14ರಂದು ತೆಲುಗು, ತಮಿಳು, ಹಿಂದಿ ಭಾಷೆಯಲ್ಲಿ ವಾರ್ 2 ರಿಲೀಸ್ ಆಗಲಿದೆ.

# ಹುಟ್ಟುಹಬ್ಬದ ದಿನವೇ ಧನ್ಸಿಕಾ ಜೊತೆ ಮದುವೆ

ಕಾಲಿವುಡ್ ನಟ ವಿಶಾಲ್ ಫ್ಯಾನ್ಸ್‌ಗೆ ಗುಡ್ ನ್ಯೂಸ್ ಕೊಟ್ಟಿದ್ದಾರೆ. 'ಯೋಗಿದ' ಚಿತ್ರದ ನಟಿ ಸಾಯಿ ಧನ್ಸಿಕಾ ಜೊತೆ ಹಸೆಮಣೆ ಏರಲು ಸಜ್ಜಾಗಿದ್ದಾರೆ. ಈ ಮದುವೆ ಬಗ್ಗೆ ಅಧಿಕೃತವಾಗಿ ಧನ್ಸಿಕಾ, ವಿಶಾಲ್ ಇಬ್ಬರೂ ಅನೌನ್ಸ್ ಮಾಡಿದ್ದಾರೆ. ಆಗಸ್ಟ್‌ನಲ್ಲಿ ಮದುವೆ ಆಗೋದಾಗಿ ಸಿಹಿಸುದ್ದಿ ಕೊಟ್ಟಿದ್ದಾರೆ. ಕಳೆದ 15 ವರ್ಷಗಳಿಂದ ಪರಿಚಿತರಾಗಿರುವ ಧನ್ಸಿಕಾ ಜೊತೆ ವಿಶಾಲ್ ಮದುವೆಗೆ ಸಜ್ಜಾಗಿದ್ದಾರೆ. ಈ ಬಗ್ಗೆ ಚೆನ್ನೈನಲ್ಲಿ ನಡೆದ ಧನ್ಸಿಕಾ ನಟನೆಯ 'ಯೋಗಿದ' ಚಿತ್ರದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವಿಶಾಲ್, ನನಗೆ ಧನ್ಸಿಕಾ ಜೊತೆ ಮದುವೆ ಫಿಕ್ಸ್ ಆಗಿದೆ. ಅವರ ತಂದೆ ಕೂಡ ಇಲ್ಲಿಯೇ ಇದ್ದಾರೆ. ಅವರ ಆಶೀರ್ವಾದೊಂದಿಗೆ ನಾನು ಅವಳನ್ನು ಪರಿಚಯಿಸುತ್ತಿದ್ದೇನೆ. ಧನ್ಸಿಕಾ ಅದ್ಭುತ ನಟಿ.



ಮದುವೆ ಬಳಿಕವೂ ಆಕೆ ನಟನೆ ಮಾಡುತ್ತಾರೆ ಎಂದಿದ್ದಾರೆ. ಬಳಿಕ ಸಾಯಿ ಧನ್ಸಿಕಾ ಮಾತನಾಡಿ, ನಮ್ಮ ಮದುವೆ ವಿಷಯ ಈಗಲೇ ತಿಳಿಸಬಾರದು ಅಂದುಕೊಂಡಿದ್ದೇವು. ಆದರೆ ಸೋಶಿಯಲ್ ಮೀಡಿಯಾದಲ್ಲಿ ಬೆಳಗ್ಗೆಯಿಂದ ನ್ಯೂಸ್ ವೈರಲ್ ಆಗುತ್ತಿದೆ. ಹೀಗಾಗಿ ಈಗಲೇ ಮದುವೆ ದಿನಾಂಕ ಕೂಡ ಘೋಷಣೆ ಮಾಡುತ್ತೇವೆ. ಕಳೆದ 15 ವರ್ಷಗಳಿಂದಲೂ ಇಬ್ಬರ ನಡುವೆ ಒಳ್ಳೆಯ ಸಂಬಂಧ ಇದೆ. ನಡಿಗರ್ ಸಂಘದ ಕಟ್ಟಡ ಆ.15ರಂದು ಉದ್ಘಾಟನೆ ಮಾಡಲು ಪ್ಲ್ಯಾನ್ ಮಾಡಿದ್ದೇವೆ. ಬಳಿಕ ಆಗಸ್ಟ್ 29ರಂದು ಇಬ್ಬರು ಹೊಸ ಜೀವನಕ್ಕೆ ಕಾಲಿಡಲಿದ್ದೇವೆ ಎಂದು ಹೇಳಿದ್ದಾರೆ.



# ರನ್ಯಾ ರಾವ್‌ಗೆ ಜಾಮೀನು ಮಂಜೂರು

## ಹೊರಗೆ ಹೋಗದಂತೆ ಸೂಚನೆ

ಗೋಲ್ಡ್ ಸ್ಮಗ್ಲಿಂಗ್ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿದ್ದ ನಟಿ ರನ್ಯಾ ರಾವ್‌ಗೆ ಆರ್ಥಿಕ ವ್ಯವಹಾರಗಳ ವಿಶೇಷ ನ್ಯಾಯಾಲಯ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ. ಜೊತೆಗೆ ಪ್ರಕರಣದ 2ನೇ ಆರೋಪಿ ತರುಣ್ ಕೊಂಡರಾಜುಗೂ ಜಾಮೀನು ಮಂಜೂರು ಮಾಡಿ ಕೋರ್ಟ್ ಆದೇಶಿಸಿದೆ. 60 ದಿನ ಕಳೆದರೂ ಡಿಆರ್‌ಐ ಅಧಿಕಾರಿಗಳು ದೋಷಾರೋಪ ಪಟ್ಟಿ ಸಲ್ಲಿಸದ ಹಿನ್ನೆಲೆ ಆರೋಪಿಗಳು ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ಆರ್ಥಿಕ ವ್ಯವಹಾರಗಳ ವಿಶೇಷ ನ್ಯಾಯಾಲಯ ಷರತ್ತು ಬದ್ಧ ಜಾಮೀನು ಮಂಜೂರು ಮಾಡಿದೆ. ಇಬ್ಬರು ಶ್ಯೂರಿಟಿ, 2 ಲಕ್ಷ ರೂ. ಬಾಂಡ್ ಮೇಲೆ ಜಾಮೀನು ನೀಡಲಾಗಿದೆ. ಅಲ್ಲದೇ ಮುಂದೆ ಇಂತಹ ಕೃತ್ಯಗಳಲ್ಲಿ ಭಾಗಿಯಾದಂತೆ ಹಾಗೂ ದೇಶ ಬಿಟ್ಟು ಹೊರಗೆ ಹೋಗದಂತೆ ಸೂಚನೆ ನೀಡಿದೆ. ರನ್ಯಾ ರಾವ್ ಪರವಾಗಿ ವಕೀಲ ಗಿರೀಶ್ ವಾದ ಮಂಡಿಸಿದರು. 12 ಕೋಟಿ ರೂ. ಮೌಲ್ಯದ 14 ಕೆ.ಜಿ ಚಿನ್ನದ ಗಟ್ಟಿಗಳನ್ನು ದುಬೈನಿಂದ ಬೆಂಗಳೂರಿಗೆ ತಂದು ನಟಿ ರನ್ಯಾ ರಾವ್ ಬಂಧನಕ್ಕೆ ಒಳಗಾಗಿದ್ದರು. ಈ ಹಿಂದೆ ಜಾಮೀನು ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ಮತ್ತು ಮ್ಯಾಜಿಸ್ಟ್ರೇಟ್ ಕೋರ್ಟ್ ತಿರಸ್ಕರಿಸಿತ್ತು.

# ಮೇಕಪ್ ಆರ್ಟಿಸ್ಟ್ ಹೊನ್ನೆಗೌಡ ನಿಧನ

## ಭಾವುಕ ಪೋಸ್ಟ್ ಹಂಚಿಕೊಂಡ ದಚ್ಚು



ನಟ ದರ್ಶನ್‌ಗೆ 25 ವರ್ಷಗಳಿಂದ ಮೇಕಪ್ ಆರ್ಟಿಸ್ಟ್ ಆಗಿದ್ದ ಹೊನ್ನೇಗೌಡ ನಿಧನರಾಗಿದ್ದಾರೆ. ಆಪ್ತ ಹೊನ್ನೆಗೌಡ ನಿಧನದ ಬಗ್ಗೆ ನಟ ಕಂಬನಿ ಮಿಡಿದಿದ್ದಾರೆ. ಸೋಷಿಯಲ್ ಮೀಡಿಯಾದಲ್ಲಿ ನಟ ಭಾವುಕವಾಗಿ ಬರೆದುಕೊಂಡಿದ್ದಾರೆ. 25 ವರ್ಷಗಳಿಂದ ನನ್ನೊಂದಿಗೆ ಕೆಲಸ ಮಾಡಿದ ಮೇಕಪ್ ಆರ್ಟಿಸ್ಟ್ ಹೊನ್ನೆಗೌಡ ಇಂದು ಅಗಲಿದ್ದಾರೆ. ಈ ಸುದ್ದಿ ನಮ್ಮೆಲ್ಲರನ್ನು ಶೋಕದಲ್ಲಿ ಮುಳುಗಿಸಿದೆ. ಅವರ ಕಲೆ, ನಿಷ್ಠೆ ಮತ್ತು ನಗುಮೊಗದ ಸೇವೆಯನ್ನು ಎಂದಿಗೂ ಮರೆಯಲಾಗದು. ಈ ದುಃಖದ ಸಮಯದಲ್ಲಿ ದೇವರು ಅವರ ಕುಟುಂಬಕ್ಕೆ ನೋವನ್ನು ನುಂಗುವ ಶಕ್ತಿ ನೀಡಲಿ. ಹೊನ್ನೆಗೌಡರ ಆತ್ಮಕ್ಕೆ ಶಾಂತಿ ದೊರೆಯಲಿ. ಓಂ ಶಾಂತಿ ಎಂದು ಇನ್ಸ್ಟಾಗ್ರಾಂನಲ್ಲಿ ಬರೆದುಕೊಂಡಿದ್ದಾರೆ. 'ಡೆವಿಲ್' ಸಿನಿಮಾ ಕೆಲಸದಲ್ಲಿ ದರ್ಶನ್ ಬ್ಯುಸಿಯಾಗಿದ್ದಾರೆ. ಈ ಚಿತ್ರದ ಶೂಟಿಂಗ್ ಭರದಿಂದ ನಡೆಯುತ್ತಿದೆ. ಅವರೊಂದಿಗೆ ವಿನಯ್ ಗೌಡ, ಶರ್ಮಿಳಾ ಮಾಂಡ್ರೆ ಸೇರಿದಂತೆ ಅನೇಕರು ನಟಿಸುತ್ತಿದ್ದಾರೆ. ಮಿಲನಾ ಪ್ರಕಾಶ್ ಈ ಚಿತ್ರಕ್ಕೆ ಆಯಕ್ಷನ್ ಕಟ್ ಹೇಳಿದ್ದಾರೆ. ಈ ಹಿಂದೆ ದರ್ಶನ್ ನಟನೆಯ 'ತಾರಕ್' ಚಿತ್ರಕ್ಕೂ ಇವರೇ ನಿರ್ದೇಶನ ಮಾಡಿದ್ದರು.

# ಮುಂಬೈ ತಂಡದಿಂದ ಮೂವರು ಔಟ್

## ಪ್ಲೇಆಫ್ ಪಂದ್ಯಗಳಿಗೆ ಅಲಭ್ಯ



ಇಂಡಿಯನ್ ಪ್ರೀಮಿಯರ್ ಲೀಗ್ ಸೀಸನ್-18ರ ಪ್ಲೇಆಫ್ ಹೊಸ್ತಿಲಲ್ಲಿರುವ ಮುಂಬೈ ಇಂಡಿಯನ್ಸ್ ತಂಡದಿಂದ ಮೂವರು ಆಟಗಾರರು ಹೊರಗುಳಿಯುವುದು ಖಚಿತವಾಗಿದೆ. ಈ ಮೂವರ ಹೊರಗುಳಿಯುವಿಕೆ ಖಚಿತವಾಗುತ್ತಿದ್ದಂತೆ, ಮುಂಬೈ ಫ್ರಾಂಚೈಸಿ ಬದಲಿಯಾಗಿ ಮೂವರು ಆಟಗಾರರನ್ನು ಆಯ್ಕೆ ಮಾಡಿಕೊಂಡಿದೆ.

ಮುಂಬೈ ಇಂಡಿಯನ್ಸ್ ತಂಡದ ಆಲ್‌ರೌಂಡರ್ ವಿಲ್ ಜಾಕ್ಸ್ ಲೀಗ್ ಪಂದ್ಯದ ಮುಕ್ತಾಯದ ಬೆನ್ನಲ್ಲೇ ತವರಿಗೆ ಹಿಂತಿರುಗಲಿದ್ದಾರೆ. ವೆಸ್ಟ್ ಇಂಡೀಸ್ ವಿರುದ್ಧದ ಸರಣಿಗೆ ಆಯ್ಕೆ ಮಾಡಲಾದ ಇಂಗ್ಲೆಂಡ್ ತಂಡದಲ್ಲಿ ಜಾಕ್ಸ್ ಸ್ಥಾನ ಪಡೆದಿದ್ದು, ಹೀಗಾಗಿ ಐಪಿಎಲ್‌ನ ಪ್ಲೇಆಫ್ ಪಂದ್ಯಗಳಿಗೆ ಅವರು ಲಭ್ಯರಿರುವುದಿಲ್ಲ. ಇದೀಗ ಅವರ ಬದಲಿಗೆ ಮುಂಬೈ ಇಂಡಿಯನ್ಸ್ ಫ್ರಾಂಚೈಸಿ ಇಂಗ್ಲೆಂಡ್‌ನ ವಿಕೆಟ್ ಕೀಪರ್ ಬ್ಯಾಟರ್ ಜಾನಿ ಬೈರ್‌ಸ್ಟೋವ್ ಅವರನ್ನು ಬದಲಿಯಾಗಿ ಆಯ್ಕೆ ಮಾಡಿಕೊಂಡಿದೆ.

ಮುಂಬೈ ಇಂಡಿಯನ್ಸ್ ತಂಡದಲ್ಲಿರುವ ಸೌತ್ ಆಫ್ರಿಕಾದ ವಿಕೆಟ್ ಕೀಪರ್ ಬ್ಯಾಟರ್ ರಯಾನ್ ರಿಕೆಲ್ಟನ್ ಕೂಡ ಈ ವಾರ ತವರಿಗೆ ಹಿಂತಿರುಗಲಿದ್ದಾರೆ.

ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ಪಂದ್ಯಕ್ಕೆ ಆಯ್ಕೆ ಮಾಡಲಾದ ಸೌತ್ ಆಫ್ರಿಕಾ ತಂಡದಲ್ಲಿ ರಿಕೆಲ್ಟನ್ ಸ್ಥಾನ ಪಡೆದಿದ್ದು, ಹೀಗಾಗಿ ಅವರು ರಾಷ್ಟ್ರೀಯ ತಂಡವನ್ನು ಕೂಡಿಕೊಳ್ಳಬೇಕಿದೆ. ಹೀಗಾಗಿ ರಿಕೆಲ್ಟನ್ ಸಹ ಪ್ಲೇಆಫ್ ಪಂದ್ಯಗಳಿಗೆ ಲಭ್ಯರಿರುವುದಿಲ್ಲ.

ಇದೀಗ ರಯಾನ್ ರಿಕೆಲ್ಟನ್ ಬದಲಿಗೆ ಮುಂಬೈ ಇಂಡಿಯನ್ಸ್ ಫ್ರಾಂಚೈಸಿ ಇಂಗ್ಲೆಂಡ್ ಆಟಗಾರ ರಿಚರ್ಡ್ ಗ್ಲೀಸನ್ ಅವರನ್ನು ಆಯ್ಕೆ ಮಾಡಿಕೊಂಡಿದೆ. ಮುಂಬೈ ಇಂಡಿಯನ್ಸ್ ತಂಡದ ವೇಗಿ ಕಾರ್ಬಿನ್ ಬಾಷ್ ಕೂಡ ಐಪಿಎಲ್‌ನ ದ್ವಿತೀಯ ಸುತ್ತಿನಲ್ಲಿ ಕಾಣಿಸಿಕೊಳ್ಳುವುದಿಲ್ಲ. ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ಪಂದ್ಯಕ್ಕೆ ಆಯ್ಕೆಯಾಗಿರುವ ಬಾಷ್ ಈ ವಾರದೊಳಗೆ ಸೌತ್ ಆಫ್ರಿಕಾ ತಂಡವನ್ನು ಕೂಡಿಕೊಳ್ಳಲಿದ್ದಾರೆ. ಹೀಗಾಗಿ ಇದೀಗ ಮುಂಬೈ ಇಂಡಿಯನ್ಸ್ ಫ್ರಾಂಚೈಸಿ ಶ್ರೀಲಂಕಾದ ಚರಿತ್ ಅಸಲಂಕಾ ಅವರನ್ನು ಬದಲಿ ಆಟಗಾರನಾಗಿ ಆಯ್ಕೆ ಮಾಡಿಕೊಂಡಿದೆ. ಮುಂಬೈ ಇಂಡಿಯನ್ಸ್ ತಂಡವು ಮೇ 21 ರಂದು ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಕಣಕ್ಕಿಳಿಯಲಿದೆ.

# ಬ್ರಿಸ್ಬೇನ್‌ನಿಂದ ಆರ್‌ಸಿಬಿ ಅಭಿಮಾನಿಗಳಿಗೆ ಗುಡ್ ನ್ಯೂಸ್

## ಮೇ 29 ರಿಂದ ಪ್ಲೇಆಫ್ ಪಂದ್ಯಗಳು



ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಪ್ಲೇಆಫ್‌ಗೆ ಪ್ರವೇಶಿಸಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಅಭಿಮಾನಿಗಳಿಗೆ ಗುಡ್ ನ್ಯೂಸ್. ಆರ್‌ಸಿಬಿ ತಂಡದ ಪ್ರಮುಖ ಜೋಶ್ ಹೇಝಲ್‌ವುಡ್ ಮತ್ತೆ ಬೌಲಿಂಗ್ ಅಭ್ಯಾಸ ಆರಂಭಿಸಿದ್ದಾರೆ. ಅದು ಕೂಡ ದೂರದ ಬ್ರಿಸ್ಬೇನ್‌ನಲ್ಲಿ ಎಂಬುದು ವಿಶೇಷ.

ಅಂದರೆ ಜೋಶ್ ಹೇಝಲ್‌ವುಡ್ ಇನ್ನೂ ಸಹ ಆರ್‌ಸಿಬಿ ತಂಡವನ್ನು ಕೂಡಿಕೊಂಡಿಲ್ಲ. ಭುಜದ ನೋವಿನ ಕಾರಣ ಆಸ್ಟ್ರೇಲಿಯಾದಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಹೇಝಲ್‌ವುಡ್ ಇದೀಗ ಸಂಪೂರ್ಣ ಫಿಟ್ ಆಗಿದ್ದಾರೆ ಎಂದು ವರದಿಯಾಗಿದೆ. ಅಲ್ಲದೆ ತಮ್ಮ ಚೇತರಿಕೆ ಪ್ರಕ್ರಿಯೆಯ ಭಾಗವಾಗಿ ಬೌಲಿಂಗ್ ಅಭ್ಯಾಸವನ್ನು ಪ್ರಾರಂಭಿಸಿದ್ದಾರೆ.

ವೈದ್ಯಕೀಯ ಮೇಲ್ವಿಚಾರಣೆಯೊಂದಿಗೆ ಬೌಲಿಂಗ್ ಅಭ್ಯಾಸ ಆರಂಭಿಸಿರುವ ಜೋಶ್ ಹೇಝಲ್‌ವುಡ್ ಅವರ ಫಿಟ್‌ನೆಸ್ ಬಗ್ಗೆ ಈ ವಾರದೊಳಗೆ ಕ್ರಿಕೆಟ್ ಆಸ್ಟ್ರೇಲಿಯಾಗೆ ಮಾಹಿತಿ ನೀಡುವ ಸಾಧ್ಯತೆಯಿದೆ. ಅವರು ಸಂಪೂರ್ಣ ಫಿಟ್‌ನೆಸ್ ಸಾಧಿಸಿರುವುದು ಖಚಿತವಾದರೆ, ಮೇ 29 ರೊಳಗೆ ಆರ್‌ಸಿಬಿ ತಂಡವನ್ನು ಕೂಡಿಕೊಳ್ಳಲಿದ್ದಾರೆ. ಅಂದರೆ ಮೇ 29 ರಿಂದ ಪ್ಲೇಆಫ್ ಪಂದ್ಯಗಳು ಶುರುವಾಗಲಿದ್ದು, ಅದಕ್ಕೂ ಮುನ್ನ ಜೋಶ್ ಹೇಝಲ್‌ವುಡ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ಸೇರಿಕೊಳ್ಳುವ ಸಾಧ್ಯತೆಯಿದೆ. ಹೀಗಾಗಿ ಆರ್‌ಸಿಬಿ ತಂಡದ ಪ್ಲೇಆಫ್ ಪಂದ್ಯಗಳಲ್ಲಿ ಹೇಝಲ್‌ವುಡ್ ಕಣಕ್ಕಿಳಿಯುವುದನ್ನು ನಿರೀಕ್ಷಿಸಬಹುದು. ಮತ್ತೊಂದೆಡೆ ಆರ್‌ಸಿಬಿ ತಂಡದ ವೇಗಿ ಲುಂಗಿ ಎನ್‌ಗಿಡಿ ಪ್ಲೇಆಫ್ ಪಂದ್ಯಗಳಿಗೆ ಅಲಭ್ಯರಾಗಲಿದ್ದಾರೆ. ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್‌ಗೆ ಹೆಸರಿಸಲಾದ ಸೌತ್ ಆಫ್ರಿಕಾ ತಂಡದಲ್ಲಿ ಲುಂಗಿ ಎನ್‌ಗಿಡಿ ಸ್ಥಾನ ಪಡೆದಿದ್ದು, ಹೀಗಾಗಿ ಅವರು ಈ ವಾರ ತವರಿಗೆ ಹಿಂತಿರುಗಲಿದ್ದಾರೆ. ಇನ್ನು ಅವರ ಬದಲಿಯಾಗಿ ಆರ್‌ಸಿಬಿ ಫ್ರಾಂಚೈಸಿ ಝಿಂಬಾಬ್ವೆ ವೇಗಿ ಬ್ಲೆಸಿಂಗ್ ಮುಝರಬಾನಿಯನ್ನು ಆಯ್ಕೆ ಮಾಡಿಕೊಂಡಿದೆ.

# ವೈಭವ ಫಿಫ್ಟಿ ರಾಯಲ್ ಆಗಿ ಗೆದ್ದು ಆಟ ಮುಗಿಸಿದ ರಾಜಸ್ಥಾನ್



## 18ನೇ ಆವೃತ್ತಿಯ ಐಪಿಎಲ್‌ಗೆ ವಿದಾಯ

ವೈಭವ್ ಸೂರ್ಯವಂಶಿ ಅವರ ಅಮೋಘ ಅರ್ಧಶತಕದ ಬ್ಯಾಟಿಂಗ್ ನೆರವಿನೊಂದಿಗೆ ರಾಜಸ್ಥಾನ್ಸ್ ರಾಯಲ್ಸ್ ತಂಡವು ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ 6 ವಿಕೆಟ್‌ಗಳ ಜಯ ಸಾಧಿಸಿದೆ. ಈ ಗೆಲುವಿನೊಂದಿಗೆ ಸಂಜು ಸ್ಯಾಮ್ಸನ್ ನಾಯಕತ್ವದ ಆರ್‌ಆರ್ ತಂಡ 18ನೇ ಆವೃತ್ತಿಯ ಐಪಿಎಲ್‌ಗೆ ವಿದಾಯ ಹೇಳಿದೆ.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಚೆನ್ನೈ ಸೂಪರ್ ಕಿಂಗ್ಸ್ ನಿಗದಿತ 20 ಓವರ್‌ಗಳಲ್ಲಿ 8 ಓವರ್‌ಗಳ ನಷ್ಟಕ್ಕೆ 187 ರನ್ ಗಳಿಸಿತ್ತು. ಸ್ಪರ್ಧಾತ್ಮಕ ಮೊತ್ತದ ಗುರಿ ಬೆನ್ನಟ್ಟಿದ ರಾಜಸ್ಥಾನ 17.1 ಓವರ್‌ಗಳಲ್ಲೇ 4 ವಿಕೆಟ್ ನಷ್ಟಕ್ಕೆ 188 ರನ್ ಗಳಿಸುವ ಮೂಲಕ ಕೊನೆಯ ಪಂದ್ಯದಲ್ಲಿ ವಿಜಯಶಾಲಿಯಾಯಿತು.

ಲೀಗ್ ಸುತ್ತಿನ ಕೊನೆಯ ಪಂದ್ಯದಲ್ಲಿ ಗೆಲ್ಲಲೇಬೇಕೆಂದು ಪಣತೊಟ್ಟು ಕಣಕ್ಕಿಳಿದ ರಾಜಸ್ಥಾನ ರಾಯಲ್ಸ್ ಪಂದ್ಯದ ಮೊದಲಿನಿಂದಲೇ ಸ್ಫೋಟಕ ಪ್ರದರ್ಶನಕ್ಕೆ ಮುಂದಾಯಿತು. ಯಶಸ್ವಿ ಜೈಸ್ವಾಲ್ 19 ಎಸೆತಗಳಲ್ಲಿ 36 ರನ್, ವೈಭವ್ ಸೂರ್ಯವಂಶಿ 33 ಎಸೆತಗಳಲ್ಲಿ 57 ರನ್, ಸಂಜು ಸ್ಯಾಮ್ಸನ್ 31 ಎಸೆತಗಳಲ್ಲಿ 41 ರನ್, ರಿಯಾನ್ ಪರಾಗ್ 4 ಎಸೆತಗಳಲ್ಲಿ 3 ರನ್, ಧ್ರುವ್ ಜುರೆಲ್ 12 ಎಸೆತಗಳಲ್ಲಿ 31 ರನ್ ಹಾಗೂ ಶಿಮ್ರಾನ್ ಹೆಟ್ಮೆಯರ್ 5 ಎಸೆತಗಳಲ್ಲಿ 12 ರನ್ ಗಳಿಸಿದರು. ಚೆನ್ನೈ ಪರ ಬೌಲಿಂಗ್ ಮಾಡಿದ ರವಿಚಂದ್ರನ್ ಅಶ್ವಿನ್ 2, ಅನ್ಶುಲ್ ಕಾಂಬೋಜ್, ನೂರ್ ಅಹ್ಮದ್ ತಲಾ ಒಂದೊಂದು ವಿಕೆಟ್ ಪಡೆದರು.

ಇದಕ್ಕೂ ಮುನ್ನ ಚೆನ್ನೈ ಸೂಪರ್ ಕಿಂಗ್ಸ್ ಬ್ಯಾಟಿಂಗ್ ಮಾಡಿ, ಆಯುಷ್ ಮಾತ್ರೆ 20 ಎಸೆತಗಳಲ್ಲಿ 43 ರನ್, ಡೆವೊನ್ ಕಾನ್ವೆ 8 ಎಸೆತಗಳಲ್ಲಿ 10 ರನ್, ರವಿಚಂದ್ರನ್ ಅಶ್ವಿನ್ 8 ಎಸೆತಗಳಲ್ಲಿ 13 ರನ್, ಡೆವಾಲ್ಡ್ ಬ್ರೆವಿಸ್ 25 ಎಸೆತಗಳಲ್ಲಿ 42 ರನ್, ಶಿವಂ ದುಬೆ 32 ಎಸೆತಗಳಲ್ಲಿ 39 ರನ್, ಎಂಎಸ್ ಧೋನಿ 17 ಎಸೆತಗಳಲ್ಲಿ 16 ರನ್ ಗಳಿಸಿದರು. ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಳ್ಳುವ ಮೂಲಕ 187 ಗಳಿಸಿದರು.

# ಐಪಿಎಲ್ ಪಂದ್ಯದಿಂದ ದಿಗ್ವೇಶ್ ರಾಥಿ ಅಮಾನತು



ಇಂಡಿಯುನ್ ಪ್ರೀಮಿಯರ್ ಲೀಗ್‌ನಲ್ಲಿ ಅನುಚಿತ ವರ್ತನೆಯಿಂದಲೇ ಗಮನ ಸೆಳೆದ ಲಕ್ನೋ ಸೂಪರ್ ಜೈಂಟ್ಸ್ ತಂಡದ ಸ್ಪಿನ್ನರ್ ದಿಗ್ವೇಶ್ ರಾಥಿಯನ್ನು ಮುಂದಿನ ಪಂದ್ಯದಿಂದ ಅಮಾನತುಗೊಳಿಸಲಾಗಿದೆ. ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧದ ಪಂದ್ಯದಲ್ಲಿ ಅಭಿಷೇಕ್ ಶರ್ಮಾ ಜೊತೆ ಜಗಳಕ್ಕಿಳಿದಿದ್ದ ರಾಥಿಗೆ ಒಂದು ಪಂದ್ಯದ ನಿಷೇಧ ಹೇರಲಾಗಿದೆ.

ಈ ನಿಷೇಧದೊಂದಿಗೆ ದಿಗ್ವೇಶ್ ರಾಥಿಗೆ ಪಂದ್ಯ ಶುಲ್ಕದ ಶೇ 50 ರಷ್ಟು ದಂಡವನ್ನು ಸಹ ವಿಧಿಸಲಾಗಿದೆ. ಸದ್ಯ ಅವರ ಡಿಮೆರಿಟ್ ಪಾಯಿಂಟ್ 5 ಕ್ಕೇರಿದ್ದು, ಹೀಗಾಗಿ ಗುಜರಾತ್ ಟೈಟಾನ್ಸ್ ವಿರುದ್ಧದ ಪಂದ್ಯದಿಂದ ದಿಗ್ವೇಶ್‌ನನ್ನು ಹೊರಗಿಡುವಂತೆ ಲಕ್ನೋ ಸೂಪರ್ ಜೈಂಟ್ಸ್ ತಂಡಕ್ಕೆ ಸೂಚಿಸಲಾಗಿದೆ. ಇದಕ್ಕೂ ಮುನ್ನ ಪಂಜಾಬ್ ಕಿಂಗ್ಸ್ ವಿರುದ್ಧದ ಪಂದ್ಯದಲ್ಲಿ ಪ್ರಿಯಾಂಶ್ ಆರ್ಯ ಅವರನ್ನು ಔಟ್ ಮಾಡಿದ ಬಳಿಕ ದಿಗ್ವೇಶ್ ರಾಥಿ ನೋಟ್‌ಬುಕ್ ಸೆಲೆಬ್ರೇಷನ್‌ನೊಂದಿಗೆ ಬ್ಯಾಟರ್‌ನನ್ನು ಕೆಣಕಿದ್ದರು. ಈ ಅನುಚಿತ ವರ್ತನೆಗೆ ದಿಗ್ವೇಶ್‌ಗೆ ಪಂದ್ಯ ಶುಲ್ಕದ ಶೇ.25 ರಷ್ಟು ದಂಡ ವಿಧಿಸಲಾಗಿತ್ತು. ಅಲ್ಲದೆ ಒಂದು ಡಿಮೆರಿಟ್ ಪಾಯಿಂಟ್ ನೀಡಲಾಗಿತ್ತು. ಇದಾದ ಬಳಿಕ ಮುಂಬೈ ಇಂಡಿಯನ್ಸ್ ವಿರುದ್ಧದ ಪಂದ್ಯದಲ್ಲಿ ನಮನ್ ಧೀರ್ ಅವರನ್ನು ಕ್ಲೀನ್ ಬೌಲ್ಡ್ ಮಾಡಿದ ಬಳಿಕ ದಿಗ್ವೇಶ್ ನೋಟ್‌ಬುಕ್ ಸೆಲೆಬ್ರೇಷನ್ ಮಾಡಿದ್ದರು. ಈ ಆಕ್ರೋಶಭರಿತ ಸಂಭ್ರಮಕ್ಕೆ ರಾಥಿಗೆ ಪಂದ್ಯ ಶುಲ್ಕದ ಶೇ.50 ರಷ್ಟು ದಂಡ ವಿಧಿಸಿ, 2 ಡಿಮೆರಿಟ್ ಪಾಯಿಂಟ್ ನೀಡಲಾಗಿತ್ತು. ಇದೀಗ ಮೂರನೇ ಬಾರಿಗೆ ದಿಗ್ವೇಶ್ ರಾಥಿ ಐಪಿಎಲ್‌ನ ನೀತಿ ಸಂಹಿತೆಯನ್ನು ಉಲ್ಲಂಘಿಸಿದ್ದಾರೆ. ಇದನ್ನು ಗಂಭೀರವಾಗಿ ಪರಿಗಣಿಸಿರುವ ಬಿಸಿಸಿಐ, ದಿಗ್ವೇಶ್ ರಾಥಿಗೆ ಒಂದು ಪಂದ್ಯದ ನಿಷೇಧ ಹೇರಿದ್ದಾರೆ. ಇದರ ಜೊತೆಗೆ ಪಂದ್ಯ ಶುಲ್ಕದ ಶೇ.50 ರಷ್ಟು ದಂಡ ವಿಧಿಸಿ, 2 ಡಿಮೆರಿಟ್ ಪಾಯಿಂಟ್ ನೀಡಿದ್ದಾರೆ.

ಇನ್ನು ದಿಗ್ವೇಶ್ ರಾಥಿ ಜೊತೆ ಮೈದಾನದಲ್ಲೇ ಜಗಳಕ್ಕಿಳಿದಿದ್ದ ಸನ್‌ರೈಸರ್ಸ್ ಹೈದರಾಬಾದ್ ತಂಡದ ಆರಂಭಿಕ ಆಟಗಾರ ಅಭಿಷೇಕ್ ಶರ್ಮಾಗೆ ಪಂದ್ಯ ಶುಲ್ಕದ ಶೇ.25 ರಷ್ಟು ದಂಡ ವಿಧಿಸಲಾಗಿದೆ. ಅತ್ತ ಒಂದು ಪಂದ್ಯದ ನಿಷೇಧಕ್ಕೆ ಒಳಗಾಗಿರುವ ದಿಗ್ವೇಶ್ ರಾಥಿ ಗುಜರಾತ್ ಟೈಟಾನ್ಸ್ ವಿರುದ್ಧದ ಪಂದ್ಯದಿಂದ ಹೊರಬಿದ್ದಿದ್ದಾರೆ.

# ಹೊಸ ಇತಿಹಾಸ ಬರೆದ ಶ್ರೇಯಸ್ ಅಯ್ಯರ್



ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಬರೋಬ್ಬರಿ 11 ವರ್ಷಗಳ ಬಳಿಕ ಪಂಜಾಬ್ ಕಿಂಗ್ಸ್ ಪ್ಲೇಆಫ್ ಪ್ರವೇಶಿಸಿದೆ. ಇದಕ್ಕೂ ಮುನ್ನ ಪಂಜಾಬ್ ಪಡೆ ಪ್ಲೇಆಫ್ ಆಡಿದ್ದು 2014 ರಲ್ಲಿ. ಇದಾದ ಬಳಿಕ ಒಮ್ಮೆಯೂ ಟಾಪ್-4 ನಲ್ಲಿ ಸ್ಥಾನ ಪಡೆಯುವಲ್ಲಿ ಯಶಸ್ವಿಯಾಗಿರಲಿಲ್ಲ. ಆದರೆ ಈ ಬಾರಿ ಶ್ರೇಯಸ್ ಅಯ್ಯರ್ ಮುಂದಾಳತ್ವದಲ್ಲಿ ಕಣಕ್ಕಿಳಿದಿರುವ ಪಂಜಾಬ್ ಕಿಂಗ್ಸ್ ಲೀಗ್ ಹಂತದ ಪಂದ್ಯಗಳ ಮುಕ್ತಾಯಕ್ಕೂ ಮುನ್ನವೇ ಪ್ಲೇಆಫ್‌ನಲ್ಲಿ ತನ್ನ ಸ್ಥಾನ ಖಚಿತಪಡಿಸಿಕೊಂಡಿದೆ. ಇದರೊಂದಿಗೆ ಇಂಡಿಯನ್ ಪ್ರೀಮಿಯರ್ ಲೀಗ್ ಇತಿಹಾಸದಲ್ಲಿ ಮೂರು ತಂಡಗಳನ್ನು ಪ್ಲೇಆಫ್‌ಗೇರಿಸಿದ ಮೊದಲ ನಾಯಕ ಎಂಬ ದಾಖಲೆಯೊಂದು ಶ್ರೇಯಸ್ ಅಯ್ಯರ್ ಪಾಲಾಗಿದೆ. ಐಪಿಎಲ್‌ನಲ್ಲಿ ಶ್ರೇಯಸ್ ಅಯ್ಯರ್ ಈವರೆಗೆ ಮೂರು ತಂಡಗಳನ್ನು ಮುನ್ನಡೆಸಿದ್ದಾರೆ. ಈ ಮೂರು ತಂಡಗಳು ಕೂಡ ಪ್ಲೇಆಫ್‌ಗೆ ಪ್ರವೇಶಿಸಿದೆ ಎಂಬುದೇ ವಿಶೇಷ.

2019 ಮತ್ತು 2020 ರಲ್ಲಿ ಶ್ರೇಯಸ್ ಅಯ್ಯರ್ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಮುನ್ನಡೆಸಿದ್ದರು. ಈ ವೇಳೆ ಡೆಲ್ಲಿ ಪಡೆ ಪ್ಲೇಆಫ್‌ಗೇರಿತ್ತು. ಅದರಲ್ಲೂ 2020 ರಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಫೈನಲ್‌ಗೇರಿಸುವಲ್ಲಿ ಶ್ರೇಯಸ್ ಅಯ್ಯರ್ ಪ್ರಮುಖ ಪಾತ್ರವಹಿಸಿದ್ದರು.

**Printed by : A. BALACHANDRA, Printed at : RAJHANS ENTERPRISES** No. 134, 4th Main Road, Industrial Town, Rajajinagar, Bengaluru - 560044, Karnataka. **Owned By, Published By, Editor :T. HOMBE GOWDA,** No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
**ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966**